ಮಂಗಳವಾರ, ಅಕ್ಟೋಬರ್ 19, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 290 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಬೇಸರಕ್ಕೆ ಮದ್ದು ಕ್ರಿಯಾಶೀಲತೆ, ಕಾಯಕನಿಷ್ಠೆ. ಅದು ನಮ್ಮದಾಗಲಿ. ಬೇಸರವಾದಾಗ ಕತ್ತೆತ್ತಿ ನೇಸರ ನೋಡೋಣ, ಬದುಕಿಗೆ ಭರವಸೆಗಳನ್ನು, ಉತ್ಸಾಹವನ್ನು ತುಂಬಿಕೊಳ್ಳೋಣ.



ಸೆನ್ಸೆಕ್ಸ್	ನಿಫ್ಟಿ	₹/$
61,765 ▲	18,477 ▲	75.35 ▼

20 ತಿಂಗಳ ಬಳಿಕ ಶಾಲೆಗಳತ್ತ ಚಿಣ್ಣರು • 1 ರಿಂದ 5– ಭೌತಿಕ ತರಗತಿ

ಅ.25 ರಿಂದ ಶಾಲೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಶಾಲೆಗಳಲ್ಲಿ ಇದೇ 25ರಿಂದ ಪ್ರಾಥಮಿಕ ಹಂತದಿಂದಲೇ (1ರಿಂದ 5) ಭೌತಿಕ ತರಗತಿಗಳನ್ನು ಆರಂಭಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಆ ಮೂಲಕ, ಕೋವಿಡ್ ಕಾರಣಕ್ಕೆ 20 ತಿಂಗಳುಗಳಿಂದ ದೂರ ಉಳಿದಿದ್ದ ಚಿಣ್ಣರು ಮರಳಿ ಶಾಲೆಯತ್ತ ಬರಲು ಮುಹೂರ್ತ ನಿಗದಿಯಾಗಿದೆ.

ರಾಜ್ಯದಲ್ಲಿನ ಸದ್ಯದ ಕೋವಿಡ್ ಪರಿಸ್ಥಿತಿ ಅವಲೋಕಿಸಿದ ತಾಂತ್ರಿಕ ಸಲಹಾ ಸಮಿತಿ, ಸೋಂಕು ದೃಢ ಪ್ರಮಾಣ ಗಣನೀಯ ಪ್ರಮಾಣದಲ್ಲಿ ಇಳಿಕೆ ಆಗಿರುವುದರಿಂದ ಒಂದನೇ ತರಗತಿಯಿಂದಲೇ ಶಾಲೆಗಳನ್ನು ಆರಂಭಿಸಲು ಒಪ್ಪಿಗೆ ನೀಡಿದೆ.

‘ಕೋವಿಡ್ ಮಾರ್ಗಸೂಚಿ ಮತ್ತು ಇಲಾಖೆ ಹೊರಡಿಸಲಿರುವ ಪ್ರಮಾಣಿತ ಕಾರ್ಯಾಚರಣಾ ವಿಧಾನ (ಎಸ್‌ಒಪಿ) ಕಟ್ಟುನಿಟ್ಟಾಗಿ ಪಾಲಿಸಿ ತರಗತಿಗಳನ್ನು ಆರಂಭಿಸಲಾಗುವುದು’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಹಲವು ತಾಲ್ಲೂಕುಗಳಲ್ಲಿ ಕೋವಿಡ್ ದೃಢ ಪ್ರಮಾಣ ಶೂನ್ಯವಿದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಪ್ರಾಥಮಿಕ ಹಂತದಿಂದ ಶಾಲೆಗಳನ್ನು ಆರಂಭಿಸಲು ನಿರ್ಧರಿಸಲಾಗಿದೆ. ಈಗಾಗಲೇ ದಿನ ಬಿಟ್ಟು ದಿನ ಅಂಗನವಾಡಿಗಳು ನಡೆಯುತ್ತಿವೆ. ಅದೇ ಮಾದರಿಯಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು (ಎಲ್‌ಕೆಜಿ, ಯುಕೆಜಿ) ಆರಂಭಿಸಲು ಚಿಂತನೆ ನಡೆದಿದೆ’ ಎಂದರು.



ಯಾವುದೇ ಕಾರಣಕ್ಕೂ ಪಠ್ಯ ಕಡಿತ ಮಾಡುವುದಿಲ್ಲ. ಎಲ್ಲ ಪಠ್ಯಗಳನ್ನು ನಿಗದಿತ ಅವಧಿಯ ಒಳಗೆ ಮುಗಿಸಲು ನಾವು ಪ್ರಯತ್ನಿಸುತ್ತೇವೆ

ಬಿ.ಸಿ. ನಾಗೇಶ್
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ

10ನೇ ಪುಟ ನೋಡಿ

ಶಿಕ್ಷಕರ ವರ್ಗಾವಣೆ: ತಡೆಯಾಜ್ಞೆ ತೆರವು

ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ (2020-21) ವರ್ಗಾವಣೆ ಪ್ರಕ್ರಿಯೆಗೆ ನೀಡಿದ್ದ ತಡೆಯಾಜ್ಞೆಯನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ತೆರವುಗೊಳಿಸಿದೆ. ಕೆಎಟಿ ಆದೇಶದ ಪ್ರತಿ ಪಡೆದು ವಾರದೊಳಗೆ ಪರಿಷ್ಕೃತ ವರ್ಗಾವಣೆ ಅಧಿಸೂಚನೆ ಹೊರಡಿಸಲು ಶಿಕ್ಷಣ ಇಲಾಖೆ ನಿರ್ಧರಿಸಿದೆ.

‘ಶಿಕ್ಷಕರ ವರ್ಗಾವಣೆ ಕಾಯ್ದೆ-2020’ ಗೆ ತಿದ್ದುಪಡಿ ತಂದು, 2019-20ನೇ ಸಾಲಿನಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೆ ಒಳಗಾದವರಿಗೆ ಕೌನ್ಸೆಲಿಂಗ್ ವೇಳೆ ವಿಶೇಷ ಆದ್ಯತೆ ನೀಡಿ ಜೂನ್ 30 ರಂದು ಪರಿಷ್ಕೃತ ವರ್ಗಾವಣೆ ಅಧಿಸೂಚನೆ ಹೊರಡಿಸಲಾಗಿತ್ತು. ಅದನ್ನು ಪ್ರಶ್ನಿಸಿ 2016-17ನೇ ಸಾಲಿನಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೆ ಒಳಗಾಗಿದ್ದ ಶಿಕ್ಷಕರು ಕೆಎಟಿ ಮೆಟ್ಟಿಲೇರಿದ್ದರು. ‘ತಮಗೂ ವಿಶೇಷ ಆದ್ಯತೆ ನೀಡಬೇಕು’ ಎಂದು ಮನವಿ ಮಾಡಿದ್ದರು. ಅರ್ಜಿಯನ್ನು ಪರಿಗಣಿಸಿದ್ದ ನ್ಯಾಯಮಂಡಳಿ, ವರ್ಗಾವಣೆ ಪ್ರಕ್ರಿಯೆಗೆ ತಡೆ ನೀಡಿತ್ತು. ಸೋಮವಾರ ಪ್ರಕರಣದ ವಾದ ಆಲಿಸಿದ ಕೆಎಟಿ, ತಡೆಯಾಜ್ಞೆ ತಂದಿರುವ ಶಿಕ್ಷಕರ ಪ್ರಕರಣಗಳನ್ನು ಬಾಕಿ ಇಟ್ಟು, ಸಾಮಾನ್ಯ ವರ್ಗಾವಣೆ ಪ್ರಕ್ರಿಯೆ ಆರಂಭಿಸಲು ನಿರ್ದೇಶನ ನೀಡಿದೆ. ವರ್ಗಾವಣೆ ಬಯಸಿ 75 ಸಾವಿರಕ್ಕೂ ಹೆಚ್ಚು ಶಿಕ್ಷಕರು ಅರ್ಜಿ ಸಲ್ಲಿಸಿದ್ದಾರೆ.

ಈಜುಕೊಳ ತೆರೆಯಲು ಷರತ್ತುಬದ್ಧ ಅನುಮತಿ

ಪ್ರತಿ ತಂಡದಲ್ಲಿ ಶೇ 50ರಷ್ಟು ಜನರಿಗೆ ಮಾತ್ರ ಅವಕಾಶ ಕಲ್ಪಿಸಿ ಈಜುಕೊಳಗಳನ್ನು ತೆರೆಯಲು ರಾಜ್ಯ ಸರ್ಕಾರ ಅನುಮತಿ ನೀಡಿದೆ. ರೋಗಲಕ್ಷಣ ಇಲ್ಲದ, ಎರಡೂ ಡೋಸ್ ಲಸಿಕೆ ಹಾಕಿಸಿಕೊಂಡ ಪ್ರಮಾಣಪತ್ರ ಹೊಂದಿದವರಿಗೆ ಮಾತ್ರ ಪ್ರವೇಶ ನೀಡಬೇಕು. ಸೋಂಕು ಲಕ್ಷಣದ ತಪಾಸಣೆಗೆ ಪ್ರವೇಶದ್ವಾರದಲ್ಲಿ ವ್ಯವಸ್ಥೆ ಇರಬೇಕು. ಪ್ರತಿ ತಂಡದ ಈಜು ಅಭ್ಯಾಸ ಮುಗಿದ ಬಳಿಕ ವಿಶ್ರಾಂತಿ ಕೊಠಡಿಯೂ ಸೇರಿದಂತೆ ಇಡೀ ಪ್ರದೇಶವನ್ನು ಸ್ವಚ್ಛಗೊಳಿಸಬೇಕು ಎಂದೂ ಸರ್ಕಾರ ಆದೇಶದಲ್ಲಿ ತಿಳಿಸಿದೆ.

ಕೇರಳ: ಜಲಾಶಯಗಳ ಸುತ್ತ ರೆಡ್ ಅಲರ್ಟ್

ಪ್ರಜಾವಾಣಿ ವಾರ್ತೆ

ತಿರುವನಂತಪುರ/ನವದೆಹಲಿ: ಉತ್ತರ, ಮಧ್ಯ ಮತ್ತು ಈಶಾನ್ಯ ಭಾರತದ ಹಲವೆಡೆ ಸೋಮವಾರ ಭಾರಿ ಮಳೆಯಾಗಿದೆ. ದೆಹಲಿ ಮತ್ತು ಮಧ್ಯಪ್ರದೇಶದ ಹಲವೆಡೆ ಪ್ರವಾಹ ಸ್ಥಿತಿ ತಲೆದೋರಿದೆ. ಕೇರಳದಲ್ಲಿ ಸೋಮವಾರ ಮಳೆ ಸ್ವಲ್ಪ ಬಿಡುವು ಕೊಟ್ಟಿದ್ದರೂ, ಪ್ರಮುಖ ಜಲಾಶಯಗಳಿಂದ ನೀರು ಹೊರಬಿಡುತ್ತಿರುವ ಕಾರಣ ಪ್ರವಾಹದ ಆತಂಕ ಎದುರಾಗಿದೆ.

ಕೇರಳದ ಎಲ್ಲಾ ಪ್ರಮುಖ ಜಲಾಶಯಗಳ ಸಂಗ್ರಹ ಗರಿಷ್ಠಮಟ್ಟ ಮುಟ್ಟಿದೆ. ರಾಜ್ಯದ 10 ಜಲಾಶಯಗಳ ಅಚ್ಚುಕಟ್ಟು ಪ್ರದೇಶಗಳಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ. ವಿವಿಧ ಜಲಾಶಯಗಳ ಕೆಳಭಾಗಗಳಲ್ಲಿ ನೆಲೆಸಿರುವ ಜನರನ್ನು ಮುಂಜಾಗ್ರತಾ ಕ್ರಮವಾಗಿ ಸ್ಥಳಾಂತರ ಮಾಡಲಾಗಿದೆ. ಪಂಪಾ ನದಿಯಲ್ಲಿ ನೀರಿನ ಹರಿವು ಅಪಾಯಕಾರಿ ಮಟ್ಟ ಮುಟ್ಟಿದೆ. ಶಬರಿಮಲೆ ಯಾತ್ರೆಯನ್ನು ಸ್ಥಗಿತಗೊಳಿಸಲಾಗಿದೆ.

ಒಡಿಶಾ, ಮಧ್ಯಪ್ರದೇಶ, ಜಾರ್ಖಂಡ್, ಛತ್ತೀಸಗಡ, ಉತ್ತರ ಪ್ರದೇಶ, ಬಿಹಾರ, ದೆಹಲಿ, ರಾಜಸ್ಥಾನ, ಪಶ್ಚಿಮ ಬಂಗಾಳ, ಉತ್ತರಾಖಂಡ, ಹಿಮಾಚಲ ಪ್ರದೇಶ, ಜಮ್ಮು-ಕಾಶ್ಮೀರ ಮತ್ತು ಈಶಾನ್ಯ ಭಾರತದ ರಾಜ್ಯಗಳಲ್ಲಿ ಸೋಮವಾರ ಭಾರಿ ಮಳೆಯಾಗಿದೆ.



ಕೇರಳದ ಇಡುಕ್ಕಿ ಜಿಲ್ಲೆಯ ಕೊಕ್ಕಯಾರ್‌ನಲ್ಲಿ ಭೂಕುಸಿತ ಸಂಭವಿಸಿರುವ ಪ್ರದೇಶದಲ್ಲಿ ಮಣ್ಣಿನಡಿಯಿಂದ ಮೃತದೇಹವನ್ನು ಹೊರತೆಗೆಯಲಾಯಿತು –ರಾಯಿಟರ್ಸ್ ಚಿತ್ರ

ಇನ್ನಷ್ಟು ಸುದ್ದಿಗಳು 6

ಚಿನಕುರಳಿ

ಪ್ರಕಾಶ್ ಶೆಟ್ಟಿ



ದೂರವಾಣಿ ಕದ್ದಾಲಿಕೆ ಪ್ರಕರಣ ಹೆಚ್ಚಿನ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ನಡೆದಿದ್ದ ದೂರವಾಣಿ ಕದ್ದಾಲಿಕೆ ಪ್ರಕರಣದ ತನಿಖೆಯನ್ನು ಕೈಬಿಡುವಂತೆ ಸಿಬಿಐ ಸಲ್ಲಿಸಿದ್ದ ಅಂತಿಮ ವರದಿಯನ್ನು ತಿರಸ್ಕರಿಸಿರುವ ವಿಶೇಷ ನ್ಯಾಯಾಲಯ, ಹೆಚ್ಚಿನ ತನಿಖೆ ನಡೆಸುವಂತೆ ಸಿಬಿಐಗೆ ಸೋಮವಾರ ಆದೇಶಿಸಿದೆ.

ದೂರವಾಣಿ ಕದ್ದಾಲಿಕೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವರ್ಗಾಯಿಸಲಾಗಿತ್ತು. ಕದ್ದಾಲಿಕೆ ಕುರಿತು ಪ್ರಾಥಮಿಕ ತನಿಖೆ ನಡೆಸಿದ್ದ ಸಿಬಿಐ, ಬೆಂಗಳೂರು ನಗರದ ಹಿಂದಿನ ಪೊಲೀಸ್ ಕಮಿಷನರ್ ಭಾಸ್ಕರ್ ರಾವ್ ಮತ್ತು ಫರಾಜ್ ಎಂಬುವವರ ನಡುವಿನ ಸಂಭಾಷಣೆಯ ಆಡಿಯೊ ಸೋರಿಕೆ ಮಾಡಿದ್ದ ಕುರಿತು ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಿತ್ತು. ಆಡಿಯೊ ಸೋರಿಕೆ ಪ್ರಕರಣದ ತನಿಖೆ ಅಂತ್ಯಗೊಳಿಸುವಂತೆ ಸಿಬಿಐ ಎಸ್‌ಪಿ ಕಿರಣ್ ಎಸ್. ನ್ಯಾಯಾಲಯಕ್ಕೆ ಜೂನ್ 30ರಂದು ವರದಿ ಸಲ್ಲಿಸಿದ್ದರು.

ಸಿಬಿಐ ವರದಿಯನ್ನು ಪ್ರಶ್ನಿಸಿ ತಕರಾರು ಅರ್ಜಿ ಸಲ್ಲಿಸಿದ್ದ ಭಾಸ್ಕರ್ ರಾವ್, ಕದ್ದಾಲಿಕೆ ಮತ್ತು ಆಡಿಯೊ ಸೋರಿಕೆ ಎರಡನ್ನೂ ಸೇರಿಸಿಕೊಂಡು ತನಿಖೆ ನಡೆಸುವಂತೆ ಕೋರಿದ್ದರು. ಸಿಬಿಐ ವರದಿ ಪ್ರಶ್ನಿಸಿ ಮೂರನೇ ವ್ಯಕ್ತಿಯೊಬ್ಬರೂ ಅರ್ಜಿ ಸಲ್ಲಿಸಿದ್ದರು. ಈ ಎಲ್ಲ ಅರ್ಜಿಗಳ ವಿಚಾರಣೆ ಪೂರ್ಣಗೊಳಿಸಿದ ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶರು ಸೋಮವಾರ ಆದೇಶ ಪ್ರಕಟಿಸಿದರು.

‘ಸಂತ್ರಸ್ತ (ಭಾಸ್ಕರ್ ರಾವ್) ಮತ್ತು ಮೂರನೇ ವ್ಯಕ್ತಿ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಸಿಬಿಐ ಸಲ್ಲಿಸಿದ್ದ ‘ಬಿ’ ವರದಿಯನ್ನೂ ತಿರಸ್ಕರಿಸಲಾಗಿದೆ. ಹೆಚ್ಚಿನ ತನಿಖೆ ನಡೆಸಿ, ನ್ಯಾಯಾಲಯಕ್ಕೆ ವರದಿ ಸಲ್ಲಿಸುವಂತೆ ಸಿಬಿಐ ಅಧಿಕಾರಿಗೆ ನಿರ್ದೇಶನ ನೀಡಲಾಗಿದೆ. ಈ ಸಂಬಂಧ ಸಿಬಿಐಗೆ ಸೂಕ್ತ ನಿರ್ದೇಶನ ಕಳುಹಿಸಬೇಕು’ ಎಂದು ನ್ಯಾಯಾಧೀಶರು ಆದೇಶದಲ್ಲಿ ತಿಳಿಸಿದ್ದಾರೆ.

ಡೇರಾ ಸಚ್ಚಾ ಮುಖ್ಯಸ್ಥನಿಗೆ ಜೀವಾವಧಿ ಶಿಕ್ಷೆ

ಚಂಡೀಗಡ (ಪಿಟಿಐ): ಡೇರಾ ಸಚ್ಚಾ ಸೌದಾ ವ್ಯವಸ್ಥಾಪಕ ರಂಜಿತ್ ಸಿಂಗ್ ಕೊಲೆ ಪ್ರಕರಣದಲ್ಲಿ ಸಂಘಟನೆ ಮುಖ್ಯಸ್ಥ ಗುರ್ಮಿತ್ ರಾಮ್ ರಹೀಮ್ ಸಿಂಗ್ ಹಾಗೂ ಇತರ ನಾಲ್ವರಿಗೆ ಇಲ್ಲಿನ ವಿಶೇಷ ಸಿಬಿಐ ಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿದೆ.



ಕೃಷ್ಣ ಲಾಲ್, ಜಸ್ಬೀರ್‌ಸಿಂಗ್, ಅವತಾರ್ ಸಿಂಗ್ ಹಾಗೂ ಸಬ್ದಿಲ್ ಶಿಕ್ಷೆಗೆ ಒಳಗಾದ ಇತರ ಅಪರಾಧಿಗಳು.

ರಂಜಿತ್ ಸಿಂಗ್ ಸಹ ಡೇರಾ ಸಚ್ಚಾದ ಅನುಯಾಯಿ ಆಗಿದ್ದರು. ಹರಿಯಾಣದ ಕುರುಕ್ಷೇತ್ರ ಜಿಲ್ಲೆಯ ಖಾನಪುರ– ಕೊಲಿಯಾನ್ ಗ್ರಾಮದಲ್ಲಿ 2002ರ ಜುಲೈ 10ರಂದು ಅವರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು.

ಕಾಶ್ಮೀರ: ಉಗ್ರರಿಂದ ಹತ್ಯೆ, ಹೊರಗಿನವರಿಗೆ ಭಾರಿ ಭೀತಿ

ವಲಸಿಗರೇ ಗುರಿ; ದಿಕ್ಕೆಟ್ಟ ಕಾರ್ಮಿಕರು

ಪ್ರಜಾವಾಣಿ ವಾರ್ತೆ

ಶ್ರೀನಗರ: ಪದೇ ಪದೇ ನಡೆಯುತ್ತಿರುವ ದಾಳಿಗಳಿಂದಾಗಿ ಕೇಂದ್ರಾಡಳಿತ ಪ್ರದೇಶ ಕಾಶ್ಮೀರದಲ್ಲಿರುವ ವಲಸಿಗರು ಆತಂಕಗೊಂಡಿದ್ದಾರೆ ಮತ್ತು ದ್ವಂದ್ವದಲ್ಲಿದ್ದಾರೆ. ಮುಂದೇನು ಮಾಡಬೇಕು ಎಂಬುದು ತಿಳಿಯದೆ ದಿಕ್ಕೆಟ್ಟಿದ್ದಾರೆ.

ಕಾಶ್ಮೀರ ಕಣಿವೆಯನ್ನು ತಕ್ಷಣವೇ ಬಿಟ್ಟು ಹೊರಡಬೇಕು ಎಂದು ಕೆಲವರು ನಿರ್ಧರಿಸಿದ್ದಾರೆ. ಈಗಾಗಲೇ ಅರ್ಧದಲ್ಲಿರುವ ಕೆಲಸ ಮುಗಿಸಿ ಲೆಕ್ಕ ಚುಕ್ತಾ ಮಾಡಿ ಹೊರಡಬೇಕು ಎಂಬುದು ಇನ್ನೂ ಕೆಲವರ ಯೋಚನೆ. ಅಕ್ಟೋಬರ್‌ನಲ್ಲಿ ಐವರು ವಲಸಿಗ ಕಾರ್ಮಿಕರನ್ನು ಉಗ್ರರು ಗುಂಡಿಟ್ಟು ಕೊಂದಿದ್ದಾರೆ. ಅವರಲ್ಲಿ ನಾಲ್ವರು ಮುಸ್ಲಿಮೇತರರು ಮತ್ತು ಒಬ್ಬ ಮುಸ್ಲಿಂ. ಎಲ್ಲ ಹತ್ಯೆಗಳು ಶ್ರೀನಗರ ಮತ್ತು ದಕ್ಷಿಣ ಕಾಶ್ಮೀರದಲ್ಲಿ ನಡೆದಿವೆ.



ಶ್ರೀನಗರದ ಹೊರವಲಯದ ರೈಲು ನಿಲ್ದಾಣವೊಂದರಲ್ಲಿ ವಲಸೆ ಕಾರ್ಮಿಕರು ತಮ್ಮ ಊರುಗಳಿಗೆ ಹೋಗಲು ಸೋಮವಾರ ರೈಲುಗಳಿಗೆ ಕಾದಿದ್ದ ದೃಶ್ಯ –ರಾಯಿಟರ್ಸ್ ಚಿತ್ರ

ಕಾಶ್ಮೀರಿ ಪಂಡಿತ ಸಮುದಾಯದ ಗಣ್ಯ ಉದ್ಯಮಿ ಸೇರಿ ಹಿಂದೂ ಧರ್ಮದ ಮೂವರ ಹತ್ಯೆ ಈ ತಿಂಗಳಲ್ಲಿಯೇ ಆಗಿದೆ. ಕಾಶ್ಮೀರದ ಅಲ್ಪಸಂಖ್ಯಾತ ಸಮುದಾಯ ಮತ್ತು ವಲಸಿಗ ಕಾರ್ಮಿಕರಲ್ಲಿಯೂ ಕಳವಳ ಮನೆ ಮಾಡಿದೆ. ಕಾಶ್ಮೀರದ ಬಹುಸಂಖ್ಯಾತ ಮುಸ್ಲಿಮರಲ್ಲಿಯೂ ತಮ್ಮ ಸುರಕ್ಷೆಯ ಬಗ್ಗೆ ಆತಂಕ ಇದೆ.

‘ನಾವು ಆಘಾತಗೊಂಡಿದ್ದೇವೆ. ಇಂತಹುದೊಂದು ದುರಂತ ನಮಗೆ ಘಟಿಸಬಹುದು ಎಂದು ಕಲ್ಪನೆಯನ್ನೇ ಮಾಡಿರಲಿಲ್ಲ’ ಎಂದು ವಲಸಿಗರ ಗುಂಪೊಂದು ‘ಪ್ರಜಾವಾಣಿ’ಗೆ ಪ್ರತಿಕ್ರಿಯೆ ನೀಡಿದೆ. ಇವರೆಲ್ಲರೂ ಶ್ರೀನಗರದ ಬಿಹಾರಿ ಚೌಕ್‌ನ ಹವಾಲ್ ಎಂಬಲ್ಲಿ ನೆಲೆಸಿದ್ದರು.

ಕಾಶ್ಮೀರದಲ್ಲಿ ನಡೆಯುತ್ತಿರುವ ವಲಸೆ ಕಾರ್ಮಿಕರ ಹತ್ಯೆಗಳ ಬಗ್ಗೆ ವಲಸೆ ಕಾರ್ಮಿಕರು ಗುಂಪು ಗುಂಪುಗಳಾಗಿ ಚರ್ಚಿಸುತ್ತಿದ್ದಾರೆ. ‘ನಮಗೆ ಇನ್ನೂ ದ್ವಂದ್ವ ಇದೆ. ತಕ್ಷಣವೇ ಕಣಿವೆ ಬಿಟ್ಟು ಹೊರಡಬೇಕೇ ಅಥವಾ ಇರಬೇಕೇ ತಿಳಿಯುತ್ತಿಲ್ಲ. ಸರ್ಕಾರದಿಂದ ಯಾವುದೇ ಸೂಚನೆ ಬಂದಿಲ್ಲ. ನಾವು ವಾಪಸ್ ಹೋದರೆ ದೊಡ್ಡ ನಷ್ಟ ಎದುರಿಸಬೇಕಾಗುತ್ತದೆ. ಇಲ್ಲಿಯೇ ಉಳಿದರೆ, ನಾವು ಮುಂದಿನ ಗುರಿಯಾಗಿ ಯಾವಾಗ ಬಲಿಯಾಗುತ್ತೇವೆ ಎಂದು ಹೇಳಲಾಗದು’ ಎಂಬುದು ವಲಸೆ ಕಾರ್ಮಿಕರ ಅಳಲಾಗಿದೆ.

10ನೇ ಪುಟ ನೋಡಿ

ಮೆಮು ರೈಲು ಸಂಚಾರ ರದ್ದು

ಬೆಂಗಳೂರು: ಚನ್ನಪಟ್ಟಣ ಮತ್ತು ಕೆಂಗೇರಿಯಲ್ಲಿ ತುರ್ತು ಕಾಮಗಾರಿಗಳನ್ನು ಕೈಗೊಳ್ಳಬೇಕಿರುವುದರಿಂದ ಮೈಸೂರು–ಬೆಂಗಳೂರು ನಡುವಿನ ಮೆಮು ರೈಲು ಸಂಚಾರವನ್ನು ಎರಡು ದಿನಗಳ ಮಟ್ಟಿಗೆ ರದ್ದುಗೊಳಿಸಲಾಗಿದೆ.

ಅ.19 ಮತ್ತು 21ರಂದು ಮೈಸೂರಿನಿಂದ ಹೊರಡುವ (ಗಾಡಿ ಸಂಖ್ಯೆ 06560) ಮೆಮು ರೈಲು ಮತ್ತು ಅ.20 ಮತ್ತು 22ರಂದು ಬೆಂಗಳೂರಿನ ಕೆಎಸ್‌ಆರ್ ರೈಲು ನಿಲ್ದಾಣದಿಂದ ಹೊರಡುವ (ಗಾಡಿ ಸಂಖ್ಯೆ 06559) ರೈಲು ಸೇವೆಯನ್ನು ರದ್ದುಗೊಳಿಸಲಾಗಿದೆ ಎಂದು ನೈರುತ್ಯ ರೈಲ್ವೆ ಪ್ರಕಟಣೆ ತಿಳಿಸಿದೆ.

ಸುಮಾರು 4 ಕಿ.ಮೀ ವರೆಗೂ ಹಾಳಾಗಿರುವ ರಸ್ತೆ • ಎಚ್ಚೆತ್ತುಕೊಳ್ಳದ ಅಧಿಕಾರಿಗಳು

ಮಳೆ ಬಿದ್ದರೆ ಹೊಳೆಯಂತಾಗುವ ಮಾಗಡಿ ರಸ್ತೆ!

• ಜಿ.ಶಿವಕುಮಾರ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕಣ್ಣು ಹಾಯಿಸಿದಲ್ಲೆಲ್ಲಾ ಕಿತ್ತುಹೋಗಿರುವ ರಸ್ತೆ... ಹರಿದಿರುವ ಜಲ್ಲಿಕಲ್ಲುಗಳು... ವಾಹನಗಳು ಸಾಗುವಾಗ ಪಾದಚಾರಿಗಳ ಮುಖಕ್ಕೆ ರಾಚುವ ದೂಳು. ರಸ್ತೆಯ ಮೇಲೆ ಹರಿಯುತ್ತಿರುವ ಚರಂಡಿ ನೀರು....

ಇದ್ಯಾವುದೋ ಕುಗ್ರಾಮದ ಚಿತ್ರಣವಲ್ಲ. ಸುಂಕದಕಟ್ಟೆ ಮೂಲಕ ಹಾದು ಹೋಗುವ ಮಾಗಡಿ ಮುಖ್ಯರಸ್ತೆಯ ದುಸ್ಥಿತಿ ಇದು. ಹಳ್ಳದಂತಾಗಿರುವ ಈ ರಸ್ತೆಯಲ್ಲಿ ಜೀವ ಬಿಗಿ ಹಿಡಿದೇ ಸಾಗಬೇಕು. ಅಲ್ಪ ಮೈಮರೆತರೂ ಅಪಾಯ ಕಟ್ಟಿಟ್ಟ ಬುತ್ತಿ.

ಉದ್ಯಾನನಗರಿಯಿಂದ ಮಾಗಡಿ ತಾಲ್ಲೂಕಿಗೆ ಸಂಪರ್ಕ ಕಲ್ಪಿಸುವ ಈ ರಸ್ತೆ ಹಾಳಾಗಿ ತಿಂಗಳುಗಳೇ ಉರುಳಿವೆ. ಮಳೆ ಬಂದಾಗಲೆಲ್ಲ ಇದು ಹಳ್ಳವಾಗಿ ಮಾರ್ಪಾಡಾಗುತ್ತದೆ. ವಾಹನ ಸವಾರರು ಗುಂಡಿಗೆ ಬಿದ್ದು ಗಾಯ ಮಾಡಿಕೊಂಡ ನಿದರ್ಶನಗಳೂ ಸಾಕಷ್ಟಿವೆ. ಹೀಗಿದ್ದರೂ ರಸ್ತೆಯನ್ನು ದುರಸ್ತಿಪಡಿಸುವ ಕೆಲಸ ಆಗಿಲ್ಲ.

ಈ ಸಮಸ್ಯೆಗೆ ಶಾಶ್ವತ ಮುಕ್ತಿ ನೀಡುವಂತೆ ಸ್ಥಳೀಯರು ಹಲವು ಬಾರಿ ಅಧಿಕಾರಿಗಳಿಗೆ ದೂರು ನೀಡಿದ್ದಾರೆ. ಹೀಗಿದ್ದರೂ ಸಮಸ್ಯೆ ಬಗೆಹರಿದಿಲ್ಲ. ರಾಜರಾಜೇಶ್ವರಿನಗರ ಕ್ಷೇತ್ರದ ಶಾಸಕ ಹಾಗೂ ಸಚಿವ ಮುನಿರತ್ನ ಅವರೂ ಇತ್ತ ತಿರುಗಿ ನೋಡಿಲ್ಲ. ಶಾಸಕರು ಹಾಗೂ ಅಧಿಕಾರಿಗಳ ಅಸಡ್ಡೆಯಿಂದ ಸಾರ್ವಜನಿಕರು ಪರಿತಪಿಸುವಂತಾಗಿದೆ.

'ಮಳೆ ಸುರಿದರೆ ಗುಂಡಿಗಳಲ್ಲೆಲ್ಲಾ ನೀರು ಸಂಗ್ರಹವಾಗುತ್ತದೆ. ರಾತ್ರಿ ವೇಳೆ ಈ ಮಾರ್ಗದಲ್ಲಿ ಸಾಗುವುದೇ ಸವಾಲಾಗಿದೆ. ದ್ವಿಚಕ್ರ ವಾಹನ ಸವಾರರು ಗುಂಡಿ ತಪ್ಪಿಸಲು ಹೋಗಿ ಆಯತಪ್ಪಿ ಬಿದ್ದು ಗಾಯಗೊಳ್ಳುವುದು ಸಾಮಾನ್ಯವಾಗಿಬಿಟ್ಟಿದೆ. ಗುಂಡಿಗಳನ್ನು ಮುಚ್ಚುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆರು ತಿಂಗಳಿಂದ ಮನವಿ ಮಾಡುತ್ತಲೇ ಇದ್ದೇವೆ. ಹೀಗಿದ್ದರೂ ಗೋಳು ತಪ್ಪಿಲ್ಲ' ಎಂದು ಸ್ಟೀಲ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ನಾಗರಾಜ್ ಕಿಡಿಕಾರಿದರು.

'ಅವ್ಯವಸ್ಥೆ ಖಂಡಿಸಿ ಅನೇಕ ಬಾರಿ ಪ್ರತಿಭಟನೆ ನಡೆಸಿದ್ದೇವೆ. ಪ್ರತಿಭಟನೆಯ ಮಾರನೇ ದಿನ ಒಂದಷ್ಟು ಜಲ್ಲಿಕಲ್ಲು ಹಾಗೂ ಮಣ್ಣು ಸುರಿದು ಹೋಗುತ್ತಾರೆ. ಮಳೆ ಬಂದರೆ ಅದೇ ದಿನ ರಾತ್ರಿಯೇ ಅವು ಕೊಚ್ಚಿಕೊಂಡು ಹೋಗುತ್ತವೆ. ಡಾಂಬರು ಹಾಕಿ ಮುಚ್ಚುವಂತೆ ಹೇಳಿದರೆ, 'ಅದು ನಮ್ಮಿಂದ ಸಾಧ್ಯವಿಲ್ಲ, ಮೇಲಧಿಕಾರಿಗಳಿಂದ ಅನುಮತಿ ಪಡೆಯದೇ ಯಾವ ಕೆಲಸವನ್ನೂ ಮಾಡುವಂತಿಲ್ಲ' ಎಂದು ಎಂಜಿನಿಯರ್ ಪ್ರತಿಕ್ರಿಯಿಸುತ್ತಾರೆ. ಜನಸಾಮಾನ್ಯರ ಸಮಸ್ಯೆ ಅವರಿಗೆ ಅರ್ಥವೇ ಆಗುವುದಿಲ್ಲ. 'ಇನ್ನಷ್ಟು ಮಂದಿ ಈ ಗುಂಡಿಗಳಲ್ಲಿ ಬಿದ್ದು ಕೈ ಕಾಲು ಮುರಿದುಕೊಳ್ಳಬೇಕು' ಎಂದು ಪ್ರಶ್ನಿಸಿದರು.

'ಈ ರಸ್ತೆಯಲ್ಲಿ ಲಘು ಹಾಗೂ ಭಾರಿ ವಾಹನಗಳು ನಿರಂತರವಾಗಿ ಸಂಚರಿಸುತ್ತಲೇ ಇರುತ್ತವೆ. ದ್ವಿಚಕ್ರ ವಾಹನಗಳೂ ಸಾಕಷ್ಟು ಸಂಖ್ಯೆಯಲ್ಲಿ ಓಡಾಡುತ್ತವೆ. ಹೀಗಾಗಿ ಸಂಜೆ ವೇಳೆಯಲ್ಲಿ ದಟ್ಟಣೆ ಉಂಟಾಗುತ್ತದೆ. ಒಮ್ಮೊಮ್ಮೆ ಈ ದಟ್ಟಣೆಯಲ್ಲಿ ಆಂಬುಲೆನ್ಸ್‌ಗಳೂ ಸಿಲುಕಿಕೊಂಡು ರೋಗಿಗಳು ಸಂಕಷ್ಟ ಅನುಭವಿಸಬೇಕಾಗುತ್ತದೆ. ಬೇಸಿಗೆಯಲ್ಲಿ ರಸ್ತೆಯ ಮೇಲಿನ ದೂಳೆಲ್ಲಾ ಅಂಗಡಿಯೊಳಗೆ ಸೇರಿಕೊಳ್ಳುತ್ತದೆ. ಊಟ ಮಾಡುವುದಕ್ಕೂ ಸಮಸ್ಯೆಯಾಗುತ್ತದೆ. ಅಂಗಡಿಯ ಮುಂದಿಟ್ಟಿರುವ ಪಾತ್ರೆಗಳ ಮೇಲೂ ದೂಳು ಕುಳಿತಿರುತ್ತದೆ. ಅದನ್ನು ಕೊಡವಿ ಕೊಡವಿ ಸಾಕಾಗಿ ಹೋಗುತ್ತದೆ' ಎಂದು ಪಾತ್ರೆ ವ್ಯಾಪಾರಿ ಶ್ರೀನಿವಾಸ್ ಅಳಲು ತೋಡಿಕೊಂಡರು.



ಸುಂಕದಕಟ್ಟೆ ಮೂಲಕ ಹಾದುಹೋಗುವ ಮಾಗಡಿ ಮುಖ್ಯ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿರುವುದು

ಪ್ರಜಾವಾಣಿ ಚಿತ್ರಗಳು/ ಆನೂಪ್ ರಾಘ ಟಿ.

ಪಾದಚಾರಿ ಮೇಲ್ಸೇತುವೆಯೂ ಇಲ್ಲ

'ತಾಲ್ಲೂಕು ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವ ಈ ರಸ್ತೆಯಲ್ಲಿ ಸದಾ ವಾಹನಗಳು ಗಿಜಿಗುಡುತ್ತಿರುತ್ತವೆ. ಹೀಗಾಗಿ ವೃದ್ಧರು ಹಾಗೂ ಮಕ್ಕಳು ರಸ್ತೆ ದಾಟಲು ಹರಸಾಹಸ ಪಡಬೇಕು. ರಸ್ತೆಯ ಇಕ್ಕೆಲಗಳಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳು ಹಾಗೂ ಆಸ್ಪತ್ರೆಗಳೂ ಇವೆ. ರೋಗಿಗಳ ಸಂಬಂಧಿಕರು ಔಷಧ ಖರೀದಿಗೆ ರಸ್ತೆ ದಾಟಬೇಕಾಗುತ್ತದೆ. ರಸ್ತೆ ದಾಟುವ ಭರದಲ್ಲಿ ಕೆಲವರು ಎಡವಿ ಬಿದ್ದ ನಿದರ್ಶನಗಳೂ ಇವೆ. ವಾಹನಗಳು ಡಿಕ್ಕಿ ಹೊಡೆಯುವ ಅಪಾಯವೂ ಇದೆ' ಎಂದು ನಾಡಗೌಡ ತಿಳಿಸಿದರು.

'ಪಾದಚಾರಿ ಮೇಲ್ಸೇತುವೆ ನಿರ್ಮಿಸಿದರೆ ಈ ಸಮಸ್ಯೆಗೆ ತಾತ್ಕಾಲಿಕ ಮುಕ್ತಿ ಸಿಗುತ್ತದೆ. ಹದಗೆಟ್ಟಿರುವ ಈ ರಸ್ತೆಯಲ್ಲಿ ದ್ವಿಚಕ್ರ ವಾಹನ ಸವಾರರು ಜೀವ ಬಿಗಿ ಹಿಡಿದೇ ಓಡಾಡಬೇಕು. ಅಧಿಕಾರಿಗಳಿಗೆ ಹೇಳಿ ಹೇಳಿ ಸಾಕಾಗಿ ಹೋಗಿದೆ. ನೈಸ್ ರಸ್ತೆ ಹಾಗೂ ತಾವರೆಕೆರೆಯಿಂದ ಬೆಂಗಳೂರು ನಗರ ಪ್ರವೇಶಿಸುವವರೂ ಇದೇ ರಸ್ತೆ ಬಳಸುತ್ತಾರೆ. ಆಂಬುಲೆನ್ಸ್‌ಗಳೂ ಈ ಮಾರ್ಗದಲ್ಲೇ ಓಡಾಡುತ್ತವೆ. [illegible] ಅಧಿಕಾರಿಗಳು ಅದನ್ನು ಮುಚ್ಚುವ ಗೋಜಿಗೇ ಹೋಗುತ್ತಿಲ್ಲ' ಎಂದು ದೂರಿದರು.



ವೃದ್ಧರೊಬ್ಬರು ರಸ್ತೆ ದಾಟಲು ಅನ್ಯರ ಸಹಾಯ ಪಡೆಯುತ್ತಿರುವುದು

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ



ನಗರದಲ್ಲಿ ಸೋಮವಾರ ನಡೆದ 'ಪ್ರಶಸ್ತಿ ವಿಜೇತರ ಸಮ್ಮೇಳನ'ದಲ್ಲಿ 'ಯುವ ಪುರಸ್ಕಾರ'ಕ್ಕೆ ಆಯ್ಕೆಯಾದ ಸಾಹಿತಿಗಳೊಂದಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿಯ ಸಂಚಾಲಕ ಸರಜೂ ಕಾಟ್ಕರ್ ಮಾತುಕತೆ ನಡೆಸಿದರು — ಪ್ರಜಾವಾಣಿ ಚಿತ್ರ

'ಬರವಣಿಗೆ ಸಮಾಜದಲ್ಲಿ ಬದಲಾವಣೆ ತರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೇಖಕರಿಗೆ ಜವಾಬ್ದಾರಿ ಇದೆ. ಬಡವರ, ನೊಂದವರ ದನಿಯಾಗಬೇಕು, ಬರವಣಿಗೆ ಸಮಾಜದಲ್ಲಿ ಬದಲಾವಣೆ ತರಬೇಕು, ಕೋಮು ಸೌಹಾರ್ದ ಮತ್ತು ಶಾಂತಿ ನೆಲೆಸುವ ಆಶಯ ಹೊಂದಿರಬೇಕು....'

ಕೇಂದ್ರ ಸಾಹಿತ್ಯ ಅಕಾಡೆಮಿಯ 'ಯುವ ಪುರಸ್ಕಾರ–2020'ಕ್ಕೆ ಆಯ್ಕೆಯಾದ ಪ್ರಶಸ್ತಿ ಪುರಸ್ಕೃತರ ನುಡಿಗಳಿವು. ನಗರದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಪ್ರಶಸ್ತಿ ವಿಜೇತರ ಸಮ್ಮೇಳನದಲ್ಲಿ ತಾವು ಬರವಣಿಗೆ ಆರಂಭಿಸಿದ್ದು ಹೇಗೆ, ತಮ್ಮ ಸುತ್ತಮುತ್ತಲಿನ ಪರಿಸರವೇ ಬರವಣಿಗೆಯ ವಸ್ತುವಾಗಿದ್ದು ಹೇಗೆ ಎನ್ನುವ ಅನುಭವಗಳನ್ನು ಹಂಚಿಕೊಂಡರು. ತಮ್ಮ ಕೃತಿಗಳು ಯುವ ಪುರಸ್ಕಾರ ಪ್ರಶಸ್ತಿ ಆಯ್ಕೆಯಾಗಿರುವ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿ, ಸಾಹಿತ್ಯ ವಲಯದ ಸ್ಪರ್ಶ ಬೆಳೆಸಿಕೊಂಡಿದ್ದು ಹೇಗೆ ಎನ್ನುವುದನ್ನು ವಿವರಿಸಿದರು.

ಚಾಮರಾಜನಗರ ಜಿಲ್ಲೆಯ ಸ್ವಾಮಿ ಪೊನ್ನಾಚಿ (ಕೆ.ಎಸ್.ಮಹದೇವಸ್ವಾಮಿ), 'ನನ್ನ ಧೂಪದ ಮಕ್ಕಳು ಕೃತಿ ಪ್ರಶಸ್ತಿಗೆ ಆಯ್ಕೆಯಾಗಿದೆ. ತಮಿಳುನಾಡು ಗಡಿಯಲ್ಲಿರುವ ಪೊನ್ನಾಚಿ ಎನ್ನುವ ಕುಗ್ರಾಮ ನನ್ನೂರು. ನಮ್ಮ ಊರಲ್ಲಿ ಯಾವುದೇ ಸೌಲಭ್ಯಗಳು ಇಲ್ಲದಿದ್ದರೂ ಪುಸ್ತಕ ಓದುವ ಪ್ರೇಮಿಗಳು ಇದ್ದರು. ಇವರಿಂದಾಗಿ ಓದುವ ಒಲವು ಚಿಕ್ಕಂದಿನಲ್ಲಿ ಬೆಳೆಯಿತು. ಆದರೆ, ಮೈಸೂರಿಗೆ ಅಧ್ಯಯನ ಮಾಡಲು ತೆರಳಿದಾಗ ಸಾಹಿತ್ಯ ವಲಯದ ಪರಿಪೂರ್ಣ ಪರಿಚಯವಾಯಿತು. ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ದೇವನೂರ ಮಹಾದೇವ ಅಂತವರ ಕೃತಿಗಳನ್ನು ಓದಿದ ಬಳಿಕ ಸಾಹಿತ್ಯ ಜಗತ್ತಿನ ಮತ್ತೊಂದು ಲೋಕ ಪರಿಚಯವಾಯಿತು' ಎಂದು ವಿವರಿಸಿದರು.

'ನಮ್ಮೂರಿನ ಸೋಲಿಗರ ಮಕ್ಕಳ ಜೀವನ ಆಧರಿಸಿ ಧೂಪದ ಮಕ್ಕಳು ಕೃತಿ ಬರೆದಿದ್ದೇನೆ. ಆಧುನಿಕ ಶಿಕ್ಷಣ ಮತ್ತು ಬುಡಕಟ್ಟು ಜನರ ಜೀವನದ ಅಂಶಗಳು ಇದರಲ್ಲಿವೆ. ಮಕ್ಕಳು ಎದುರಿಸುತ್ತಿರುವ ಸಂಕಷ್ಟಗಳನ್ನು ಬಿಂಬಿಸುವ ಪ್ರಯತ್ನ ಮಾಡಲಾಗಿದೆ' ಎಂದು ಹೇಳಿದರು.

ಕಾಶ್ಮೀರದ ಮಸ್ರೂರ್ ಮುಜಾಫರ್ ಮಾತನಾಡಿ, 'ಗುಲ್ಮಾರ್ಗ್ ಬಳಿ ಸಣ್ಣ ಊರಿನಿಂದ ನಾನು ಬಂದಿದ್ದೇನೆ. ಸ್ಥಳೀಯ ಪರಿಸರ ನನ್ನ ಕವನಗಳಿಗೆ ವಸ್ತುವಾಗಿತ್ತು. ಶೈಕ್ಷಣಿಕ ಚಟುವಟಿಕೆಗಳ ಜತೆ ಕವಿತೆ, ಕಥೆಗಳನ್ನು ಬರೆಯುವ ಹವ್ಯಾಸ ಬೆಳೆಸಿಕೊಂಡೆ' ಎಂದು ಹೇಳಿದರು.

ಗೋವಾದ ಸಂಪದಾ ಕುಂಕೋಳಿಕರ್, 'ಇಂಗ್ಲಿಷ್‌ನಲ್ಲಿ ಹೆಚ್ಚು ಕೃತಿಗಳನ್ನು ಬರೆದಿದ್ದೇನೆ. ಪ್ರವಾಸ ಕಥನದ ಕೃತಿ ಪ್ರಶಸ್ತಿ ಆಯ್ಕೆಯಾಗಿದೆ. ಆದರೆ, ಮಾತೃಭಾಷೆ ಕೊಂಕಣಿಯಲ್ಲಿ ಬರೆಯುವುದು ಹೆಚ್ಚು ತೃಪ್ತಿ ತಂದಿದೆ' ಎಂದರು.

ಕೇರಳದ ಅಬಿನ್ ಜೋಸೆಫ್, 'ನಾನು ಸಹ ಕುಗ್ರಾಮದಿಂದ ಬಂದವನು. ಹಳ್ಳಿಯ ಗ್ರಂಥಾಲಯಗಳಿಂದ ಓದುವ ಹವ್ಯಾಸ ಬೆಳೆಯಿತು. ನಾನು ಜನಸಾಮಾನ್ಯರ ಬದುಕು ಬವಣೆಗಳನ್ನು ಬರವಣಿಗೆ ಮೂಲಕ ಬಿಂಬಿಸಲು ಯತ್ನಿಸುತ್ತಿದ್ದೇನೆ' ಎಂದು ಹೇಳಿದರು.

ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿಯ ಸಂಚಾಲಕ ಸರಜೂ ಕಾಟ್ಕರ್ ಅಧ್ಯಕ್ಷತೆವಹಿಸಿದ್ದರು. 24 ಭಾಷೆಗಳಲ್ಲಿನ ಯುವ ಸಾಹಿತಿಗಳಿಗೆ ಯುವ ಪುರಸ್ಕಾರ ಪ್ರಶಸ್ತಿ ನೀಡಲಾಗಿದೆ.

'ಜಮೀರ್ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಲಿ'

ಬೆಂಗಳೂರು: 'ಜಮೀರ್ ಅಹಮ್ಮದ್ ಖಾನ್ ಅವರನ್ನು ಶಾಸಕ ಮತ್ತು ಸಚಿವರನ್ನಾಗಿ ಮಾಡಿದ್ದು ಯಾವ ಪಕ್ಷ ಎಂಬುದನ್ನು ಮೊದಲು ನೆನಪಿಸಿಕೊಳ್ಳಲಿ' ಎಂದು ಜೆಡಿಎಸ್ ರಾಜ್ಯ ವಕ್ತಾರ ಟಿ.ಎ. ಶರವಣ ಲೇವಡಿ ಮಾಡಿದರು.

'ಜೆಡಿಎಸ್‌ನಲ್ಲಿ ಅಲ್ಪಸಂಖ್ಯಾತರನ್ನು ಮುಖ್ಯಮಂತ್ರಿ ಮಾಡಿಲ್ಲ ಎಂದು ಜಮೀರ್ ಹೇಳುತ್ತಿದ್ದಾರೆ. ಕಾಂಗ್ರೆಸ್‌ನಲ್ಲಿ ಜಮೀರ್ ಅವರನ್ನೇ ಮುಖ್ಯಮಂತ್ರಿ ಎಂದು ಆ ಪಕ್ಷದ ನಾಯಕರು ಘೋಷಣೆ ಮಾಡಿದರೆ ನಮ್ಮ ಆಕ್ಷೇಪವೇನೂ ಇಲ್ಲ. ಬೇರೆಲ್ಲಾ ಅಲ್ಪಸಂಖ್ಯಾತ ನಾಯಕರನ್ನು ಮುಗಿಸಿದಂತೆ ಜಮೀರ್ ಅವರನ್ನು ಕಾಂಗ್ರೆಸ್‌ನವರು ಮುಗಿಸುತ್ತಾರೆ ಎಂಬ ಆತಂಕವಿದೆ. ಮರಳಿ ಜೆಡಿಎಸ್‌ಗೆ ಬರುವುದಾದರೆ ಪಕ್ಷದ ವೇದಿಕೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಕುಮಾರಸ್ವಾಮಿ ಅವರನ್ನು ಇಂದ್ರ–ಚಂದ್ರ ಎನ್ನುತ್ತಿದ್ದ ಜಮೀರ್ ಈಗ ಆರೋಪ ಮಾಡುತ್ತಿದ್ದಾರೆ. ವಿಧಾನ ಪರಿಷತ್ತಿನಲ್ಲಿ ಸಿ.ಎಂ. ಇಬ್ರಾಹಿಂ ಅವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಮಾಡಲಿ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಸ್ಥಾನವನ್ನು ಅಲ್ಪಸಂಖ್ಯಾತರಿಗೆ ನೀಡುವುದಾಗಿ ಕಾಂಗ್ರೆಸ್‌ನವರು ಘೋಷಿಸಲಿ' ಎಂದರು.

ನಗರದಲ್ಲಿ ಇಂದು

ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್ ಅವರ 'ಯಾವ ಜನ್ಮದ ಮೈತ್ರಿ?' ಪುಸ್ತಕ ಕುರಿತು ಸಂವಾದ: ಭಾಗವಹಿಸುವವರು–ಅಜಯ್ ಕುಮಾರ್ ಸಿಂಗ್, ಎಚ್.ಎಸ್.ಶಿವಪ್ರಕಾಶ್, ಐ.ಎಂ. ವಿಠ್ಠಲಮೂರ್ತಿ, ಸುಗತ ಶ್ರೀನಿವಾಸರಾಜು, ಆಯೋಜನೆ–ನವ ಕರ್ನಾಟಕ, ಸಾಹಿತಿ–ಕಲಾವಿದರ ಬಳಗ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಳಿಗ್ಗೆ 10.30

ಕಮ್ಯುನಿಸ್ಟ್‌–100: 'ಹೋರಾಟಗಳ ನೂರು ವರ್ಷ' ಹಾಗೂ 'ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷ' ಪುಸ್ತಕಗಳು ಹಾಗೂ ರಿಯಾಯಿತಿ ಕೂಪನ್ ಬಿಡುಗಡೆ: ಸಿಪಿಐಎಂನ ಎಂ.ಎ.ಬೇಬಿ, ಅಧ್ಯಕ್ಷತೆ–ಯು.ಬಸವರಾಜ್, ಆಯೋಜನೆ–ಜನಶಕ್ತಿ ಪ್ರಕಾಶನ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ಕಂದಾಯ ಸೇವೆ: ತುಮಕೂರು ಜಿಲ್ಲೆಗೆ ಮೊದಲ ರ‍್ಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಪ್ಟೆಂಬರ್ ತಿಂಗಳಿನಲ್ಲಿ ಕಂದಾಯ ಇಲಾಖೆಯ ಸೇವೆಗಳನ್ನು ಒದಗಿಸುವುದರಲ್ಲಿನ ಕಾರ್ಯಕ್ಷಮತೆಯಲ್ಲಿ ತುಮಕೂರು ಜಿಲ್ಲೆಗೆ ರಾಜ್ಯದಲ್ಲೇ ಮೊದಲ ಸ್ಥಾನ ದೊರಕಿದೆ.

ಬೆಂಗಳೂರು ಗ್ರಾಮಾಂತರ ಎರಡನೇ ರ‍್ಯಾಂಕ್ ಪಡೆದಿದ್ದರೆ, ಶಿವಮೊಗ್ಗ ಜಿಲ್ಲೆ ಮೂರನೇ ರ‍್ಯಾಂಕ್ ಪಡೆದಿದೆ. ಹಾವೇರಿ ಜಿಲ್ಲೆ ಕೊನೆಯ ಸ್ಥಾನದಲ್ಲಿದೆ. ಕಂದಾಯ ಇಲಾಖೆಗಳಿಗೆ ಸಂಬಂಧಿಸಿದ ಸೇವೆಗಳನ್ನು ಒದಗಿಸುವುದರಲ್ಲಿ ಆಗಿರುವ ಪ್ರಗತಿಯನ್ನು ಆಧರಿಸಿ ರ‍್ಯಾಂಕಿಂಗ್ ನೀಡಲಾಗಿದೆ.

ಮ್ಯುಟೇಷನ್, ಭೂ ಪರಿವರ್ತನೆ, ಜಿಲ್ಲಾಧಿಕಾರಿ ಮತ್ತು ಉಪ ವಿಭಾಗಾಧಿಕಾರಿ ನ್ಯಾಯಾಲಯಗಳಲ್ಲಿನ ಪ್ರಕರಣಗಳ ವಿಲೇವಾರಿ, ಭೂಮಾಪನ ಅರ್ಜಿಗಳ ವಿಲೇವಾರಿ, ಪಹಣಿ ದೋಷ ತಿದ್ದುಪಡಿ, ಪಹಣಿಯಲ್ಲಿ ಬೆಳೆ ಕಾಲಂ ಸೇರಿದಂತೆ ವಿವಿಧ ಮಾಹಿತಿಗಳ ದಾಖಲಿಸುವ ಪ್ರಕ್ರಿಯೆಯಲ್ಲಿನ ಪ್ರಗತಿಯನ್ನು ಆಧರಿಸಿ ಈ ರ‍್ಯಾಂಕಿಂಗ್ ನೀಡಲಾಗಿದೆ ಎಂದು ಕಂದಾಯ ಇಲಾಖೆ ಭೂ ದಾಖಲೆಗಳ ಆಯುಕ್ತ ಮನೀಶ್ ಮೌದ್ಗಿಲ್ ತಿಳಿಸಿದ್ದಾರೆ.

ಎಂಟು ಮಾನದಂಡಗಳ ಆಧಾರದಲ್ಲಿ ಮೌಲ್ಯಮಾಪನ ನಡೆಸಲಾಗಿದೆ. ಪ್ರತಿ ವಿಷಯದಲ್ಲೂ ಜಿಲ್ಲಾವಾರು ಅಂಕ ನೀಡಲಾಗಿದೆ. ಒಟ್ಟು ಸರಾಸರಿ ಅಂಕದ ಆಧಾರದಲ್ಲಿ ರ‍್ಯಾಂಕಿಂಗ್ ನೀಡಲಾಗಿದೆ ಎಂದು ಹೇಳಿದ್ದಾರೆ.

ಸ್ಥಳಕ್ಕೆ ಐಐಎಸ್ಸಿ ತಜ್ಞರ ಭೇಟಿ ● ವರದಿ ಆಧರಿಸಿ ಮುಂದಿನ ಕ್ರಮ: ಅಧಿಕಾರಿಗಳ ಭರವಸೆ

ವಾಲಿದ ವಸತಿ ಸಮುಚ್ಚಯ; ಜನರ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರು ಇಂಚುಗಳಷ್ಟು ವಾಲಿರುವ ಪೊಲೀಸ್ ವಸತಿ ಸಮುಚ್ಚಯದ 'ಬಿ' ಬ್ಲಾಕ್‌ನಲ್ಲಿದ್ದ 18 ಪೊಲೀಸ್ ಕುಟುಂಬಗಳು ತಮ್ಮ ಮನೆಗಳನ್ನು ಸೋಮವಾರ ತೆರವುಗೊಳಿಸಿವೆ.

ಪೊಲೀಸರು ಹಾಗೂ ಅವರ ಕುಟುಂಬದವರ ವಾಸಕ್ಕಾಗಿ ಬಿನ್ನಿ ಮಿಲ್ ಬಳಿ ಏಳು ಮಹಡಿ ವಸತಿ ಸಮುಚ್ಚಯ ನಿರ್ಮಿಸಲಾಗಿದೆ. ಇದರ 'ಬಿ' ಬ್ಲಾಕ್ ಕಟ್ಟಡದ ಅರ್ಧ ಭಾಗ ಒಂದೂವರೆ ವರ್ಷದಿಂದ ನಿಧಾನವಾಗಿ ವಾಲುತ್ತಿದ್ದು, ಅಲ್ಲಲ್ಲಿ ಬಿರುಕುಗಳು ಬಿಟ್ಟಿವೆ.

ನಿರಂತರವಾಗಿ ಸುರಿಯುತ್ತಿದ್ದ ಮಳೆಯಿಂದ ಕಟ್ಟಡವು ಪೂರ್ತಿಯಾಗಿ ವಾಲುವ ಆತಂಕ ನಿವಾಸಿಗಳಲ್ಲಿತ್ತು. ಹೀಗಾಗಿ, ಕಟ್ಟಡದ ಅರ್ಧ ಭಾಗದಲ್ಲಿರುವ 32 ಕುಟುಂಬಗಳ ತುರ್ತು ಸ್ಥಳಾಂತರಕ್ಕೆ ಪೊಲೀಸ್ ಇಲಾಖೆ ಕ್ರಮ ಕೈಗೊಂಡಿತ್ತು.

'ಪೊಲೀಸ್ ಕುಟುಂಬಗಳ ಸುರಕ್ಷತೆ ದೃಷ್ಟಿಯಿಂದ ವಸತಿ ಸಮುಚ್ಚಯದ ಮನೆಗಳನ್ನು ಖಾಲಿ ಮಾಡಿ, ಅನ್ನಪೂರ್ಣೇಶ್ವರಿನಗರದಲ್ಲಿರುವ ವಸತಿ ಸಮುಚ್ಚಯದ ಮನೆಗಳಿಗೆ ಸ್ಥಳಾಂತರಗೊಳ್ಳಬೇಕು' ಎಂದು ಹಿರಿಯ ಅಧಿಕಾರಿಗಳು ಶನಿವಾರ (ಅ. 16) ರಾತ್ರಿಯೇ ಆದೇಶ ಹೊರಡಿಸಿದ್ದರು.

ಮಕ್ಕಳು, ವೃದ್ಧರ ಸಮೇತ ಹೊರಟರು: ಮನೆಯ ವಸ್ತುಗಳನ್ನು ಹೊಂದಿಸಿಕೊಂಡು ಮಕ್ಕಳು, ವೃದ್ಧರ ಸಮೇತವಾಗಿ ಕುಟುಂಬದವರು ಮನೆ ಖಾಲಿ ಮಾಡಿದರು.



ಪೊಲೀಸ್ ವಸತಿ ಸಮುಚ್ಚಯದ 'ಬಿ' ಬ್ಲಾಕ್ ಕಟ್ಟಡ ಸ್ಥಳಕ್ಕೆ ಭೇಟಿ ನೀಡಿದ್ದ ಬೆಂಗಳೂರು ಸಿವಿಲ್ ಎಂಜಿನಿಯರ್ಸ್ ಕನ್ಸಲ್ಟೆಂಟ್ ಒಕ್ಕೂಟದ ಚೇರ್ಮನ್ ಶ್ರೀಕಾಂತ್ ಚನ್ನಾಳ ಅವರು, ಕಟ್ಟಡ ವಾಲಿದ ಸ್ಥಳವನ್ನು ತೋರಿಸಿದರು – ಪ್ರಜಾವಾಣಿ ಚಿತ್ರ

'26 ಕುಟುಂಬಗಳಿಗೆ ಕೀಲಿ ಹಸ್ತಾಂತರ'

'ಪೊಲೀಸರು ಹಾಗೂ ಅವರ ಸಿಬ್ಬಂದಿ ಸುರಕ್ಷತೆಗಾಗಿ, ವಸತಿ ಸಮುಚ್ಚಯದಲ್ಲಿರುವ 32 ಕುಟುಂಬಗಳ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳಲಾಗಿದೆ. ಆ ಪೈಕಿ, 26 ಕುಟುಂಬಗಳಿಗೆ ಅನ್ನಪೂರ್ಣೇಶ್ವರಿನಗರದಲ್ಲಿರುವ ಹೊಸ ಸಮುಚ್ಚಯದ ಮನೆಗಳ ಕೀಲಿ ನೀಡಲಾಗಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ತಿಳಿಸಿದರು. 'ಕೆಲಸ ಹಾಗೂ ಆರೋಗ್ಯ ಸಮಸ್ಯೆ ಕಾರಣದಿಂದ ಕೆಲ ಕುಟುಂಬಗಳು, ಸ್ಥಳಾಂತರಕ್ಕೆ ಕಾಲಾವಕಾಶ ಕೋರಿವೆ' ಎಂದರು.



ಬಿನ್ನಿಮಿಲ್ ಬಳಿ ನಿರ್ಮಿಸಲಾಗಿರುವ ಪೊಲೀಸ್ ವಸತಿ ಸಮುಚ್ಚಯದ ಬಿ ಬ್ಲಾಕ್ ಕಟ್ಟಡದ ಅರ್ಧ ಭಾಗ ವಾಲಿದ್ದು, ಹಲವೆಡೆ ಬಿರುಕು ಬಿಟ್ಟಿದೆ

'ಒಂದೂವರೆ ವರ್ಷದ ಹಿಂದೆಯೇ ಮೂರು ಇಂಚುಗಳಷ್ಟು ಕಟ್ಟಡ ವಾಲಿತ್ತು. ಆದರೆ, ಯಾವುದೇ ಮನೆಗೂ ಧಕ್ಕೆ ಆಗಿರಲಿಲ್ಲ. ಆತಂಕವಿಲ್ಲದೇ ವಾಸವಿದ್ದೆವು. ಆದರೆ, ಇತ್ತೀಚೆಗೆ ಮಳೆ ಹೆಚ್ಚಾಗಿ ನಗರದಲ್ಲಿ ಅಲ್ಲಲ್ಲಿ ಕೆಲವು ಕಟ್ಟಡಗಳು ಕುಸಿದಿವೆ. ಹಾಗಾಗಿ ನಮ್ಮ ಕಟ್ಟಡವೂ ಕುಸಿಯುವ ಆತಂಕ ಶುರುವಾಗಿತ್ತು' ಎಂದು ಕುಟುಂಬದ ಸದಸ್ಯರೊಬ್ಬರು ಹೇಳಿದರು.

'ಹಿರಿಯ ಅಧಿಕಾರಿಗಳ ಸೂಚನೆಯಂತೆ ಮನೆ ಖಾಲಿ ಮಾಡಿ ಹೊಸ ಮನೆಗೆ ಹೊರಟಿದ್ದೇವೆ. ಹೊಸ ಮನೆಯಿಂದ ಕೆಲಸದ ಸ್ಥಳ ಹಾಗೂ ಮಕ್ಕಳ ಶಾಲೆಗೆ ಹೋಗಲು ದೂರವಾಗುತ್ತದೆ ಎಂಬ ಚಿಂತೆಯೂ ಇದೆ' ಎಂದೂ ತಿಳಿಸಿದರು.

ಸಾಮಗ್ರಿ ಹೊಂದಿಸುತ್ತಿರುವ ಕುಟುಂಬಗಳು: ಮನೆ ಖಾಲಿ ಮಾಡುವ ನೋಟಿಸ್ ಪಡೆದಿರುವ 14 ಕುಟುಂಬಗಳು, ತಮ್ಮ ಸಾಮಗ್ರಿ ಹೊಂದಿಸುವ ಕೆಲಸದಲ್ಲಿ ನಿರತವಾಗಿವೆ.

ಕೆಲ ಮನೆಗಳಲ್ಲಿ ವೃದ್ಧರು, ಮಹಿಳೆಯರು ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಗರ್ಭಿಣಿಯರೂ ಇದ್ದಾರೆ. ಅದೇ ಕಾರಣ ನೀಡಿ ಕುಟುಂಬದವರು, ಮನೆಗಳ ಸ್ಥಳಾಂತರಕ್ಕೆ ಸಮಯ ಕೋರಿದ್ದಾರೆ.

ತಜ್ಞರ ಭೇಟಿ: ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ತಜ್ಞರ ತಂಡ ವಸತಿ ಸಮುಚ್ಚಯಕ್ಕೆ ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಕಟ್ಟಡದ ಒಂದು ಪಾರ್ಶ್ವದಲ್ಲಿದ್ದ ಬಿರುಕುಗಳನ್ನು ಪರಿಶೀಲಿಸಿದ ತಂಡ, ಅದರ ಫೋಟೊ ಹಾಗೂ ವಿಡಿಯೊ ಚಿತ್ರೀಕರಣ ನಡೆಸಿತು. ಕಟ್ಟಡದ ಬಗ್ಗೆ ಅಧ್ಯಯನ ನಡೆಸಲಿರುವ ತಂಡ, ಸದೃಢತೆ ಬಗ್ಗೆ ವರದಿ ನೀಡಲಿದೆ. ಅದನ್ನು ಆಧರಿಸಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ಹಿರಿಯ ಅಧಿಕಾರಿಗಳು ಹೇಳಿದ್ದಾರೆ.

18 ತಿಂಗಳ ಬಳಿಕ ಶೇ 100 ಆಸನ ಭರ್ತಿಗೆ ಅವಕಾಶ

ಚಿತ್ರಮಂದಿರ ಭರ್ತಿ; ದರ ಏರಿಕೆ ಬರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 18 ತಿಂಗಳ ಬಳಿಕ ಚಿತ್ರಮಂದಿರಗಳಲ್ಲಿ ಶೇ 100ರ ಆಸನ ಭರ್ತಿಗೆ ಅವಕಾಶವೇನೋ ಸಿಕ್ಕಿತು. ಚಿತ್ರಮಂದಿರ ಪ್ರೇಕ್ಷಕರಿಂದ ತುಂಬುತ್ತಿರುವುದನ್ನು ಗಮನಿಸಿದ ನಿರ್ಮಾಪಕರು, ವಿತರಕರು ತಮ್ಮ ಚಿತ್ರ ಪ್ರದರ್ಶನದ ಟಿಕೆಟ್ ದರವನ್ನೇ ಏರಿಸಿದ್ದಾರೆ.

'ಸಾಮಾನ್ಯ ಏಕತೆರೆಯ (ಸಿಂಗಲ್ ಸ್ಕ್ರೀನ್) ಚಿತ್ರಮಂದಿರಗಳಲ್ಲಿ ಬಾಲ್ಕನಿ ಟಿಕೆಟ್ ದರವೇ ಗರಿಷ್ಠ ₹ 100ರಿಂದ 150ರವರೆಗೆ ಇದೆ. ಈಗ ದೊಡ್ಡ ಬಜೆಟ್‌ನ ಚಿತ್ರಗಳು ಬಿಡುಗಡೆಯಾದ ಮೊದಲ ಒಂದೆರಡು ದಿನ ದುಪ್ಪಟ್ಟು ದರ, ಆ ಬಳಿಕ ಕೊಂಚ ಕಡಿಮೆ ದರ ನಿಗದಿಪಡಿಸಲಾಗುತ್ತಿದೆ. ಇದರಿಂದ ಗೆಳೆಯರು, ಕುಟುಂಬದವರ ಜೊತೆ ಕೂಡಿ ಸಿನಿಮಾ ನೋಡಬೇಕಾದರೆ ನಮಗೆ ದುಬಾರಿಯೆನಿಸಿಬಿಟ್ಟಿದೆ' ಎಂದು ನಾಗಸಂದ್ರದ ನಿವಾಸಿ ಕೇಶವ ಅಸಹಾಯಕತೆ ವ್ಯಕ್ತಪಡಿಸಿದರು.

'ಮಾಗಡಿ ರಸ್ತೆಯ ವೀರೇಶ್ ಚಿತ್ರಮಂದಿರದಲ್ಲಿ ಬಾಲ್ಕನಿ ಟಿಕೆಟ್ ದರವೇ ₹ 110 ಇದೆ. ಈಗ ಅದನ್ನು 200ಕ್ಕೆ ಏರಿಸಿದ್ದಾರೆ. ಏಕೆ ಹೀಗೆ ಎಂದು ಕೇಳಿದರೆ ನಿರ್ಮಾಪಕರು ಮತ್ತು ವಿತರಕರೇ ದರ ನಿರ್ಧರಿಸಿದ್ದಾರೆ. ಚಿತ್ರಮಂದಿರಕ್ಕೂ ದರಕ್ಕೂ ಸಂಬಂಧವಿಲ್ಲ. ನಾವು ಚಿತ್ರಮಂದಿರವನ್ನು ಬಾಡಿಗೆ ಆಧಾರದಲ್ಲಿ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ' ಎಂದರು ಹೊಸಳ್ಳಿಯ ಸಿನಿಪ್ರೇಕ್ಷಕ ರಾಜೇಶ್.

'ಪ್ರೇಕ್ಷಕರೇನೊ ಚಿತ್ರಮಂದಿರಗಳಿಗೆ ಬರುತ್ತಿದ್ದಾರೆ. ಅವರನ್ನು ಉಳಿಸಿಕೊಳ್ಳುವುದು ಸಿನಿಮಾ ಉದ್ಯಮದವರ ಜವಾಬ್ದಾರಿ. ಕೋವಿಡ್ ಕಾರಣದಿಂದ ಜನರಲ್ಲಿ ಆರ್ಥಿಕ ಶಕ್ತಿ ಕುಸಿದಿದೆ ಎಂಬುದನ್ನೂ ಗಮನಿಸಬೇಕು. ಹಾಗಾಗಿ ವಿತರಕರು ನಿಗದಿಗಿಂತ ಹೆಚ್ಚು ದರ ವಿಧಿಸುವುದನ್ನು ನಾವೂ ಒಪ್ಪುವುದಿಲ್ಲ' ಎಂದು ಬೆಂಗಳೂರಿನ ಚಿತ್ರಮಂದಿರದ ಮಾಲೀಕರೊಬ್ಬರು ಹೇಳಿದರು.



ಕೋಟಿಗೊಬ್ಬ – 3 ಚಿತ್ರ ನೋಡಲು ನಗರದ ಭೂಮಿಕಾ ಚಿತ್ರಮಂದಿರದ ಎದುರು ಜನಸಂದಣಿ

ರಾತ್ರಿ ಪ್ರದರ್ಶನ ಇಲ್ಲ

'ಚಿತ್ರಮಂದಿರದಲ್ಲಿ ಸರಾಸರಿ ನಾಲ್ಕು ಪ್ರದರ್ಶನಗಳು ನಡೆಯುತ್ತಿದ್ದವು. ಈಗ ಕೋವಿಡ್ ಕಾರಣವೊಡ್ಡಿ ರಾತ್ರಿಯ ಪ್ರದರ್ಶನ ಇಲ್ಲವಾಗಿದೆ. ಅದರ ಗಳಿಕೆಯನ್ನು ಮೂರೇ ಪ್ರದರ್ಶನಗಳಲ್ಲಿ ಪಡೆಯುವ ಸಲುವಾಗಿ ಈ ರೀತಿ ಮಾಡಲಾಗುತ್ತಿದೆ. ಆದ್ದರಿಂದ ಸರ್ಕಾರವು ಇತರ ಚಟುವಟಿಕೆಗಳಿಗೆ ಅವಕಾಶ ಕೊಟ್ಟಂತೆಯೇ ಚಿತ್ರಮಂದಿರಗಳಲ್ಲೂ ರಾತ್ರಿಯ ಪ್ರದರ್ಶನಕ್ಕೆ ಅವಕಾಶ ನೀಡಲಿ. ಆಗ ಆದಾಯ ಸರಿದೂಗಿಸಿಕೊಂಡು ನಿಭಾಯಿಸಬಹುದು' ಎಂದು ಗಾಂಧಿನಗರದ ವಿತರಕರೊಬ್ಬರು ಹೇಳಿದರು.

'ಇದಕ್ಕೆ ನಿಯಂತ್ರಣ ವ್ಯವಸ್ಥೆ ಬರಬೇಕು. ತಮಿಳುನಾಡಿನ ಮಾದರಿಯಲ್ಲಿ ಸರ್ಕಾರವೇ ಪ್ರದರ್ಶನ ದರ ನಿಗದಿಪಡಿಸುವಂತೆ ಮಾಡಿದರೆ ಈ ರೀತಿ ದರ ವ್ಯತ್ಯಾಸ ಮಾಡುವುದನ್ನು ತಪ್ಪಿಸಬಹುದು' ಎಂದರು.

ಕನ್ನಡದ ಬಿಗ್ ಬಜೆಟ್ ಚಿತ್ರಗಳು ಬಿಡುಗಡೆಯಾದ ಬಳಿಕ ಕಳೆದ ನಾಲ್ಕು ದಿನಗಳಿಂದ ಪ್ರೇಕ್ಷಕರ ಪ್ರತಿಕ್ರಿಯೆ ಅತ್ಯುತ್ತಮವಾಗಿದೆ. 'ಕೋಟಿಗೊಬ್ಬ–3', 'ಸಲಗ' ಉತ್ತಮ ಕಲೆಕ್ಷನ್ ತಂದುಕೊಟ್ಟಿದೆ. ಮೊದಲ ಕೆಲವು ದಿನ ಉತ್ತಮ ಪ್ರದರ್ಶನ ಕಂಡಿದ್ದ 'ನಿನ್ನ ಸನಿಹಕೆ' ಮತ್ತು 'ಶ್ರೀಕೃಷ್ಣ@ಜಿಮೇಲ್ ಡಾಟ್‌ಕಾಂ ಚಿತ್ರ ಎರಡು ದಿನಗಳಿಂದ ಸರಾಸರಿ ಗಳಿಕೆ ಮಾಡುತ್ತಿವೆ ಎಂದು ಕರ್ನಾಟಕ ಚಲನಚಿತ್ರ ಪ್ರದರ್ಶಕರ ಸಂಘದ ಅಧ್ಯಕ್ಷ ಕೆ.ವಿ.ಚಂದ್ರಶೇಖರ್ ಹೇಳಿದರು.

'ಸದ್ಯಕ್ಕಂತೂ ಬೇರೆ ಭಾಷೆಗಳ ಚಿತ್ರಗಳು ಪ್ರದರ್ಶನ ಕಂಡಿಲ್ಲ. ಅಲ್ಲಿಂದ ಹೊಸ ಚಿತ್ರಗಳೂ ಬರುತ್ತಿಲ್ಲ. ಇರುವ ಪರಭಾಷಾ ಚಿತ್ರಗಳಿಗೆ ಪ್ರೇಕ್ಷಕರು ಅಷ್ಟಾಗಿ ಆಸಕ್ತಿ ತೋರುತ್ತಿಲ್ಲ' ಎಂದರು ಚಂದ್ರಶೇಖರ್.

'ಕೋವಿಡ್ ಮಾರ್ಗಸೂಚಿಗಳನ್ನು ಗರಿಷ್ಠ ಪಾಲನೆ ಮಾಡುತ್ತೇವೆ. ಟಿಕೆಟ್ ಬುಕ್ಕಿಂಗ್ ಆನ್‌ಲೈನ್‌ನಲ್ಲಿ ಆಗುವುದರಿಂದ ಸರದಿಯಲ್ಲಿ ನಿಲ್ಲುವವರ ಪ್ರಮಾಣ ಕಡಿಮೆ. ಪ್ರವೇಶ ಮತ್ತು, ನಿರ್ಗಮನದ ವೇಳೆ ಎಲ್ಲರೂ ಮಾಸ್ಕ್ ಧರಿಸಿರುವಂತೆ ನೋಡಿಕೊಳ್ಳಲು ಕಣ್ಗಾವಲು ಇಡಬೇಕಾಗುತ್ತದೆ. ಪ್ರೇಕ್ಷಕರೂ ಸ್ಪಂದಿಸುತ್ತಿದ್ದಾರೆ. ಆಗಾಗ ಕೋವಿಡ್ ಮಾರ್ಗಸೂಚಿ ಪಾಲನೆ ಸಂಬಂಧಿಸಿ ಸೂಚನೆಗಳನ್ನು ತೆರೆಯ ಮೇಲೆ ಪ್ರದರ್ಶಿಸುತ್ತೇವೆ' ಎಂದರು ಅವರು.

ಶಾಂತಿನಗರದ ಮನೆಯಲ್ಲಿ ಬೆಂಕಿ ಅವಘಡ

ಬೆಂಗಳೂರು: ಶಾಂತಿನಗರದ ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿರುವ ಮನೆಯೊಂದರಲ್ಲಿ ಸೋಮವಾರ ಸಂಜೆ ಬೆಂಕಿ ಅವಘಡ ಸಂಭವಿಸಿದ್ದು, ಮನೆಯಲ್ಲಿದ್ದ ಎಲೆಕ್ಟ್ರಾನಿಕ್ಸ್ ವಸ್ತುಗಳು ಹಾಗೂ ಪೀಠೋಪಕರಣಗಳು ಸಂಪೂರ್ಣವಾಗಿ ಸುಟ್ಟಿವೆ.

ನಂಜಪ್ಪ ವೃತ್ತದ ಸಮೀಪದಲ್ಲಿದ್ದ ಎರಡು ಮಹಡಿಯ ಮನೆಯೊಂದರ ಕೊಠಡಿಯಲ್ಲಿ ಸೋಮವಾರ ಸಂಜೆ ಕಾಣಿಸಿಕೊಂಡಿದ್ದ ಬೆಂಕಿ, ಕೆಲ ನಿಮಿಷಗಳಲ್ಲಿ ಇಡೀ ಮನೆ ಆವರಿಸಿತ್ತು. ಮೊದಲ ಹಾಗೂ ಎರಡನೇ ಮಹಡಿ ಮನೆಗೂ ಬೆಂಕಿ ತಗುಲಿತ್ತು

ಬೆಂಗಳೂರು ದಕ್ಷಿಣ, ಹೈಗ್ರೌಂಡ್ಸ್ ಹಾಗೂ ಜಯನಗರ ಅಗ್ನಿಶಾಮಕ ದಳದ ಸಿಬ್ಬಂದಿ, ಸ್ಥಳಕ್ಕೆ ಬಂದು ಬೆಂಕಿ ನಂದಿಸಿದರು.

'ಅವಘಡದಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ' ಎಂದು ದಳದ ಜಿಲ್ಲಾ ಅಧಿಕಾರಿ ಹೇಮಂತ್ ಕುಮಾರ್ ಹೇಳಿದರು.

ಬೊಮ್ಮಾಯಿ ಕ್ಷಮೆಯಾಚನೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತೀಯ ಗೂಂಡಾಗಿರಿ ಕುರಿತು ನೀಡಿರುವ ಹೇಳಿಕೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಾಪಸ್ ಪಡೆದು ಕ್ಷಮೆಯಾಚಿಸಬೇಕು ಎಂದು 'ಆಲ್ ಇಂಡಿಯಾ ಲಾಯರ್ಸ್ ಅಸೋಸಿಯೇಷನ್ ಫಾರ್ ಜಸ್ಟೀಸ್'(ಎಐಎಲ್‌ಎಜೆ) ಆಗ್ರಹಿಸಿದೆ.

ಪರಸ್ಪರರ ಭಾವನೆಗಳಿಗೆ ಧಕ್ಕೆ ಉಂಟಾದಾಗ ಸಹಜವಾಗಿ ಕ್ರಿಯೆ- ಪ್ರತಿಕ್ರಿಯೆಗಳು ಇದ್ದೇ ಇರುತ್ತವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಗಳೂರಿನಲ್ಲಿ ಇತ್ತೀಚೆಗೆ ಹೇಳಿಕೆ ನೀಡಿದ್ದರು.

'ಈ ಹೇಳಿಕೆ ನೀಡುವ ಮೂಲಕ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವಲ್ಲಿ ವಿಫಲವಾಗಿರುವ ಮುಖ್ಯಮಂತ್ರಿ ಅವರಿಗೆ ನೋಟಿಸ್ ನೀಡಲಾಗಿದೆ' ಎಂದು ಎಐಎಲ್‌ಎಜೆ ತಿಳಿಸಿದೆ.

'ಸಂವಿಧಾನಕ್ಕೆ ಬದ್ಧವಿರುವುದಾಗಿ ಸ್ವೀಕರಿಸಿರುವ ಪ್ರಮಾಣವಚನವನ್ನೇ ಬೊಮ್ಮಾಯಿ ಅವರು ಉಲ್ಲಂಘಿಸಿದ್ದಾರೆ' .ಎಂದು ಎಐಎಲ್‌ಎಜೆ ಸಂಚಾಲಕರಾದ ಮೈತ್ರೇಯಿ ಕೃಷ್ಣನ್ ತಿಳಿಸಿದ್ದಾರೆ.

'ಕರ್ನಾಟಕದಲ್ಲಿ ಕೋಮು ಹಿಂಸಾಚಾರ ಪ್ರಕರಣಗಳು ಹೆಚ್ಚುತ್ತಿರುವ ಸಂದರ್ಭದಲ್ಲೇ ಮುಖ್ಯಮಂತ್ರಿ ಅವರು ನೀಡಿದ ಹೇಳಿಕೆ ಆಘಾತಕಾರಿ. ರಾಜ್ಯದಲ್ಲಿ ಧಾರ್ಮಿಕ ಮೂಲಭೂತವಾದಿ ಸಂಘಟನೆಗಳಿಂದ ಹಿಂಸಾಚಾರ ಹೆಚ್ಚುತ್ತಿದೆ. ಈ ಸಂಘಟನೆಗಳಿಂದ ಜಾತ್ಯತೀತತೆ ಮತ್ತು ಸೌಹಾರ್ದದ ವಾತಾವರಣಕ್ಕೆ ಧಕ್ಕೆಯಾಗುತ್ತಿದೆ' ಎಂದು ತಿಳಿಸಿದ್ದಾರೆ.

'ಧರ್ಮ ಮತ್ತು ಜಾತಿ ಹೆಸರಿನಲ್ಲಿ ಕಾನೂನು ಕೈಗೆತ್ತಿಕೊಂಡು ಅಪರಾಧ ಕೃತ್ಯಗಳನ್ನು ನಡೆಸುವವರ ವಿರುದ್ಧ ಕಠಿಣ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

'ಮರ್ಯಾದೆಗೇಡಿ ಹತ್ಯೆಗಳನ್ನು ತಡೆಯಲು ಸುಪ್ರೀಂ ಕೋರ್ಟ್ ಹಲವಾರು ನಿರ್ದೇಶನಗಳನ್ನು ಈಗಾಗಲೇ ನೀಡಿದೆ. ಅಂತರ ಧರ್ಮೀಯ ಮತ್ತು ಅಂತರ್ಜಾತಿಯ ವಿವಾಹಗಳು ನಡೆದ ಸಂದರ್ಭದಲ್ಲಿ ವ್ಯಕ್ತಿಗಳ ರಕ್ಷಣೆಗಾಗಿ ಮತ್ತು ಕೋಮು ಸೌಹಾರ್ದ ಕಾಪಾಡುವ ನಿಟ್ಟಿನಲ್ಲಿ ನ್ಯಾಯಾಲಯ ನಿರ್ದೇಶನಗಳನ್ನು ನೀಡಲಾಗಿದೆ. ಈ ನಿರ್ದೇಶನಗಳನ್ನು ರಾಜ್ಯ ಸರ್ಕಾರ ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಸಿ.ಎಂ ಹೇಳಿಕೆ ವಾಪಸ್ ಪಡೆಯಲಿ'

ಬೆಂಗಳೂರು: 'ರಾಜ್ಯದಲ್ಲಿ ನಡೆಯುತ್ತಿರುವ ಮತೀಯ ಗೂಂಡಾಗಿರಿ, ದೌರ್ಜನ್ಯಗಳ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಗಳೂರಿನಲ್ಲಿ ನೀಡಿದ ಪ್ರತಿಕ್ರಿಯೆ ಖಂಡನೀಯ. ಅದನ್ನು ಕೂಡಲೇ ವಾಪಸ್ ಪಡೆಯಬೇಕು' ಎಂದು ಮಹಿಳಾ ಸಂಘಟನೆಗಳ ಒಕ್ಕೂಟ 'ನಾವೆದ್ದು ನಿಲ್ಲದಿದ್ದರೆ' ಆಗ್ರಹಿಸಿದೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್.ವಿಮಲಾ, 'ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಮಾತನಾಡಬೇಕೇ ಹೊರತು, ಆರ್‌ಎಸ್‌ಎಸ್ ಮುಖವಾಣಿಯಾಗಿ ಅಲ್ಲ. ಅವರು ಕೂಡಲೇ ಆ ಹೇಳಿಕೆಯನ್ನು ಹಿಂಪಡೆಯಬೇಕು' ಎಂದರು.

'ಸಂವಿಧಾನ ಪ್ರತಿಯೊಬ್ಬರಿಗೂ ಪ್ರೀತಿಸುವ ಹಾಗೂ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯದ ಹಕ್ಕನ್ನು ನೀಡಿದೆ.' ಎಂದರು.

'ಬೆಳಗಾವಿ ಪ್ರಕರಣದ ತನಿಖೆ ಹಾದಿ ತಪ್ಪದಂತೆ ಎಚ್ಚರಿಕೆ ವಹಿಸಬೇಕು. ಧರ್ಮಗಳ ನಡುವೆ ವಿಷದ ಬೀಜವನ್ನು ಬಿತ್ತುತ್ತಿರುವ ಧರ್ಮಾಂಧ, ಬಲಪಂಥೀಯ, ಮನುಷ್ಯ ವಿರೋಧಿ ಗುಂಪುಗಳನ್ನು ನಿಯಂತ್ರಣಕ್ಕೆ ತರಬೇಕು. ಯುವಜನರ ಮತ್ತು ಎಲ್ಲ ಧರ್ಮೀಯರ ಸಾಂವಿಧಾನಿಕ ಹಕ್ಕುಗಳ ರಕ್ಷಣೆಗೆ ಸರ್ಕಾರ ಬದ್ಧವಾಗಿರಬೇಕು' ಎಂದೂ ಹೇಳಿದರು. ಅಕ್ಕೈ ಪದ್ಮಶಾಲಿ ಹಾಗೂ ವಿವಿಧ ಮಹಿಳಾ ಸಂಘಟನೆಗಳ ಮುಖ್ಯಸ್ಥರು ಭಾಗವಹಿಸಿದ್ದರು.

ಕರ್ತವ್ಯನಿರತ ಪಿಎಸ್‌ಐ ಮೇಲೆ ಹಲ್ಲೆ

ಬೆಂಗಳೂರು: ಗೋವಿಂದಪುರ ಠಾಣೆ ವ್ಯಾಪ್ತಿಯಲ್ಲಿ ವಾಹನಗಳ ತಪಾಸಣೆ ಮಾಡುತ್ತಿದ್ದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಇಮ್ರಾನ್ ಖಾನ್ ಮೇಲೆ ಕಿಡಿಗೇಡಿಗಳ ಗುಂಪೊಂದು ಹಲ್ಲೆ ಮಾಡಿದ್ದು, ಈ ಬಗ್ಗೆ ಪ್ರಕರಣ ದಾಖಲಾಗಿದೆ.

'ಭಾನುವಾರ ರಾತ್ರಿ ನಡೆದಿರುವ ಘಟನೆಯಿಂದಾಗಿ ಇಮ್ರಾನ್ ಖಾನ್ ಗಾಯಗೊಂಡಿದ್ದು, ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಆನ್‌ಲೈನ್' ಕೆಲಸ: ವಂಚನೆ

ಬೆಂಗಳೂರು: 'ಆನ್‌ಲೈನ್' ಅರೆಕಾಲಿಕ ಕೆಲಸದ (ಪಾರ್ಟ್ ಟೈಂ ಜಾಬ್) ಆಮಿಷವೊಡ್ಡಿ ನಗರದ ಮಹಿಳೆಯೊಬ್ಬರಿಂದ ₹ 19.67 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಡಿವಾಳ ಮಾರುತಿನಗರದ 33 ವರ್ಷದ ಮಹಿಳೆ ವಂಚನೆ ಬಗ್ಗೆ ದೂರು ನೀಡಿದ್ದಾರೆ.' ಎಂದು ಪೊಲೀಸರು ಹೇಳಿದರು. 'ಮಹಿಳೆಗೆ ಆನ್‌ಲೈನ್‌ನಲ್ಲಿ ಜಾಲತಾಣವೊಂದರ ಮೂಲಕ ಆರೋಪಿಗಳ ಪರಿಚಯವಾಗಿತ್ತು.'

'ಆರೋಪಿಗಳು, ಅರ್ಜಿ ನಮೂನೆ ಭರ್ತಿ ಮಾಡುವಂತೆ ಲಿಂಕ್ ಕಳುಹಿಸಿದ್ದರು. ಆರೋಪಿಗಳ ಮಾತು ನಂಬಿದ್ದ ಮಹಿಳೆ, ಲಿಂಕ್ ತೆರೆದು ವೈಯಕ್ತಿಕ ಮಾಹಿತಿ ಭರ್ತಿ ಮಾಡಿದ್ದರು' ಎಂದರು.

ಡೇಟಿಂಗ್ ಆ್ಯಪ್ ಸ್ನೇಹ; ವಂಚನೆ

ಬೆಂಗಳೂರು: ಮೊಬೈಲ್ ಡೇಟಿಂಗ್ ಆ್ಯಪ್ ಸ್ನೇಹದಿಂದಾಗಿ ನಗರದ ಮಹಿಳೆಯೊಬ್ಬರು ₹ 18.26 ಲಕ್ಷ ಕಳೆದುಕೊಂಡಿದ್ದು, ಈ ಬಗ್ಗೆ ಕೇಂದ್ರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಆಸ್ಟಿನ್ ಟೌನ್ ನಿವಾಸಿಯಾಗಿರುವ 37 ವರ್ಷದ ಮಹಿಳೆ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿದಿದೆ' ಎಂದು ಪೊಲೀಸರು ಹೇಳಿದರು.

'ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಮಹಿಳೆಗೆ, ಮೊಬೈಲ್ ಡೇಟಿಂಗ್ ಆ್ಯಪ್‌ವೊಂದರಿಂದ ಆರೋಪಿ ಪರಿಚಯವಾಗಿತ್ತು. ನಂತರ ಇಬ್ಬರ ನಡುವೆ ಸ್ನೇಹ ಏರ್ಪಟ್ಟು ಸಲುಗೆಯಿಂದ ಮಾತನಾಡಲಾರಂಭಿಸಿದ್ದರು.'

'ವಿದೇಶದಲ್ಲಿ ನೆಲೆಸಿರುವುದಾಗಿ ಹೇಳಿದ್ದ ಆರೋಪಿ, ಮಹಿಳೆಯನ್ನು ಮದುವೆಯಾಗುವುದಾಗಿ ತಿಳಿಸಿದ್ದ. ನಿತ್ಯವೂ ಚಾಟಿಂಗ್ ಹಾಗೂ ಕರೆ ಮಾಡುತ್ತಿದ್ದ ಆರೋಪಿ, ಆರ್ಥಿಕವಾಗಿ ಸಂಕಷ್ಟದಲ್ಲಿರುವುದಾಗಿ ಹೇಳಿ, ಮಹಿಳೆಯಿಂದ ಹಲವು ಬ್ಯಾಂಕ್ ಖಾತೆಗಳಿಗೆ ₹ 18.29 ಲಕ್ಷ ಹಾಕಿಸಿಕೊಂಡಿದ್ದ' ಎಂದೂ ಪೊಲೀಸರು ತಿಳಿಸಿದರು.

'ಹಣ ಪಡೆದ ನಂತರ ಆರೋಪಿ, ಆ್ಯಪ್‌ನಲ್ಲಿದ್ದ ತನ್ನ ಖಾತೆಯನ್ನು ಅಳಿಸಿದ್ದಾನೆ. ನಕಲಿ ಖಾತೆ ತೆರೆದು ಆರೋಪಿ ವಂಚಿಸಿರುವ ಮಾಹಿತಿ ಇದೆ' ಎಂದೂ ಹೇಳಿದರು.

₹ 1.95 ಲಕ್ಷ ಕಿತ್ತ ಲಂಡನ್ ವರ

ಬೆಂಗಳೂರು: ವೈವಾಹಿಕ ಜಾಲತಾಣದ ಮೂಲಕ ಪರಿಚಯವಾಗಿದ್ದ ವ್ಯಕ್ತಿಯೊಬ್ಬ ಉಡುಗೊರೆ ಆಮಿಷವೊಡ್ಡಿ ನಗರದ ಯುವತಿಯೊಬ್ಬರಿಂದ ₹ 1.95 ಲಕ್ಷ ಪಡೆದು ವಂಚಿಸಿದ್ದಾನೆ. ಈ ಬಗ್ಗೆ ಕೇಂದ್ರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸದಾಶಿವನಗರ ನಿವಾಸಿಯಾಗಿರುವ ಯುವತಿ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ದೀಪಕ್ ಹಮೀಶ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಹಾಗೂ ಯುವತಿ ವೈವಾಹಿಕ ಜಾಲತಾಣವೊಂದರಲ್ಲಿ ನಿತ್ಯವೂ ಚಾಟಿಂಗ್ ಹಾಗೂ ಮಾತುಕತೆ ನಡೆಸುತ್ತಿದ್ದರು. ಪ್ರೀತಿಯ ಸಂಕೇತವಾಗಿ ಉಡುಗೊರೆ ಕಳುಹಿಸುವುದಾಗಿ ಆರೋಪಿ ಹೇಳಿದ್ದ.'

'ಕೆಲ ದಿನ ಬಿಟ್ಟು ಕಸ್ಟಮ್ಸ್ ಅಧಿಕಾರಿ ಸೋಗಿನಲ್ಲಿ ಯುವತಿಗೆ ಕರೆ ಮಾಡಿದ್ದ ಮಹಿಳೆಯೊಬ್ಬಳು, 'ನಿಮ್ಮ ಗೆಳೆಯ ದೀಪಕ್ ಹಮೀಶ್ ಎಂಬುವರು ಉಡುಗೊರೆ ಕಳುಹಿಸಿದ್ದಾರೆ. ಅದು ಸದ್ಯ ವಿಮಾನ ನಿಲ್ದಾಣದಲ್ಲಿ ಇದೆ. ನಿಮ್ಮ ವಿಳಾಸಕ್ಕೆ ಕಳುಹಿಸಬೇಕಾದರೆ, ಕೆಲ ಶುಲ್ಕಗಳನ್ನು ಪಾವತಿಸಬೇಕು' ಎಂದಿದ್ದಳು. ಅದನ್ನು ನಂಬಿದ್ದ ಯುವತಿ, ಆರೋಪಿ ನೀಡಿದ್ದ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ₹ 1.95 ಲಕ್ಷ ಜಮೆ ಮಾಡಿದ್ದರು. ಅದಾದ ನಂತರ, ಆರೋಪಿಗಳು ನಾಪತ್ತೆಯಾಗಿದ್ದಾರೆ' ಎಂದೂ ಪೊಲೀಸರು ವಿವರಿಸಿದರು.

ನಾಳೆಯಿಂದ ಪುರಂದರದಾಸರ ಸಂಗೀತ ಆರಾಧನೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 'ಸಂತ ಪುರಂದರದಾಸರ ಆರಾಧನಾ ಸಮಿತಿ' ಸಹಯೋಗದಲ್ಲಿ ಅಕ್ಟೋಬರ್ 20 ರಿಂದ 24ರ ವರೆಗೆ ಪುರಂದರದಾಸರ 'ಸಂಗೀತ ಆರಾಧನೆ' ಕಾರ್ಯಕ್ರಮ ಹಮ್ಮಿಕೊಂಡಿದೆ.

ಬೆಂಗಳೂರಿನ ಮಲ್ಲತ್ತಹಳ್ಳಿ ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ ಭವನದಲ್ಲಿ ಕಾರ್ಯಕ್ರಮಗಳು ನಡೆಯಲಿವೆ.

ಅಕ್ಟೋಬರ್ 20 ರಂದು ಬುಧವಾರ ಸಂಜೆ 4ಕ್ಕೆ ಕಾರ್ಯಕ್ರಮದ ಉದ್ಘಾಟನೆ ನಡೆಯಲಿದೆ. ನಿತ್ಯ ಸಂಜೆ 5 ರಿಂದ ಹೆಸರಾಂತ ಸಂಗೀತ ಕಲಾವಿದರಿಂದ ಸಂಗೀತ ಕಾರ್ಯಕ್ರಮಗಳು ನಡೆಯಲಿದ್ದು, ಪ್ರಜಾವಾಣಿ ಫೇಸ್‌ಬುಕ್ (fb.com/prajavani/net) ಪುಟದಲ್ಲಿ ನೇರ ಪ್ರಸಾರ ಕಾಣಲಿವೆ.

ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಆರಾಧನಾ ಸಮಿತಿಯ ಪೋಷಕ ವಿದ್ಯಾ ಭೂಷಣ, ಕನ್ನಡ-ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್.ರಂಗಪ್ಪ, ಆರಾಧನಾ ಸಮಿತಿ ಅಧ್ಯಕ್ಷ ಟಿ.ಎಸ್.ನಾಗಾಭರಣ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಅವರು ಕಾರ್ಯಕ್ರಮದ ವಿನ್ಯಾಸ ಮತ್ತು ನಿರ್ವಹಣೆಯ ಜವಾಬ್ದಾರಿ ವಹಿಸಿಕೊಂಡಿದ್ದಾರೆ.

ಭದ್ರತಾ ಸಿಬ್ಬಂದಿ ಆಗಿದ್ದ ಆರೋಪಿಗಳು

ಕಳವು: ನೇಪಾಳದ ಐವರ ಬಂಧನ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳವು ಮಾಡಿದ್ದ ಆರೋಪದಡಿ ನೇಪಾಳದ ಐವರು ಆರೋಪಿಗಳನ್ನು ಗೋವಿಂದಪುರ ಪೊಲೀಸರು ಬಂಧಿಸಿದ್ದಾರೆ.

'ಮೀನಾ ರಾಜ್ ಭಟ್ (37), ನಾರಾಯಣ್ ಶ್ರೇಷ್ಠಾ (46), ತುಲಾರಾಮ್ ಭಟ್ (33), ಸಲೀಂ ಪಾಷಾ (24), ಶಿವ ಭಂಡಾರಿ (37) ಬಂಧಿತರು. ಅವರಿಂದ ₹ 10.89 ಲಕ್ಷ ಮೌಲ್ಯದ ಚಿನ್ನಾಭರಣ, ಕಾರು, ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಏಜೆನ್ಸಿಯೊಂದರ ಮೂಲಕ ಭದ್ರತಾ ಸಿಬ್ಬಂದಿ ಆಗಿ ಕೆಲಸಕ್ಕೆ ಸೇರಿದ್ದರು. ಅಪಾರ್ಟ್‌ಮೆಂಟ್ ಸಮುಚ್ಚಯ ಹಾಗೂ ಕೆಲ ಕಂಪನಿಗಳ ಕಚೇರಿಗಳ ಭದ್ರತೆಗಾಗಿ ಆರೋಪಿಗಳನ್ನು ನಿಯೋಜಿಸಲಾಗಿತ್ತು' ಎಂದೂ ತಿಳಿಸಿದರು.

'ಎಚ್.ಬಿ.ಆರ್ ಬಡಾವಣೆಯಲ್ಲಿ ಇತ್ತೀಚೆಗೆ ಕೆಲ ಮನೆಗಳಲ್ಲಿ ಕಳ್ಳತನ ನಡೆದಿತ್ತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ ಆರೋಪಿಗಳು ಸಿಕ್ಕಿಬಿದ್ದರು' ಎಂದರು.

'ಐಷಾರಾಮಿ ಜೀವನ ನಡೆಸುವುದಕ್ಕಾಗಿ ಆರೋಪಿಗಳೇ ತಂಡ ಕಟ್ಟಿಕೊಂಡು ಕೃತ್ಯ ಎಸಗುತ್ತಿದ್ದರು' ಎಂದೂ ಪೊಲೀಸರು ತಿಳಿಸಿದರು.

'105 ಗ್ರಾಂ ಚಿನ್ನಾಭರಣ, 1,290 ಗ್ರಾಂ ಬೆಳ್ಳಿ ಸಾಮಗ್ರಿ, 8 ವಿದೇಶಿ ಕರೆನ್ಸಿ ಹಾಗೂ ₹ 12,000 ನಗದು ಆರೋಪಿಗಳ ಬಳಿ ಸಿಕ್ಕಿದೆ' ಎಂದರು.

ಬೊಮ್ಮನಹಳ್ಳಿ ಭಾಗದ ಮಳೆಹಾನಿ ಪ್ರದೇಶಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭೇಟಿ

ಪರಿಷ್ಕೃತ ಮಹಾಯೋಜನೆ ರೂಪಿಸಲು ಕ್ರಮ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: 'ನಗರದ ಒಳಚರಂಡಿ ವ್ಯವಸ್ಥೆ ಸರಿಪಡಿಸಲು ವಿಶೇಷ ಸಭೆ ಕರೆಯಲಾಗುವುದು. ನಗರದ ಪರಿಷ್ಕೃತ ಮಹಾ ಯೋಜನೆ ರೂಪಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕಳೆದ ಹಲವು ದಿನಗಳಿಂದ ಸುರಿದ ಭಾರಿ ಮಳೆಯಿಂದ ಹಾನಿಯಾಗಿರುವ ಬೊಮ್ಮನಹಳ್ಳಿ ಭಾಗದ ಎಚ್‌ಎಸ್‌ಆರ್ ಬಡಾವಣೆಯ ಜೆಎಸ್‌ಎಸ್ ಕಾಲೇಜು, ಜಾಕಿ ಶೋರೂಂ, ಸಿಲ್ಕ್ ಬೋರ್ಡ್ ಜಂಕ್ಷನ್, ಹೊಸೂರು ರಸ್ತೆಯ ಆಕ್ಸ್‌ಫರ್ಡ್ ಕಾಲೇಜು, ಮಡಿವಾಳ ಬಳಿಯ ರಾಜಕಾಲುವೆಗಳನ್ನು ಪರಿಶೀಲಿಸಿದರು.

'ಯೋಜನೆ ಇಲ್ಲದೇ ಅವೈಜ್ಞಾನಿಕವಾಗಿ ನಗರ ಕಟ್ಟಿದರೆ ಇಂತಹ ಸಮಸ್ಯೆಗಳು ಎದುರಾಗುತ್ತವೆ. ಆದ್ದರಿಂದ ಮುಂದಿನ 25 ವರ್ಷಗಳಿಗೆ ಬೇಕಾಗುವ ಪರಿಷ್ಕೃತ ನಗರ ಮಹಾ ಯೋಜನೆ ತಯಾರಿಸಲು ಸೂಚನೆ ನೀಡಿದ್ದೇನೆ' ಎಂದರು.

'ಅಗರ ಸುತ್ತಲಿನ ಬಡಾವಣೆಗಳಿಗೆ ಪ್ರತ್ಯೇಕ ಚರಂಡಿ ನಿರ್ಮಾಣ ಕಾರ್ಯವನ್ನು 4-5 ತಿಂಗಳಲ್ಲಿ ಪೂರ್ಣಗೊಳಿಸಲು ಸೂಚಿಸಲಾಗಿದೆ. ಒಳಚರಂಡಿ ಹಾಗೂ ಕೊಳಚೆ ನೀರು ಪ್ರತ್ಯೇಕಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಅಗರ ಎಸ್‌ಟಿಪಿ ಘಟಕದ ಸಾಮರ್ಥ್ಯ 35 ಎಂಎಲ್‌ಡಿ ಇದ್ದರೂ ಕೇವಲ 25 ಎಂಎಲ್‌ಡಿ ನೀರು ಸಂಸ್ಕರಿಸಲಾಗುತ್ತಿದೆ. ಶುದ್ಧೀಕರಣಗೊಂಡ ನೀರು ಮತ್ತೆ ಚರಂಡಿ ಸೇರುತ್ತಿರುವುದನ್ನು ಗಮನಿಸಿದ್ದೇನೆ. ತಕ್ಷಣವೇ ಸರಿಪಿಸಲು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸೂಚನೆ ನೀಡಿದ್ದೇನೆ' ಎಂದು ಹೇಳಿದರು.

ಮಡಿವಾಳ ಕೆರೆಗೆ ಹೊಂದಿಕೊಂಡಂತೆ ಇರುವ 4 ಎಂಎಲ್‌ಡಿ ಎಸ್‌ಟಿಪಿ ಘಟಕ ಕಾರ್ಯಾರಂಭ ಮಾಡಿಲ್ಲ. 4-5 ತಿಂಗಳ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಲಾಗಿದೆ ಎಂದರು.

'ಎತ್ತರದ ಪ್ರದೇಶಗಳ ಹಲವು ಕೆರೆಗಳಿಂದ ತಗ್ಗು ಪ್ರದೇಶವಾದ ಬೊಮ್ಮನಹಳ್ಳಿ ಭಾಗಕ್ಕೆ ಹರಿದು ಬರುತ್ತಿದೆ. ಇದರಿಂದಾಗಿ ಜನ ತೊಂದರೆ ಅನುಭವಿಸುತ್ತಿದ್ದಾರೆ. ತಾತ್ಕಾಲಿಕ ಪರಿಹಾರದ ಬದಲು ಶಾಶ್ವತ ಪರಿಹಾರ ರೂಪಿಸಬೇಕಿದೆ. ವೈಜ್ಞಾನಿಕವಾಗಿ ಒಳಚರಂಡಿ ನಿರ್ಮಾಣ ಆಗಬೇಕಿದೆ. ಅದನ್ನು ಒಮ್ಮೆಲೆ ಮಾಡಲು ಸಾಧ್ಯವಿಲ್ಲ. ಹಂತ-ಹಂತವಾಗಿ ಸಮಸ್ಯೆ ಬಗೆಹರಿಸಲಾಗುವುದು' ಎಂದು ಭರವಸೆ ನೀಡಿದರು.

'ಸಮನ್ವಯದ ಕೊರತೆ': 'ಬಿಬಿಎಂಪಿ, ಜಲಮಂಡಳಿ ಮತ್ತು ಬೆಸ್ಕಾಂ ನಡುವೆ ಸಮನ್ವಯ ಕೊರತೆ ಕಾಣುತ್ತಿದ್ದು, ಇದರಿಂದ ಅನೇಕ ಸಮಸ್ಯೆಗಳು ನಗರವನ್ನು ಕಾಡುತ್ತಿವೆ' ಎಂದು ಮುಖ್ಯಮಂತ್ರಿ ಹೇಳಿದರು.

'ಸಮನ್ವಯ ಸಾಧಿಸಲು ಅಗತ್ಯ ಯೋಜನೆ ರೂಪಿಸಲು ಸದ್ಯದಲ್ಲೇ ಉನ್ನತ ಮಟ್ಟದ ಸಭೆ ಕರೆಯಲಾಗುವುದು' ಎಂದು ತಿಳಿಸಿದರು.

ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ, ಜಲಮಂಡಳಿ ಅಧ್ಯಕ್ಷ ಎನ್.ಜಯರಾಂ ಇದ್ದರು.



ಎಚ್‌ಎಸ್‌ಆರ್ ಬಡಾವಣೆ ಬಳಿ ಉಕ್ಕಿ ಹರಿಯುತ್ತಿರುವ ಚರಂಡಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪರಿಶೀಲಿಸಿದರು. ಶಾಸಕ ಸತೀಶ್ ರೆಡ್ಡಿ, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಇದ್ದಾರೆ

ಸಂಸ್ಕರಿಸಿದ ನೀರು ಮತ್ತೆ ಚರಂಡಿಗೆ

ಸಂಸ್ಕರಿಸಿದ ನೀರನ್ನೂ ಚರಂಡಿಗೆ ಹರಿಸುತ್ತಿರುವುದನ್ನು ಶಾಸಕ ಸತೀಶ್ ರೆಡ್ಡಿ ಅವರು ಮುಖ್ಯಮಂತ್ರಿ ಅವರ ಗಮನಕ್ಕೆ ತಂದರು.

'ಅಗರ ಕೆರೆಯಲ್ಲಿ 35 ಎಂಎಲ್‌ಡಿ ಸಾಮರ್ಥ್ಯದ ಸಂಸ್ಕರಣಾ ಘಟಕದಿಂದ ನೀರು ಸಂಸ್ಕರಣೆ ಆಗುತ್ತಿದ್ದರೂ ಪ್ರಯೋಜನಕ್ಕೆ ಬರುತ್ತಿಲ್ಲ' ಎಂದು ಮುಖ್ಯಮಂತ್ರಿ ಎದುರು ದೂರಿದರು.


ಪ್ರವಾಹ ಪೀಡಿತ ಪ್ರದೇಶಗಳಿಗೆ ಸಿಎಂ ದಿಢೀರ್ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ವಾರದಿಂದ ನಗರದಲ್ಲಿ ಸುರಿದ ಭಾರಿ ಮಳೆಯಿಂದ ನಗರದ ಬೊಮ್ಮನಹಳ್ಳಿ ವಲಯದ ಎಚ್‌ಎಸ್‌ಆರ್ ಬಡಾವಣೆಯಲ್ಲಿ ಪ್ರವಾಹ ಉಂಟಾದ ಪ್ರದೇಶಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೋಮವಾರ ದಿಢೀರ್ ಭೇಟಿ ನೀಡಿದರು.

ಎಚ್‌ಎಸ್‌ಆರ್ ಬಡಾವಣೆಯ ಅಗರ ಕೆರೆ ಆಸುಪಾಸಿನಲ್ಲಿ ಮನೆಗಳಿಗೆ ನೀರು ನುಗ್ಗಿರುವ ತಗ್ಗುಪ್ರದೇಶಗಳಿಗೆ ಭೇಟಿ ನೀಡುವ ಮುನ್ನ ಸುದ್ದಿಗಾರರ ಜೊತೆ ಮಾತನಾಡಿದ ಮುಖ್ಯಮಂತ್ರಿ, 'ನಗರದಲ್ಲಿ ಕೆಲವು ಕಡೆ ಪ್ರವಾಹ ಬಂದು ಜನವಸತಿಗಳಿಗೆಲ್ಲ ಸಾಕಷ್ಟು ತೊಂದರೆ ಆಗಿದೆ. ಅತಿ ಹೆಚ್ಚು ಮಳೆಯಾದ ಕೆಲವು ಪ್ರದೇಶಗಳಿಗೆ ಭೇಟಿ ನೀಡುತ್ತಿದ್ದೇನೆ. ಈ ತರಹ ಎಲ್ಲೆಲ್ಲಿ ಸಮಸ್ಯೆ ಉಂಟಾಗಿದೆ ಎಂಬುದನ್ನು ಪರಿಶೀಲಿಸುತ್ತೇನೆ. ಇಂದು ಕೆಲವು ಪ್ರದೇಶಗಳಿಗೆ ಮಾತ್ರ ಭೇಟಿ ನಿಡುತ್ತೇನೆ. ಇನ್ನುಳಿದ ಪ್ರದೇಶಗಳಿಗೆ ಮುಂದೆ ಭೇಟಿ ನೀಡುತ್ತೇನೆ. ಪ್ರವಾಹ ತಪ್ಪಿಸಲು ಸೂಕ್ತ ಕಾಮಗಾರಿ ನಡೆಸಲು ಅಧಿಕಾರಿಗಳಿಗೆ ನಿರ್ದೇಶನ ನೀಡುತ್ತೇನೆ. ಸಂತ್ರಸ್ತರಿಗೆ ಪರಿಹಾರ ನೀಡಲು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡುತ್ತೇನೆ' ಎಂದರು.

ಪದೇ ಪದೇ ಗಡುವು ನೀಡಿದರೂ ಬೆಂಗಳೂರಿನ ರಸ್ತೆ ಗುಂಡಿಗಳನ್ನು ಮುಚ್ಚದಿರುವ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಈ ಬಗ್ಗೆಯೂ ಬಿಬಿಎಂಪಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುತ್ತೇನೆ' ಎಂದರು.



ಕೋವಿಡ್ ಪ್ರಕರಣಗಳು 100ಕ್ಕಿಂತ ಕಡಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ಗಣನೀಯ ಇಳಿಕೆ ಕಂಡಿವೆ. ಸೋಮವಾರ 83 ಮಂದಿಗೆ ಸೋಂಕು ತಗುಲಿರುವುದು ಖಾತರಿಯಾಗಿದೆ. ರಾಜ್ಯದಲ್ಲಿ ಎರಡನೇ ಅಲೆ ಕಾಣಿಸಿಕೊಂಡ ನಂತರ ವರದಿಯಾದ ಅತಿ ಕಡಿಮೆ ಪ್ರಕರಣ ಇದಾಗಿದೆ.

ಈ ವರ್ಷದ ಮಾರ್ಚ್ ಮೂರನೇ ವಾರದಲ್ಲಿ ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡಿತ್ತು. ಬಳಿಕ ಹೊಸ ಪ್ರಕರಣಗಳು ಏರುಗತಿ ಪಡೆದುಕೊಂಡಿದ್ದವು. ಹೀಗಾಗಿ ಆಮ್ಲಜನಕದ ಅಭಾವ ಸೃಷ್ಟಿಯಾಗಿತ್ತು. ಆಮ್ಲಜನಕ ಸಹಿತ ಹಾಸಿಗೆಗಳ ಸಮಸ್ಯೆಯೂ ತಲೆದೋರಿತ್ತು. ಆಗಸ್ಟ್ ಬಳಿಕ ಇತರ ಜಿಲ್ಲೆಗಳಲ್ಲಿ ಪ್ರಕರಣಗಳು ಕಡಿಮೆಯಾದರೂ ಬೆಂಗಳೂರಿನಲ್ಲಿ ಮಾತ್ರ ಸಾವಿರದ ಆಸುಪಾಸಿನಲ್ಲೇ ಇದ್ದವು. ಸೆಪ್ಟೆಂಬರ್ ನಂತರ ಹೊಸ ಪ್ರಕರಣಗಳು ಇಳಿಮುಖವಾಗಿದ್ದವು.

ಬೆಂಗಳೂರು ನಗರದ ಕೋವಿಡ್ ಅಂಕಿ-ಅಂಶ

12,49,501 ಒಟ್ಟು ಸೋಂಕಿತರು (12,49,245 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
6,745	12,26,541	16,214

ದಿನದ ಏರಿಕೆ	
ಹೊಸ ಪ್ರಕರಣ	83
ಗುಣಮುಖ	151
ಸಾವು	04

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್: ಶೇ 5.61ಕ್ಕೇರಿದ ಮರಣ ದರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಮೃತರ ಸಂಖ್ಯೆ ದಿಢೀರ್ ಏರಿದೆ. ಸೋಮವಾರ ಒಟ್ಟು 12 ಮಂದಿ ಅಸುನೀಗಿದ್ದಾರೆ. ಈವರೆಗೆ ಮೃತಪಟ್ಟವರ ಸಂಖ್ಯೆ 37,953ಕ್ಕೆ ಹೆಚ್ಚಿದ್ದು, ಮರಣ ಪ್ರಮಾಣ ದರವು ಶೇ 5.61ಕ್ಕೆ ಏರಿಕೆಯಾಗಿದೆ.

ಕೊರೊನಾ ಸೋಂಕಿತರ ಸಂಖ್ಯೆ ಇಳಿಮುಖವಾಗಿದೆ. ಒಂದು ದಿನದಲ್ಲಿ 214 ಜನರಿಗೆ ಸೋಂಕು ತಗುಲಿದ್ದು, ಈವರೆಗೆ 29.83 ಲಕ್ಷ ಮಂದಿ ಸೋಂಕಿಗೊಳಪಟ್ಟಂತಾಗಿದೆ. ಕೋವಿಡ್ ದೃಢ ಪ್ರಮಾಣವು ಶೇ 0.27ರಷ್ಟಿದೆ.

ಕೋವಿಡ್ ಪೀಡಿತರ ಪೈಕಿ 488 ಜನರಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ 29.36 ಲಕ್ಷ ಮಂದಿ ಗುಣಮುಖರಾದಂತಾಗಿದೆ. ಸಕ್ರಿಯ ಪ್ರಕರಣಗಳು ಮತ್ತಷ್ಟು ಇಳಿಕೆಯಾಗಿವೆ. ಸದ್ಯ 9,164 ಜನ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಹಿಂದಿನ 24 ಗಂಟೆಗಳಲ್ಲಿ 77,901 ಮಾದರಿಗಳನ್ನು ಪರೀಕ್ಷಿಸಲಾಗಿದೆ.

ಬೆಂಗಳೂರಿನಲ್ಲಿ ಹೊಸ ಪ್ರಕರಣಗಳು ಗಣನೀಯ ಇಳಿಕೆ ಕಂಡಿವೆ. ಸೋಮವಾರ 83 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದೆ. ದಕ್ಷಿಣ ಕನ್ನಡ (22), ಹಾಸನ (13), ಮೈಸೂರು (27), ಶಿವಮೊಗ್ಗ (13) ಮತ್ತು ತುಮಕೂರಿನಲ್ಲೂ (14) ಹೊಸ ಪ್ರಕರಣಗಳು ಕಡಿಮೆ ಇವೆ. ಬಾಗಲಕೋಟೆ, ಬೆಳಗಾವಿ, ಚಿಕ್ಕಬಳ್ಳಾಪುರ, ದಾವಣಗೆರೆ, ಧಾರವಾಡ, ಗದಗ, ಹಾವೇರಿ, ಕೊಪ್ಪಳ, ರಾಯಚೂರು, ರಾಮನಗರ, ವಿಜಯಪುರ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. 12 ಜಿಲ್ಲೆಗಳಲ್ಲಿ ಇದು ಒಂದಂಕಿಯಷ್ಟಿದೆ.

ಬೆಂಗಳೂರಿನಲ್ಲಿ 4 ಮರಣ ಪ್ರಕರಣಗಳು ವರದಿಯಾಗಿವೆ. ಮೈಸೂರಿನಲ್ಲಿ ಇಬ್ಬರು ಅಸುನೀಗಿದ್ದಾರೆ. ಚಿಕ್ಕಬಳ್ಳಾಪುರ, ಹಾಸನ, ಕೊಡಗು, ಮಂಡ್ಯ, ತುಮಕೂರು ಹಾಗೂ ಉಡುಪಿ ಜಿಲ್ಲೆಗಳಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮೃತರೆಲ್ಲರೂ 48 ವರ್ಷ ಮೇಲ್ಪಟ್ಟವರು.

ವಿಮಾನ ಪ್ರಯಾಣಿಕರಿಗೆ ಆರ್‌ಟಿಪಿಸಿಆರ್ ಪರೀಕ್ಷಾ ವರದಿಯಿಂದ ವಿನಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೊರ ದೇಶಗಳಿಂದ ವಿಮಾನ ಮೂಲಕ ರಾಜ್ಯಕ್ಕೆ ಬರುವ ಪ್ರಯಾಣಿಕರಿಗೆ ಅನುಕೂಲವಾಗುವಂತೆ ವಿಮಾನ ನಿಲ್ದಾಣದಲ್ಲಿ 'ರಕ್ತದಲ್ಲಿ ಆಮ್ಲಜನಕ ಪ್ರಮಾಣ' ಪತ್ತೆ ಕಡ್ಡಾಯ ಪರೀಕ್ಷೆಯನ್ನು ಕೈಬಿಡಬಹುದು. ಆದರೆ, ಜ್ವರ, ಕೆಮ್ಮು, ಶೀತ, ಉಸಿರಾಟ ತೊಂದರೆ ಸೇರಿದಂತೆ ಇತರೆ ಸಮಸ್ಯೆ ಇರುವವರನ್ನು ತಪಾಸಣೆಗೆ ಒಳಪಡಿಸಬೇಕು' ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಸೂಚನೆಯಂತೆ ಮಾರ್ಗಸೂಚಿಯನ್ನು ಸಡಿಲಿಸಿ ಸೋಮವಾರ ಪರಿಷ್ಕೃತ ಆದೇಶ ಹೊರಡಿಸಿರುವ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, 'ಕೇಂದ್ರ ಸರ್ಕಾರ ಗುರುತಿಸಿರುವ ಆಯ್ದ ದೇಶಗಳನ್ನು ಹೊರತುಪಡಿಸಿ ಇತರ ದೇಶಗಳಿಂದ ರಾಜ್ಯಕ್ಕೆ ಬರುವ ಪ್ರಯಾಣಿಕರಿಗೆ ಆರ್‌ಟಿಪಿಸಿಆರ್ ಪರೀಕ್ಷಾ ವರದಿಯಿಂದ ವಿನಾಯಿತಿ ನೀಡಲಾಗಿದೆ' ಎಂದು ತಿಳಿಸಿದ್ದಾರೆ.

'ಏರ್ ಸುವಿಧಾ' ಪೋರ್ಟಲ್‌ನಲ್ಲೇ ಆರ್‌ಟಿಪಿಸಿಆರ್ ಪರೀಕ್ಷಾ ವರದಿ ಅಪ್‌ಲೋಡ್ ಮಾಡಿ ಸಂಬಂಧಪಟ್ಟ ವೈಮಾನಿಕ ಸಂಸ್ಥೆಗಳು ಬೋರ್ಡಿಂಗ್‌ಗೆ ಮೊದಲು ಪರಿಶೀಲನೆ ನಡೆಸಿರುವುದರಿಂದ ರಾಜ್ಯಕ್ಕೆ ಬಂದಾಗ ಮತ್ತೆ ವರದಿ ಪರಿಶೀಲಿಸುವ ಅಗತ್ಯ ಇಲ್ಲ. ಆಟೋಮೇಟೆಡ್ ಥರ್ಮಲ್ ಕ್ಯಾಮೆರಾಗಳ ಮೂಲಕ ಪ್ರಯಾಣಿಕರ ಮೇಲ್ವಿಚಾರಣೆ ವ್ಯವಸ್ಥೆಯನ್ನು ಮತ್ತೆ ಆರಂಭಿಸಬಹುದು ಎಂದು ಸೂಚಿಸಲಾಗಿದೆ.

ಇಂಗ್ಲೆಂಡ್‌ನಿಂದ ರಾಜ್ಯಕ್ಕೆ ಬರುವ ಪ್ರಯಾಣಿಕರ ಕ್ವಾರೆಂಟೈನ್‌ಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸಬೇಕು. ಈ ಬಗ್ಗೆ ಆರೋಗ್ಯ ಇಲಾಖೆ ಸ್ಪಷ್ಟ ವಿವರ ನೀಡಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ವಿನಯ ಕುಲಕರ್ಣಿ ಅರ್ಜಿ ವಜಾ

ಬೆಂಗಳೂರು: ಧಾರವಾಡ ಜಿಲ್ಲಾ ಪಂಚಾಯತಿ ಸದಸ್ಯರಾಗಿದ್ದ ಯೋಗೀಶಗೌಡ ಹತ್ಯೆ ಪ್ರಕರಣದಲ್ಲಿ ಸಿಬಿಐ ತನಿಖೆ ಪ್ರಶ್ನಿಸಿ ವಿನಯ ಕುಲಕರ್ಣಿ ಮತ್ತು ಇತರರು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ವಿಚಾರಣೆ ಪೂರ್ಣಗೊಂಡರೆ ಸತ್ಯಾಂಶ ಹೊರಗೆ ಬರುತ್ತದೆ. ಹೀಗಾಗಿ, ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯ ಇಲ್ಲ ಎಂದು ನ್ಯಾಯಮೂರ್ತಿ ಬಿ.ವೀರಪ್ಪ ಮತ್ತು ನ್ಯಾಯಮೂರ್ತಿ ಎನ್.ಎಸ್. ಸಂಜಯಗೌಡ ಒಳಗೊಂಡ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿತು.

ಆರೋಪಿಗಳಾದ ವಿನಯ ಕುಲಕರ್ಣಿ, ಬಸವರಾಜ ಶಿವಪ್ಪ ಮುತ್ತಗಿ, ವಿನಾಯಕ್, ಚಂದ್ರಶೇಖರ ಇಂಡಿ ಮತ್ತು ಸೋಮಶೇಖರ್ ಅರ್ಜಿ ಸಲ್ಲಿಸಿದ್ದರು. ತನಿಖೆ ನಡೆಸಲು ಸಿಬಿಐಗೆ ಅನುಮತಿ ನೀಡಿ 2019 ಸೆಪ್ಟೆಂಬರ್ 6ರಂದು ಸರ್ಕಾರ ಹೊರಡಿಸಿದ್ದ ಆದೇಶ ಮತ್ತು ಅದನ್ನು ಆಧರಿಸಿ ಸಿಬಿಐ ದಾಖಲಿಸಿಕೊಂಡ ಎಫ್‌ಐಆರ್ ಅನ್ನು ಅರ್ಜಿದಾರರು ಪ್ರಶ್ನಿಸಿದ್ದರು.

ಸ್ಥಳೀಯ ತನಿಖಾಧಿಕಾರಿಗಳು ನ್ಯಾಯಸಮ್ಮತ ತನಿಖೆ ನಡೆಸಿಲ್ಲ. ತನಿಖೆ ದುರ್ಬಲಗೊಳಿಸಿದ ಆರೋಪದಲ್ಲಿ ಅವರನ್ನು ಆರೋಪಿಗಳೆಂದು ಸಿಬಿಐ ಪರಿಗಣಿಸಿದೆ. ಯಾವುದೇ ಆದೇಶಗಳ ಪ್ರಭಾವಕ್ಕೂ ಒಳಗಾಗದೆ ಸ್ವತಂತ್ರ ತನಿಖೆ ನಡೆಸುವಂತೆ ಪೀಠ ಸಿಬಿಐಗೆ ನಿರ್ದೇಶನ ನೀಡಿತು.

2016ರ ಜೂನ್ 15ರಂದು ಯೋಗೀಶಗೌಡ ಹತ್ಯೆಯಾಗಿತ್ತು. 2020 ನವೆಂಬರ್ 5ರಂದು ವಿನಯ ಕುಲಕರ್ಣಿ ಬಂಧನವಾಗಿತ್ತು.

'ಬೆಂಗಳೂರಿನಲ್ಲಿ ಆರಂಭವಾಗಲಿದೆ ಜಿಐಐ ಕಚೇರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಯುಕ್ತ ಅರಬ್ ಸಂಸ್ಥಾನದ (ಯುಎಇ) ಗಲ್ಫ್ ಇಸ್ಲಾಮಿಕ್ ಹೂಡಿಕೆ (ಜಿಐಐ) ಸಂಸ್ಥೆಯು ಬೆಂಗಳೂರಿನಲ್ಲಿ ತನ್ನ ಕಚೇರಿ ತೆರೆಯಲು ನಿರ್ಧರಿಸಿದ್ದು, ಕರ್ನಾಟಕದಲ್ಲಿ ಮೂರು ವರ್ಷಗಳಲ್ಲಿ ₹ 3,500 ಕೋಟಿ ಹೂಡಿಕೆ ಮಾಡಲಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ಆರ್. ನಿರಾಣಿ ತಿಳಿಸಿದ್ದಾರೆ.

ದುಬೈ ವರ್ಲ್ಡ್ ಎಕ್ಸ್‌ಪೋದಲ್ಲಿ ಸೋಮವಾರ ಜಿಐಐ ಸಮೂಹದ ಉದ್ದಿಮೆಗಳೊಂದಿಗೆ ರಾಜ್ಯ ಸರ್ಕಾರ ಒಪ್ಪಂದಕ್ಕೆ ಸಹಿ ಹಾಕಿದೆ. ಆ ಬಳಿಕ ಹೇಳಿಕೆ ಬಿಡುಗಡೆ ಮಾಡಿರುವ ಸಚಿವರು, 'ಯುಎಇಯ ಪ್ರಮುಖ ಷರಿಯಾ-ಕಂಪ್ಲೈಂಟ್ ಹಣಕಾಸು ಸಂಸ್ಥೆಯಾಗಿರುವ ಜಿಐಐ ಬೆಂಗಳೂರಿನಲ್ಲಿ ತನ್ನ ಕಚೇರಿ ತೆರೆಯುವ ನಿರ್ಧಾರ ಮಾಡಿದೆ. ಆ ಮೂಲಕ ಭಾರತೀಯ ನವೋದ್ಯಮಗಳಿಗೆ ಸಹಭಾಗಿತ್ವ ನೀಡಲಿದೆ' ಎಂದು ಹೇಳಿದ್ದಾರೆ.



ಮುರುಗೇಶ್ ಆರ್. ನಿರಾಣಿ

ಜಿಐಐ ನಿರ್ಧಾರದಿಂದ ಕರ್ನಾಟಕ ಮತ್ತು ಯುಎಇ ನಡುವಣ ಸಂಬಂಧ ಮತ್ತಷ್ಟು ವೃದ್ಧಿಯಾಗಲಿದೆ. ರಾಜ್ಯದಲ್ಲಿರುವ ಹೂಡಿಕೆಯ ಅವಕಾಶಗಳನ್ನು ಯುಎಇ ಬಳಸಿಕೊಳ್ಳಲು ಅವಕಾಶ ದೊರೆಯಲಿದೆ ಎಂದು ತಿಳಿಸಿದ್ದಾರೆ.

ಒಪ್ಪಂದದ ಬಳಿಕ ಜಂಟಿ ಹೇಳಿಕೆ ಬಿಡುಗಡೆ ಮಾಡಿರುವ ಜಿಐಐ ಪಾಲುದಾರರಾದ ಮೊಹಮ್ಮದ್ ಅಲ್ಹಾಸನ್ ಮತ್ತು ಪಂಕಜ್ ಗುಪ್ತಾ, 'ಭಾರತವು ಜಿಐಐಗೆ ಪ್ರಮುಖ ಹೂಡಿಕೆಯ ತಾಣವಾಗಿದೆ. ಆರಂಭಿಕ ಸುತ್ತಿನ ಮಾತುಕತೆಗಳಲ್ಲೇ ದೊಡ್ಡ ಯಶಸ್ಸು ದೊರಕಿದೆ. ₹ 1,000 ಕೋಟಿಗೂ ಹೆಚ್ಚು ವಹಿವಾಟು ನಡೆಸಲು ಜಿಐಐ ಉತ್ಸುಕವಾಗಿದೆ' ಎಂದಿದ್ದಾರೆ.

ಭಾರತದ ಕಾನ್ಸಲ್ ಜನರಲ್ ಡಾ.ಅಮಾನ್ ಪುರಿ ಒಪ್ಪಂದದ ವೇಳೆ ಉಪಸ್ಥಿತರಿದ್ದರು.

'ಕೇಸರಿ ಬಣ್ಣದ ಬಗ್ಗೆ ಅಲರ್ಜಿ ಏಕೆ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಮಗೆ ಕೇಸರಿ ಬಟ್ಟೆ ನಿಷೇಧಿತ ವಸ್ತ್ರವೇ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ.

ಪೊಲೀಸ್ ಸಿಬ್ಬಂದಿ ಕೇಸರಿ ವಸ್ತ್ರ ಧರಿಸಿ ಆಯುಧ ಪೂಜೆಯಲ್ಲಿ ಭಾಗವಹಿಸಿದ್ದನ್ನು ಆಕ್ಷೇಪಿಸಿದ್ದ ಸಿದ್ದರಾಮಯ್ಯ ಅವರನ್ನು ಟ್ವೀಟ್ ಮೂಲಕ ರವಿ ತರಾಟೆಗೆ ತೆಗೆದುಕೊಂಡಿದ್ದಾರೆ.

'ನೈಲಾನ್ ಬಟ್ಟೆ ಹಾಕಿದರೆ ನಿಮಗೆ ಚರ್ಮದ ಅಲರ್ಜಿ ಅಗುತ್ತದೆ ಎಂದು ಕೇಳಿದ್ದೆ. ಆದರೆ, ಕೇಸರಿ ನೋಡಿದರೂ ನಿಮಗೆ ಅಲರ್ಜಿ ಆಗುತ್ತದೆ ಎಂಬುದು ಈಗ ಗೊತ್ತಾಯಿತು' ಎಂದು ಟೀಕಿಸಿದ್ದಾರೆ.

ರೇವಣ್ಣ ಡಿಸಿಎಂ ಆಗೋದನ್ನು ತಪ್ಪಿಸಿದ್ದೇ ಎಚ್‌ಡಿಕೆ: ಜಮೀರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ದರಾಮಯ್ಯ ಜೆಡಿಎಸ್‌ನಲ್ಲಿ ಇದ್ದಾಗಲೂ ಅವರ ವಿರುದ್ಧ ಎಚ್.ಡಿ.ಕುಮಾರಸ್ವಾಮಿ ವಿಷ ಕಾರುತ್ತಿದ್ದರು' ಎಂದು ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್ ಖಾನ್ ವಾಗ್ದಾಳಿ ನಡೆಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಸಿದ್ದರಾಮಯ್ಯ ಯಾರನ್ನೂ ರಾಜಕೀಯವಾಗಿ ಮುಗಿಸಿಲ್ಲ. ಜಾಫರ್ ಷರೀಫ್ ಅವರ ಮೊಮ್ಮಗನನ್ನು ರಾಜಕೀಯವಾಗಿ ಮುಗಿಸಿದ್ದೇ ಕುಮಾರಸ್ವಾಮಿ. ಭೈರತಿ ಸುರೇಶ್‌ಗೆ ಮತ ಹಾಕಿಸಲು ಎಷ್ಟಕ್ಕೆ ಡೀಲ್ ಮಾಡಿದ್ದೀರಿ' ಎಂದು ಕುಮಾರಸ್ವಾಮಿಯನ್ನು ಪ್ರಶ್ನಿಸಿದರು.



ಜಮೀರ್ ಅಹ್ಮದ್ ಖಾನ್

'ಸ್ವಂತ ಅಣ್ಣ ಎಚ್.ಡಿ.ರೇವಣ್ಣ ಅವರನ್ನೇ ಕುಮಾರಸ್ವಾಮಿ ಸಹಿಸಿಕೊಳ್ಳಲಿಲ್ಲ. ಯಡಿಯೂರಪ್ಪ ಅವರಿಗೆ ಅಧಿಕಾರ ಬಿಟ್ಟುಕೊಟ್ಟರೆ ರೇವಣ್ಣ ಉಪಮುಖ್ಯಮಂತ್ರಿ ಆಗುತ್ತಾರೆ ಎಂಬ ಕಾರಣಕ್ಕೆ ಜೆಡಿಎಸ್- ಬಿಜೆಪಿ ಸಮ್ಮಿಶ್ರ ಸರ್ಕಾರದಲ್ಲಿ ಅಧಿಕಾರ ಕೊಡಲಿಲ್ಲ. ಎಚ್.ಡಿ. ದೇವೇಗೌಡ ನಿಜವಾದ ಜಾತ್ಯತೀತ ನಾಯಕ. ಅವರಿಗೆ ಹೋಲಿಸಿದರೆ ಎಚ್.ಡಿ. ಕುಮಾರಸ್ವಾಮಿ ಶೇ 1ರಷ್ಟೂ ಇಲ್ಲ' ಎಂದು ವ್ಯಂಗ್ಯವಾಡಿದರು.

'ಜೆಡಿಎಸ್‌ನಲ್ಲಿ ಇದ್ದಾಗ ನಾನೂ ಸಿದ್ದರಾಮಯ್ಯ ವಿರುದ್ಧ ಮಾತನಾಡಿದ್ದೆ. ಕಾಂಗ್ರೆಸ್- ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಕುಮಾರಸ್ವಾಮಿ ನನಗೆ ಹಜ್ ಖಾತೆ ಕೊಟ್ಟಿದ್ದರು. ಕುಮಾರಸ್ವಾಮಿ ನನ್ನ ಯೋಗ್ಯತೆಯನ್ನು ಅಳೆದಿದ್ದ ರೀತಿ ಹಾಗಿತ್ತು. ನಾನು ಕಾಂಗ್ರೆಸ್‌ಗೆ ಬಂದ ತಕ್ಷಣ ನನಗೆ ಆಹಾರ ಖಾತೆ ಕೊಟ್ಟರು. ನನ್ನನ್ನು ಮುಗಿಸಬೇಕು ಅಂದುಕೊಂಡಿದ್ದರೆ, ಸಿದ್ದರಾಮಯ್ಯ ನನಗೆ ಆಹಾರ ಖಾತೆ ಕೊಡಿಸುತ್ತಿರಲಿಲ್ಲ' ಎಂದು ವಿವರಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT

PUBLIC NOTICE

PUBLIC NOTICE

PRESTIGE WELLINGTON PARK APARTMENT OWNERS ASSOCIATION (PWPAOA) Invites sealed tender from established Property Management Services Firm for maintaining and managing Prestige Wellington Park Apartment, Gangamma Circle, Jalahalli, Bengaluru - 560013. Interested firms may collect the tender document from PWPAOA office at the address mentioned above on payment of 5500/- (Rupees five thousand five hundred only) by demand draft as tender fees(non refundable) favoring **"PRESTIGE WELLINGTON PARK APARTMENTS OWNERS ASSOCIATION".** The last date for collecting the tender application form is **31st Oct 2021, contact Office Admin, PWPAOA on 080-23089009 / +919008435527 or e-mail: accounts@pwpaoa.com** for any queries.

PUBLIC NOTICE

My client intends to purchase the property mentioned in the Schedule hereunder from its owner **Smt. Vandana Gupta,** wife of Shri. Ravi Kumar Gupta. The owner represents and warrants that she is the absolute owner of the Schedule Property and that she has neither conveyed nor has entered into any Agreement of sale/Development Agreement/Memorandum of Understanding nor has entered into any sort of arrangement with any person/s for sale/transfer/ development of the Schedule Property and further represents that except the mortgage created in favour of The Federal Bank Limited, Koramangala Branch, Bengaluru, she has not encumbered, mortgaged, created any charge or lien on the Schedule Property in any manner and apart from her there are no other person/s, firm or company have any sort of right, title or claim over the Schedule Property. Any person/s having objection/s or claim/s, shall with documentary evidence, lodge their objection(s)/ claim(s) **within Fifteen (15) days** from the date of this Notice with the Undersigned failing which, my client shall proceed with the above-mentioned transaction.

SCHEDULE

All that piece and parcel of portion of the residentially converted undeveloped land bearing **Survey No.118/263**, measuring **01 acre 32 guntas** (converted vide Official Memoranda Nos. B. Dis. ALN/ SR/ MA/202 and 204/2003-04 both dated 24-03-2004, issued by the Special Deputy Commissioner, Bengaluru District, Bengaluru), situated at **Navarathna Agrahara** Village, **Jala** Hobli, **Bengaluru North** Taluk and is bounded on the:

East by : Property bearing Sy No. 118/263 belonging to M/s. Rakesh Projects Private Limited
West by : Remaining portion of Sy. No. 118/263
North by : Remaining portion of Sy. No. 118/263, belonging to Shri.M.R. Narasimha Murthy and Shri. Raja Venkatappa Naik
South by : Road.

Vinay K. S.
Advocate,
Jayanth Pattanshetti Associates
102, Ground Floor, "Rams Infantry Manor", No. 70, Infantry Road, Bengaluru-560 001.
Ph: 080 41238516/41238367
Place : Bengaluru
Date: 18-10-2021

ಫಾರಂ. ನಂ. ಐಎನ್‌ಸಿ–26

30ನೇ ಕಂಪನಿಗಳು (ಸಂಯೋಜನೆ) ನಿಯಮಗಳು, 2014ರ ನಿಯಮಕ್ಕೆ ಅನುಸಾರವಾಗಿ ಕಂಪನಿಯ ನೋಂದಾಯಿತ ಕಛೇರಿಯನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಬದಲಾಯಿಸಲು ಜಾಹೀರಾತನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಕುರಿತು

ಪ್ರಾದೇಶಿಕ ನಿರ್ದೇಶಕರ ಕಛೇರಿ, ಸೌತ್ ಈಸ್ಟ್ ರೀಜನ್, ಹೈದರಾಬಾದ್.

[ಕಂಪೆನಿಗಳ ಕಾಯ್ದೆ 2013ರ ಸೆಕ್ಷನ್ 13ರ ಉಪವಿಭಾಗ (4) ಮತ್ತು ಕಂಪನಿಗಳ (ಸಂಯೋಜನೆ) ನಿಯಮಗಳು, 2014ರ ನಿಯಮ 30ರ ನಿಯಮ (5)ರ ನಿಯಮ (ಎ) ಇದರ ಅನುಸಾರವಾಗಿ

ಮತ್ತು

ಒಡಿಗ್ಮಾ ಕನ್ಸಲ್ಟೆನ್ಸಿ ಪ್ರೈವೇಟ್ ಲಿಮಿಟೆಡ್ ನೋಂದಾಯಿತ ಕಛೇರಿ 211, 3ನೇ ಮಹಡಿ, "ಕಸ್ತೂರಿ", ಕಸ್ತೂರಿನಗರ, ಸರ್ವೀಸ್ ರಸ್ತೆ, ಹೊರವರ್ತುಲ ರಸ್ತೆ, ಬೆಂಗಳೂರು – 560043, ಕರ್ನಾಟಕ, ಭಾರತ

– ಅರ್ಜಿದಾರರು

ಈ ಮೂಲಕ ತಿಳಿಸುವುದೇನೆಂದರೆ, ಕಂಪನಿ ಕಾಯ್ದೆ 2013ರ ಸೆಕ್ಷನ್ 13ರ ಅಡಿಯಲ್ಲಿ ಮೇಲ್ಕಂಡ ಕಂಪನಿಯು, ದಿನಾಂಕ 18.10.2021ರಂದು ನಡೆದ ಸಾಮಾನ್ಯ ಸಭೆಯಲ್ಲಿ ತನ್ನ ನೋಂದಾಯಿತ ಕಛೇರಿಯನ್ನು "ಕರ್ನಾಟಕ ರಾಜ್ಯ" ದಿಂದ "ಗುಜರಾತ್ ರಾಜ್ಯ"ಕ್ಕೆ ಬದಲಾಯಿಸಲು ಪ್ರಸ್ತಾಪಿಸಲಾಗಿದ್ದು, ಈ ಸಂಬಂಧ ಪ್ರಾದೇಶಿಕ ನಿರ್ದೇಶಕರಿಗೆ ಅರ್ಜಿ ಸಲ್ಲಿಸುವ ಕುರಿತು ಈ ಮೂಲಕ ಸಾರ್ವಜನಿಕರಿಗೆ ಸೂಚನೆ ನೀಡಲಾಗಿದೆ.

ಕಂಪನಿಯ ನೋಂದಾಯಿತ ಕಛೇರಿಯ ಪ್ರಸ್ತಾವಿತ ಬದಲಾವಣೆಯಿಂದ ಪರಿಣಾಮ ಕ್ಕೊಳಪಡುವ ಯಾವುದೇ ವ್ಯಕ್ತಿಯು, ಹೂಡಿಕೆದಾರರು **MCA-21** ಪೋರ್ಟಲ್ **(www.mca.gov.in)** ನಲ್ಲಿ **Investor Complaint Form** ನಲ್ಲಿ ಅವನ/ಅವಳ ಆಕ್ಷೇಪಣೆಗಳು, ಆಸಕ್ತಿಯ ಸ್ವರೂಪ ಮತ್ತು ವಿರೋಧದ ಆಧಾರಗಳು ಹಾಗೂ ಇವುಗಳನ್ನು ಒಳಗೊಂಡ ಅಫಿಡವಿಟ್‌ನ್ನು ಸಲ್ಲಿಸಲು ಅವಕಾಶವಿರುತ್ತದೆ. ಅಥವಾ ಇವುಗಳನ್ನು ಒಳಗೊಂಡ ಅಫಿಡವಿಟ್‌ನ್ನು 3ನೇ ಮಹಡಿ, ಕಾರ್ಪೋರೇಟ್ ಭವನ, ಬಂಡ್ಲಗುಡ, ನಾಗೋಲ್, ತಟ್ಟಿಯನ್ನಾರಂ ಗ್ರಾಮ, ಹಯಾತ್‌ನಗರ ಮಂಡಲ್, ರಂಗರೆಡ್ಡಿ ಜಿಲ್ಲೆ, ಹೈದರಾಬಾದ್ – 500068 ಇಲ್ಲಿಗೆ ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ 14 ದಿನಗಳ ಒಳಗೆ ಕಳುಹಿಸಬಹುದು ಹಾಗೂ ಇದರ ಪ್ರತಿಯನ್ನು ಕಂಪನಿಯ ನೋಂದಾಯಿತ ಕಛೇರಿಯ ಈ ಕೆಳಗೆ ನಮೂದಿಸಿದ ವಿಳಾಸಕ್ಕೆ ಸಲ್ಲಿಸಬಹುದು.

ಕಛೇರಿ 211, 3ನೇ ಮಹಡಿ, "ಕಸ್ತೂರಿ", ಕಸ್ತೂರಿನಗರ, ಸರ್ವೀಸ್ ರಸ್ತೆ, ಹೊರವರ್ತುಲ ರಸ್ತೆ, ಬೆಂಗಳೂರು – 560043

ಅರ್ಜಿದಾರರಿಗೆ ಮತ್ತು ಅರ್ಜಿದಾರರ ಪರವಾಗಿ
ವಿಶಾಲ್ ಅಜಿತ್‌ಬಾಯ್ ಮೆಹ್ತ
ನಿರ್ದೇಶಕರು
ದಿನಾಂಕ: 18–10–2021
ಸ್ಥಳ: ಬೆಂಗಳೂರು.

BUSINESS

Business to Business

Finance

COMPANY PROVIDES All Types of Loans:Personal/ Property/ Project &Business. ROI 4%(Per Annum) Required DSA& Agents 55000/-Salary &4% Commision: 8950749080

Business Offers

Finance

NRI'S INVESTMENT And Finance Available On Low Interest Against Properties, Land & Building, Sites, Flats, Converted & Agriculture Lands Call: 7411265189

Business For Sale

OWNER LEAVING Italian Leather Sofa, King Size Storage Cot, Skoda Car, Shoe Rack. Call: 9845414482

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

PERSONAL

Change of Name

14833748Y, SEP, Chandan Prasad, 2ATC, Mother name service record PHOOL DEVI instead of JHALARA DEVI notary KV Mani, Bangalore.

GAYATARI DEVI W/o. 6491323M, HAV, Govind Singh, Vill: Naglatikha Lodhapur, Chhibramau, UP, my name GAYATARI DEVI to GAYATRI DEVI notary KV Mani, Bangalore.

I,JYOTI K.M spouse of No.15322548W HAV KALLAPPA METI R/at No.174/1, Siddharooth Nagar, Kalaghatagi, Dharwad, Karnataka-580114 have changed my name to JYOTI KALLAPPA METI affidavit dated 18-10-2021 notary AR Muneer Ahmed, Bangalore.

I, SHASHWAT Residing at NCC Maple Heights E 1201, Mahadevpura Nagarjuna Outer Ringh Road, Bangalore- 560016, have changed my name to SRIVATSAVA SHASHWAT vide affidavit dated 18/10/2021, before notary S. Samuel Solomon, Bangalore. Henceforth I shall be called SRIVATSAVA SHASHWAT only.

I, SHABANA KHATOON KHAN, aged about 42 years, D/o Talyab Hussain Khan, Residing at C205, MBR Shangrila,Harsha Layout, Kengeri Satellite Town,Bangalore-560060. have changed my name from SHABANA KHATOON TAIYAB HUSSAIN KHAN to SHABANA KHATOON KHAN vide affidavit dated 16/10/2021 before notary RAVI, Bangalore

I, HARISH KUMAR .A, S/o M. Anjanappa, age 40 years, R/a #604, Salarpuria Sattva, Ashpire Hennur Bagalur Main Road, Kannur, Bengaluru-562149 do hereby declare that I have changed my name from HARISH KUMAR .A to HARISH GARUDA .A KUMAR, vide affidavit dated 18-10-2021, sworn before Advocate and Notary RAMACHANDRAPPA .C, Bangalore.

CHANGE OF NAME

I, RAMYA. P, Residing at No. 16/55, 1st Cross, Munireddy Block, Madivala, near Surya Sweets, Madivala, Bommanahalli, Bengaluru- 560068, have changed my name to **KHADIJAH SEIKH,** vide affidavit dated 15/10/2021, before notary S. Jayanthi, Bangalore. Henceforth, I shall be called **KHADIJAH SEIKH** only.

I, MEENAKSHI T.R W/o. Venkatasubramanian Valady Srinivasan, residing at No. 70, 3rd main, MLA Layout, R.T. Nagar, Bengaluru-560032, Have changed my name to MEENAKSHI vide affidavit dated 14/10/2021 before notary A.R. Muneer Ahmed, Bengaluru.

I, MANOJ THOMAS CHACKO residing at No.59, 2nd Cross VivekanandaNagar, Cox Town, Bangalore-33 have changed my minor son's name from NATHAN JOHN CHACKO to NATHAN JOHN MANOJ vide affidavit dated 18-10-2021 before Notary Uday Kumar.K, Bangalore.

KAJAL MONDAL (MAITY) W/o 14853279H- SEP-SAHADEV MONDAL R/a Harduachak, Purba Medinipur, Gourangachak, WB changed name from KAJAL MONDAL (MAITY) to KAJAL MAITI MONDAL notary KV Mani Bangalore.

RINKEE TOMAR, Wife/o, 14843911F, HAV/ SKT, Sanjay Singh Tomar, Vill-Shahpura, Porsa, Morena, Madhya Pradesh, changed my name from RINKEE TOMAR to RINKI, 16/10/2021, Notary K.V. Mani, Bangalore

14830658M- SEP- SAWADEKAR GAUTAM CHANDRABHAN at ASC Centre, ADM Bn, changed my minor Son's name PIYUSH to PIYUSH GAUTAM SAWADEKAR notary KV Mani Bangalore.

I, VANISHREE NARASIMHA, R/at Dattu Nivas, No. 179, 4th Cross, Ground Floor, Royal Residency Layout, Arekere, Bangalore-76, have changed my name to VANISHREE NARASIMHAPRAKASH TIMOTHY vide affidavit dated 07-10-2021 sworn before notary B.M. Chandrashekar, Bangalore

I, ANDREA VONITA KING, R/at B-404, Eshwari Oak Dale Apartment, Opposite Royal Lake Front View Layout, Near B.K. Circle, J.P. Nagar 8th Phase, Bangalore-76, have changed my name to ANDREA KING GROVER vide affidavit dated 07-10-2021 sworn before notary B.M. Chandrashekar, Bangalore

I, SASHIKALA BAI, W/oCHANDAN GHORPADE residing at Vesta Summit, No.204,4th Cross, Akshaynagar,off Bannerghatta Road, Bangalore-560068 have changed my name from SASHIKALA BAI as to SHEETAL GHORPADE vide affidavit dated:18.10.2021 sworn before notary C.N.Balasubramanyam, Bangalore.

Lost

LOST

I, K. Prakash
R/at. No.F-6,Gajanana Apartments, Plot No-4, NHCS Layout, 8th Main, 4th Cross, Vijayanagar, Bengaluru-560040, have lost the **originals of Allotment Letter dated: 13-11-1987, Possession Certificate Dated: 04-10-1988, BDA Khata Dt.21-12-1989** Allotted to Sridharan. S, of Site No.231, 11th Block, Nagarabhavi 2nd stage, Bangalore.
If anybody found pls contact: K. Prakash: 9500919036

ರಸ್ತೆಯಲ್ಲೇ ನಿಲ್ಲುತ್ತಿದೆ ನೀರು; ಪಾದಚಾರಿ ಮಾರ್ಗದಲ್ಲೇ ಕಸದ ರಾಶಿ; ಕಿತ್ತುಹೋದ ಡಾಂಬರು ರಸ್ತೆಗೆ ತೇಪೆ

ಮಳೆಗೆ ಸ್ಮಾರ್ಟ್ ರಸ್ತೆಗಳ ಬಣ್ಣ ಬಯಲು!

• ಜಿ.ಶಿವಕುಮಾರ





ಕಮರ್ಷಿಯಲ್ ಸ್ಟ್ರೀಟ್‌ನ ಪಾದಚಾರಿ ಮಾರ್ಗವನ್ನು ಕಿತ್ತುಹಾಕಲಾಗಿದ್ದು ಅಲ್ಲಿ ಪೈಪ್‌ಗಳನ್ನು ಹರಡಲಾಗಿದೆ (ಎಡ ಚಿತ್ರ) ಸೆಂಟ್ ಮಾರ್ಕ್ಸ್ ರಸ್ತೆಯ ಸಿಗ್ನಲ್ ಬಳಿ ಪಾದಚಾರಿ ಮಾರ್ಗವನ್ನು ಅಗೆಯಲಾಗಿದ್ದು ಈವರೆಗೂ ಅದನ್ನು ಮುಚ್ಚುವ ಕೆಲಸ ಆಗಿಲ್ಲ – ಪ್ರಜಾವಾಣಿ ಚಿತ್ರಗಳು/ ರಂಜು ಪಿ

ಬೆಂಗಳೂರು: 'ರಸ್ತೆಯಲ್ಲಿ ಮಾರುದ್ದದವರೆಗೂ ನಿಂತಿರುವ ಮಳೆ ನೀರು. ಪಾದಚಾರಿ ಮಾರ್ಗದಲ್ಲೇ ಬಿದ್ದಿರುವ ಕಸದ ರಾಶಿ. ಅಲ್ಲಲ್ಲಿ ಕಿತ್ತುಹೋಗಿರುವ ಡಾಂಬರು ರಸ್ತೆಗೆ ಹಾಕಿರುವ ತೇಪೆ'...

'ಸ್ಮಾರ್ಟ್ ಸಿಟಿ' ಯೋಜನೆಯಡಿ ನಿರ್ಮಾಣವಾಗಿರುವ ನಗರದ ಪ್ರಮುಖ ರಸ್ತೆಗಳಲ್ಲಿ ಸುತ್ತಾಡಿದರೆ ಕಾಣುವ ದೃಶ್ಯಗಳಿವು.

ಉದ್ಯಾನನಗರಿಯ ರಸ್ತೆಗಳಿಗೆ ಹೊಸ ಮೆರುಗು ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರ 'ಸ್ಮಾರ್ಟ್ ಸಿಟಿ' ಯೋಜನೆಯಡಿ ಟೆಂಡರ್‌ಶ್ಯೂರ್ ಮಾದರಿಯಲ್ಲಿ ಒಟ್ಟು 36 ರಸ್ತೆಗಳನ್ನು (26 ಕಿ.ಮೀ) ಅಭಿವೃದ್ಧಿಪಡಿಸಲು ಮುಂದಾಗಿದೆ. ಇದಕ್ಕಾಗಿ ಅಂದಾಜು ₹481.65 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಈವರೆಗೆ ₹191.1 ಕೋಟಿ ವೆಚ್ಚದಲ್ಲಿ ಹಲವು ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಎರಡೇ ತಿಂಗಳಲ್ಲಿ ಅವುಗಳ ನಿಜ ಬಣ್ಣ ಬಯಲಾಗಿದೆ.

ವುಡ್‌ಸ್ಟ್ರೀಟ್ ರಸ್ತೆ ಪ್ರವೇಶಿಸುತ್ತಿದ್ದಂತೆ ರಸ್ತೆಯ ಬಲಬದಿಯಲ್ಲಿ ಮಾರುದ್ದದವರೆಗೂ ಮಳೆ ನೀರು ನಿಂತಿರುವುದು ಕಾಣಿಸುತ್ತದೆ. ವಾಹನ ನಿಲುಗಡೆಗೆಂದು ರಸ್ತೆ ಬದಿಯಲ್ಲಿ ಬಿಟ್ಟಿರುವ ಜಾಗದಲ್ಲಿ ತ್ಯಾಜ್ಯ ಹರಡಿಕೊಂಡಿದೆ. ಅಣತಿ ದೂರದಲ್ಲೇ ಪಾದಚಾರಿ ಮಾರ್ಗದ ಮೇಲೆ ಕಟ್ಟಡದ ಅವಶೇಷಗಳನ್ನು ಸುರಿಯಲಾಗಿದೆ. ಜಲ್ಲಿಕಲ್ಲುಗಳ ರಾಶಿಯೂ ಬಿದ್ದಿದೆ. ವಯಸ್ಕರು ಮತ್ತು ಮಕ್ಕಳು ಅದನ್ನು ದಾಟಿಕೊಂಡು ಹೋಗಲು ಪ್ರಯಾಸ ಪಡುವಂತಾಗಿದೆ.

ರಸ್ತೆಗಳ ಸೌಂದರ್ಯ ವೃದ್ಧಿಸುವ ಸಲುವಾಗಿ ಪಾದಚಾರಿ ಮಾರ್ಗದ ಎರಡೂ ತುದಿಗಳಲ್ಲಿ ವಿವಿಧ ಬಗೆಯ ಗಿಡಗಳನ್ನು ನೆಡಲಾಗಿದೆ. ಅವುಗಳಲ್ಲಿ ಬೆಳೆದಿರುವ ಕಳೆಗಳನ್ನು ಕೀಳುವ ಕೆಲಸವಂತೂ ಆಗಿಲ್ಲ. ಪಾದಚಾರಿ ಮಾರ್ಗದಲ್ಲಿ ಅಲ್ಲಲ್ಲಿ ಕಸದ ರಾಶಿಯೇ ಬಿದ್ದಿದೆ. ಅದರಿಂದ ದುರ್ನಾತವೂ ಹೊರಹೊಮ್ಮುತ್ತಿದೆ. ಆ ಹಾದಿಯಲ್ಲಿ ಸಾಗುವ ನಾಗರಿಕರು ಮೂಗು ಮುಚ್ಚಿಕೊಂಡು ಓಡಾಡುವುದು ಅನಿವಾರ್ಯ. ಟೇಟ್‌ಲೈನ್ ರಸ್ತೆಯಲ್ಲೂ ಇದೇ ಚಿತ್ರಣ ಕಂಡುಬರುತ್ತದೆ.

ಕಾನ್ವೆಂಟ್ ರಸ್ತೆಗೆ ಕಾಲಿಡುತ್ತಿದ್ದಂತೆ ಕಿತ್ತುಹೋದ ಡಾಂಬರು ರಸ್ತೆಯ ದರ್ಶನವಾಗುತ್ತದೆ. ಅದಕ್ಕೆ ತೇಪೆ ಕೂಡ ಹಾಕಲಾಗಿದೆ. ಅದು ಸ್ಮಾರ್ಟ್ ರಸ್ತೆಯ ಕಲ್ಪನೆಯನ್ನೇ ಅಣಕಿಸುವಂತಿದೆ. ಅದೇ ಮಾರ್ಗವಾಗಿ ಮುಂದೆ ಹೋದರೆ ರಸ್ತೆಯಲ್ಲೇ ನೀರು ಹರಿಯುತ್ತಿರುವುದು ಕಾಣುತ್ತದೆ. ಸತತ ಮಳೆಯಿಂದಾಗಿ ಪಾದಚಾರಿ ಮಾರ್ಗಗಳಲ್ಲಿ ಕಾಲಿಡುವುದೂ ಕಷ್ಟವಾಗಿದೆ. ಅಲ್ಲಲ್ಲಿ ಪಾಚಿ ಬೆಳೆದಿದ್ದು ಅವುಗಳ ಮೇಲೆ ಕಾಲಿಟ್ಟರೆ ಜಾರಿ ಬೀಳುವ ಅಪಾಯವೂ ಇದೆ. ಹೀಗಾಗಿ ಪಾದಚಾರಿಗಳು ಮೈಯೆಲ್ಲಾ ಕಣ್ಣಾಗಿಸಿಕೊಂಡೇ ಓಡಾಡಬೇಕು!

ಕೆಲವೆಡೆ ಪಾದಚಾರಿ ಮಾರ್ಗದಲ್ಲಿ ಮರಗಳ ಸುತ್ತಲೂ ಕಟ್ಟೆಗಳನ್ನು ನಿರ್ಮಿಸಿರುವುದರಿಂದ ಪಾದಚಾರಿ ಮಾರ್ಗದ ಮಟ್ಟವು ಏರುಪೇರಾಗಿ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿದೆ. ಟೆಂಡರ್‌ಶ್ಯೂರ್ ರಸ್ತೆಗಳಲ್ಲಿ ಪಾದಚಾರಿ ಮಾರ್ಗದ ಮಟ್ಟ ಹಾಗೂ ಮರಗಳ ಸುತ್ತಲಿನ ಮಣ್ಣಿನ ಹೊದಿಕೆಯ ಮಟ್ಟ ಏಕರೂಪದಲ್ಲಿರುವಂತೆ ನೋಡಿಕೊಳ್ಳಲಾಗಿದೆ. ಅಧಿಕಾರಿಗಳು ಇದೇ ಮಾದರಿಯನ್ನು ಸ್ಮಾರ್ಟ್ ಸಿಟಿ ರಸ್ತೆಗಳಿಗೂ ಅನ್ವಯಿಸಿದಂತೆ ಕಾಣುತ್ತಿಲ್ಲ. ಈ ಬಗ್ಗೆ ಸಾರ್ವಜನಿಕರೂ ಅಸಮಾಧಾನ ವ್ಯಕ್ತಪಡಿಸುತ್ತಾರೆ.

'ಜೋರಾಗಿ ಮಳೆ ಬಂದರೆ ನೆಲ ಮಹಡಿಗೆ ನೀರು ನುಗ್ಗುತ್ತದೆ. ಒಮ್ಮೊಮ್ಮೆ ಮಳಿಗೆಯ ಒಳಗೂ ನೀರು ಬರುವುದುಂಟು. ಜಾಗತಿಕ ದರ್ಜೆಯ ರಸ್ತೆ ಅಭಿವೃದ್ಧಿಪಡಿಸುವುದಾಗಿ ಹೇಳಿದರು. ಉದ್ಘಾಟನೆಗೊಂಡ ಕೆಲವೇ ದಿನಗಳಲ್ಲಿ ಇಡೀ ರಸ್ತೆಯೇ ಕಿತ್ತುಹೋಯಿತು. ಈಗ ಮತ್ತೆ ಹೊಸ ಸ್ಪರ್ಶ ನೀಡುವುದಾಗಿ ಹೇಳುತ್ತಿದ್ದಾರೆ. ರಸ್ತೆಯುದ್ದಕ್ಕೂ ಪೈಪ್‌ಗಳನ್ನು ಹರಡಿದ್ದಾರೆ. ಪಾದಚಾರಿ ಮಾರ್ಗವನ್ನೂ ಕಿತ್ತುಹಾಕಿದ್ದಾರೆ. ಇದರಿಂದ ವ್ಯಾಪಾರಕ್ಕೆ ದೊಡ್ಡ ಪೆಟ್ಟು ಬೀಳುತ್ತಿದೆ' ಎಂದು ಕಮರ್ಷಿಯಲ್ ಸ್ಟ್ರೀಟ್‌ನ ವರ್ತಕ ಶಕೀಬ್ ಕಿಡಿಕಾರಿದರು.

'ಹಬ್ಬದ ಋತುವಿನಲ್ಲಿ ಒಂದಷ್ಟು ವಹಿವಾಟು ನಡೆಯಬಹುದು. ಕೋವಿಡ್ ಸಮಯದಲ್ಲಿ ಉಂಟಾಗಿದ್ದ ನಷ್ಟದಿಂದ ಪಾರಾಗಬಹುದು ಎಂಬ ನಿರೀಕ್ಷೆ ಇತ್ತು. ರಸ್ತೆ ಅಗೆದಿರುವುದರಿಂದ ವಾಹನಗಳ ಓಡಾಟಕ್ಕೆ ತೊಂದರೆಯಾಗಿದೆ. ಮಕ್ಕಳೊಂದಿಗೆ ಬರುವ ಗ್ರಾಹಕರು ರಸ್ತೆ ದಾಟಲೂ ಪರಿತಪಿಸುವಂತಾಗಿದೆ. ಆಗಾಗ ವಿದ್ಯುತ್ ಕೂಡ ಕೈಕೊಡುತ್ತದೆ. ನೀರಿನ ಸಮಸ್ಯೆಯೂ ಉದ್ಭವಿಸುತ್ತದೆ' ಎಂದು ರಾಮಕೃಷ್ಣ ಅಸಮಾಧಾನ ವ್ಯಕ್ತಪಡಿಸಿದರು.

> **ಅಭಿವೃದ್ಧಿಯ ನೆಪದಲ್ಲಿ ಪದೇ ಪದೇ ರಸ್ತೆ ಅಗೆಯುವುದು ಎಷ್ಟು ಸರಿ. ವೈಜ್ಞಾನಿಕವಾಗಿ ಕಾಮಗಾರಿಗಳನ್ನು ನಡೆಸದಿರುವುದೇ ಇಷ್ಟೆಲ್ಲಾ ಸಮಸ್ಯೆಗೆ ಕಾರಣ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುವುದಿಲ್ಲವೇ?**
> **ಶ್ರೀಹರಿ,** ಗ್ರಾಹಕ

ಕಿತ್ತುಹೋದ ಕಮರ್ಷಿಯಲ್ ಸ್ಟ್ರೀಟ್!

ಶಿವಾಜಿನಗರ ವಿಧಾನಸಭಾ ವ್ಯಾಪ್ತಿಯ ಕಮರ್ಷಿಯಲ್ ಸ್ಟ್ರೀಟ್ ರಸ್ತೆ ಉದ್ಘಾಟನೆಗೊಂಡ ಮೂರೇ ತಿಂಗಳಲ್ಲಿ ಸಂಪೂರ್ಣವಾಗಿ ಕಿತ್ತುಹೋಗಿದೆ.

ಟೆಂಡರ್‌ಶ್ಯೂರ್ ಮಾದರಿಯಲ್ಲಿ ರಸ್ತೆಯ 458 ಮೀಟರ್‌ವರೆಗಿನ ಭಾಗವನ್ನು ₹5.4 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿತ್ತು. ವಿವಿಧ ಬಣ್ಣ ಹಾಗೂ ವಿನ್ಯಾಸದ ಕಲ್ಲು ಹಾಸುಗಳನ್ನು ಹಾಕಿ ರಸ್ತೆಯನ್ನು ಅಂದಗೊಳಿಸಲಾಗಿತ್ತು. ವಿಶಾಲವಾದ ಪಾದಚಾರಿ ಮಾರ್ಗಗಳು, ನವೀನ ಮಾದರಿಯ ವಿದ್ಯುತ್ ಕಂಬಗಳು ಹಾಗೂ ಆಲಂಕಾರಿಕ ಗಿಡಗಳು ನೋಡುಗರ ಕಣ್ಮನ ಸೆಳೆಯುವಂತಿದ್ದವು.


2020ರ ಮಾರ್ಚ್‌ನಲ್ಲಿ ಆರಂಭವಾಗಿದ್ದ ಈ ಕಾಮಗಾರಿ ಈ ವರ್ಷದ ಜುಲೈನಲ್ಲಿ ಪೂರ್ಣಗೊಂಡಿತ್ತು. ಆಗಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇದನ್ನು ಉದ್ಘಾಟಿಸಿದ್ದರು. ಈಗ ಈ ರಸ್ತೆಯ ಮರು ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಈ ಹಿಂದೆ ನಡೆದ ಅಭಿವೃದ್ಧಿ ಕಾರ್ಯಕ್ಕೆ ವಿನಿಯೋಗಿಸಿದ ₹5.4 ಕೋಟಿ ಮೊತ್ತ ನೀರಿನಲ್ಲಿ ಹೋಮ ಮಾಡಿದಂತಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರಜಾವಾಣಿ ವಿಶೇಷ

'ಹಣವೂ ಪೋಲು; ಸಮಯವೂ ವ್ಯರ್ಥ'

'ಸೂಕ್ತ ಯೋಜನೆ ಇಲ್ಲದೆಯೇ ಕಾಮಗಾರಿ ನಡೆಸಿದರೆ ಆಗುವ ಅವಾಂತರಗಳು ಏನು ಎಂಬುದಕ್ಕೆ ಕಮರ್ಷಿಯಲ್ ಸ್ಟ್ರೀಟ್ ರಸ್ತೆಯೇ ಸಾಕ್ಷಿ. ಆ ರಸ್ತೆಯ ಅಭಿವೃದ್ಧಿ ಸಂಪೂರ್ಣವಾಗಿ ಹಳ್ಳ ಹಿಡಿದಿದೆ. ಹೀಗಾಗಿ ಕೆಲಸಗಾರರ ಪರಿಶ್ರಮ, ಹಣ ಹಾಗೂ ಸಮಯವೂ ವ್ಯರ್ಥವಾಗಿದೆ. ಸ್ಮಾರ್ಟ್ ಸಿಟಿ ಎಂಬುದು ಘೋಷಣೆಗಷ್ಟೇ ಸೀಮಿತವಾಗಿದೆ' ಎಂದು ಸಿಟಿಜನ್ಸ್ ಫಾರ್ ಸಿಟಿಜನ್ಸ್ (ಸಿ4ಸಿ) ಸಂಘಟನೆಯ ಸಂಸ್ಥಾಪಕ ರಾಜ್‌ಕುಮಾರ್ ದುಗಾರ್ ಹೇಳಿದರು.

'ಕೆಲ ಎಂಜಿನಿಯರ್‌ಗಳಿಗೆ ಯೋಜನೆಯ ಬಗ್ಗೆ ಮಾಹಿತಿಯೇ ಇಲ್ಲ. ಇಂಡಿಯನ್ ಎಕ್ಸ್‌ಪ್ರೆಸ್ ಬಸ್ ನಿಲ್ದಾಣದ ಮುಂದಿನ ಪಾದಚಾರಿ ಮಾರ್ಗದಲ್ಲಿ ಗಿಡಗಳನ್ನು ನೆಡಲು ಜಾಗ ಬಿಟ್ಟಿರುವುದು ಇದಕ್ಕೊಂದು ನಿದರ್ಶನ. ಬಸ್ ಹತ್ತುವ ಹಾಗೂ ಇಳಿಯುವ ಪ್ರಯಾಣಿಕರು ಆ ಗಿಡಗಳನ್ನು ದಾಟಿಕೊಂಡು ಓಡಾಡುವುದಾದರೂ ಹೇಗೆ. ಇಲಾಖೆಗಳ ನಡುವೆ ಹೊಂದಾಣಿಕೆ ಇಲ್ಲ ಎಂಬುದು ಈಗಾಗಲೇ ಜಾಹೀರುಗೊಂಡಿದೆ. ಇದರಿಂದ ಜನಸಾಮಾನ್ಯರು ತೊಂದರೆ ಅನುಭವಿಸುವಂತಾಗಿದೆ' ಎಂದರು.



ಟೇಟ್‌ಲೈನ್ ರಸ್ತೆ ಸಮೀಪ ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ ಬಿದ್ದಿರುವುದು – ಪ್ರಜಾವಾಣಿ ಚಿತ್ರ

'ಸೂಕ್ತ ಯೋಜನೆಯ ಕೊರತೆಯೇ ಅವಾಂತರಕ್ಕೆ ಕಾರಣ'

'ಯಾವುದೇ ಕೆಲಸವನ್ನು ಕೈಗೆತ್ತಿಕೊಳ್ಳುವ ಮುನ್ನ ಸೂಕ್ತ ಯೋಜನೆ ಸಿದ್ಧಪಡಿಸಿಕೊಂಡಿರಬೇಕು. ಎಲ್ಲೆಲ್ಲಿ ರಸ್ತೆಯ ವಿಸ್ತೀರ್ಣ ಬದಲಾಗುತ್ತದೆ, ರಸ್ತೆಯು ತಗ್ಗು ಪ್ರದೇಶದಲ್ಲಿದೆಯೊ ಅಥವಾ ಎತ್ತರದ ಭಾಗದಲ್ಲಿದೆಯೊ ಎಂಬುದನ್ನು ಅರಿತುಕೊಂಡು ಸೂಕ್ತ ನಕಾಶೆ ಸಿದ್ಧಪಡಿಸಿ ಅದರನ್ವಯ ಅಭಿವೃದ್ಧಿ ಕಾರ್ಯ ಆರಂಭಿಸಬೇಕು. ಸ್ಮಾರ್ಟ್ ಸಿಟಿಯಡಿ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ವೇಳೆ ಸೂಕ್ತ ಯೋಜನೆ ರೂಪಿಸಿಲ್ಲ. ಹೀಗಾಗಿ ಇಷ್ಟೆಲ್ಲಾ ಅವಾಂತರಗಳು ಸೃಷ್ಟಿಯಾಗುತ್ತಿವೆ' ಎಂದು ನಗರ ಯೋಜನಾ ತಜ್ಞ ವಿ.ರವಿಚಂದರ್ ತಿಳಿಸಿದರು.

'ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ ಹೀಗೆ ವಿವಿಧ ಇಲಾಖೆಗಳ ನಡುವೆ ಸಮನ್ವಯತೆಯ ಕೊರತೆಯೂ ಇದೆ. ಕಾಲ ಕಾಲಕ್ಕೆ ಸಭೆಗಳನ್ನು ನಡೆಸದೆ, ಯಾರೊಬ್ಬರ ಅಭಿಪ್ರಾಯವನ್ನೂ ಕೇಳದೆ ಎಲ್ಲರೂ ತಮ್ಮ ಮೂಗಿನ ನೇರಕ್ಕೆ ಕೆಲಸ ಮಾಡುತ್ತಾರೆ. ಇದರಿಂದ ಯೋಜನೆ ಹಳ್ಳ ಹಿಡಿಯುತ್ತಿದೆ. ಅಭಿವೃದ್ಧಿ ಚಟುವಟಿಕೆಗಳೂ ಕುಂಠಿತವಾಗುತ್ತಿವೆ. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸುವುದಕ್ಕೂ ತೊಡಕಾಗುತ್ತದೆ' ಎಂದರು.

'ಮಳೆ ನೀರು ಒಳಚರಂಡಿಯ ಮೂಲಕ ಸರಾಗವಾಗಿ ಹರಿಯುವ ವ್ಯವಸ್ಥೆಯನ್ನೂ ಮಾಡಿಲ್ಲ. ಹೀಗಾಗಿ ರಸ್ತೆಗಳು ಹಾಗೂ ಪಾದಚಾರಿ ಮಾರ್ಗಗಳ ಮೇಲೆ ನೀರು ನಿಲ್ಲುವುದು ಸಾಮಾನ್ಯವಾಗಿದೆ. ಕಮರ್ಷಿಯಲ್ ಸ್ಟ್ರೀಟ್‌ನ ಕೆಲ ಮಳಿಗೆಗಳಿಗೆ ನೀರು ನುಗ್ಗಿದ್ದನ್ನೂ ನೆನಪಿಸಿಕೊಳ್ಳಬಹುದು' ಎಂದು ತಿಳಿಸಿದರು.

ನಾಡಪ್ರಭು ಕೆಂಪೇಗೌಡ ಬಡಾವಣೆ: ಜಲಾವೃತ ಪ್ರದೇಶದಲ್ಲಿವೆ 800ಕ್ಕೂ ಅಧಿಕ ನಿವೇಶನಗಳು

ಮುಳುಗಡೆ ಪ್ರದೇಶ: ಸಂತ್ರಸ್ತರಿಗೆ ಸಿಗಲಿದೆ ಬದಲಿ ನಿವೇಶನ

• ಪ್ರವೀಣ್ ಕುಮಾರ್ ಪಿ.ವಿ.



ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಕನ್ನಹಳ್ಳಿ ಕೆರೆ ಸಮೀಪದ ನಿವೇಶನಗಳ ಮೂಲಸೌಕರ್ಯ ಕೊಳವೆ ಮಾರ್ಗದಲ್ಲಿ ನೀರು ನಿಂತಿರುವುದು – ಪ್ರಜಾವಾಣಿ ಚಿತ್ರ/ಎಂ.ಎಸ್. ಮಂಜುನಾಥ್

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಕನ್ನಹಳ್ಳಿ ಕೆರೆ ಸಮೀಪದಲ್ಲಿ ಹಂಚಿಕೆಯಾಗಿದ್ದ ನಿವೇಶನಗಳ ಮುಳುಗಡೆ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮುಂದಾಗಿದೆ. ನೀರು ನಿಲ್ಲುವ ಪ್ರದೇಶವನ್ನು ಉದ್ಯಾನ ನಿರ್ಮಾಣಕ್ಕೆ ಬಳಸಿಕೊಂಡು, ಇಲ್ಲಿ ಹಂಚಿಕೆಯಾಗಿದ್ದ ನಿವೇಶನಗಳಿಗೆ ಬದಲಿ ನಿವೇಶನ ನೀಡಲು ಬಿಡಿಎ ಮುಂದಾಗಿದೆ.

ಇತ್ತೀಚೆಗೆ ನಡೆದ ಬಿಡಿಎ ಆಡಳಿತ ಮಂಡಳಿ ಸಭೆಯಲ್ಲಿ ಈ ಕುರಿತು ತೀರ್ಮಾನಿಸಲಾಗಿದೆ. ಎಷ್ಟು ಬದಲಿ ನಿವೇಶನ ನೀಡಬೇಕಾಗುತ್ತದೆ ಎಂಬ ಬಗ್ಗೆ ಪ್ರಸ್ತಾವ ಸಿದ್ಧಪಡಿಸುವಂತೆ ಎಂಜಿನಿಯರಿಂಗ್ ವಿಭಾಗಕ್ಕೆ ಸೂಚಿಸಲಾಗಿದೆ.

ಕನ್ನಹಳ್ಳಿ ಕೆರೆಯ ಬಳಿ ಬ್ಲಾಕ್ 1ನ ಎಲ್ ಸೆಕ್ಟರ್ ಹಾಗೂ ಬ್ಲಾಕ್ 2ರ ಎ, ಬಿ ಹಾಗೂ ಎಚ್ ಸೆಕ್ಟರ್‌ಗಳಲ್ಲಿ 500ಕ್ಕೂ ಅಧಿಕ ನಿವೇಶನಗಳಿರುವ ಪ್ರದೇಶ ಮಳೆಗಾಲದಲ್ಲಿ ಜಲಾವೃತವಾಗುತ್ತವೆ. ಇಲ್ಲಿ ಕೆಲವು ನಿವೇಶನಗಳಲ್ಲಿ ಎರಡು- ಮೂರು ಅಡಿಗಳಷ್ಟು ಆಳಕ್ಕೆ ಅಗೆದಾಗಲೂ ನೀರಿನ ಒರತೆ ಒಸರುತ್ತಿದೆ. ಇಲ್ಲಿ ಮನೆ ಕಟ್ಟಲಾಗದ ಸ್ಥಿತಿ ಇದೆ. ಈ ಬಗ್ಗೆ 'ಪ್ರಜಾವಾಣಿ' ಗಮನ ಸೆಳೆದಿತ್ತು.

ಒಂದೋ ಇಲ್ಲಿ ನೀರು ನಿಲ್ಲದಂತೆ ತಡೆಯಲು ಕಾಲುವೆ ವ್ಯವಸ್ಥೆಯನ್ನು ಪುನರ್ ರೂಪಿಸಬೇಕು ಅಥವಾ ಇಲ್ಲಿ ನಿವೇಶನ ಹಂಚಿಕೆಯಾಗಿರುವವರಿಗೆ ಬದಲಿ ನಿವೇಶನ ನೀಡಬೇಕು ಎಂದು ಸಂತ್ರಸ್ತರು ಮೂರು ವರ್ಷಗಳಿಂದ ಒತ್ತಾಯಿಸುತ್ತಿದ್ದರು. ಈ ಬಗ್ಗೆ ತಜ್ಞರ ಅಭಿಪ್ರಾಯ ಪಡೆದಿರುವ ಬಿಡಿಎ ಕೊನೆಗೂ ಬದಲಿ ನಿವೇಶನ ನೀಡುವ ನಿರ್ಧಾರಕ್ಕೆ ಬಂದಿದೆ.

'ಜಲಾವೃತ ನಿವೇಶನಗಳಿಗೆ ಬದಲಿ ನಿವೇಶನ ನೀಡುವ ಪ್ರಸ್ತಾವಕ್ಕೆ ಆಡಳಿತ ಮಂಡಳಿ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ' ಎಂದು ಬಿಡಿಎ ಆಯುಕ್ತ ಎಂ.ಬಿ.ರಾಜೇಶ ಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

'ಕನ್ನಹಳ್ಳಿ ಕೆರೆಯ ಕೆಳಗಿನ 40 ಎಕರೆಗಳಷ್ಟು ಪ್ರದೇಶದಲ್ಲಿ ನೀರು ನಿಲ್ಲುತ್ತದೆ. ಈ ಪ್ರದೇಶವನ್ನು ಉದ್ಯಾನ ನಿರ್ಮಾಣಕ್ಕೆ ಬಳಸಿ, ಬೇರೆ ಕಡೆ ಉದ್ಯಾನಕ್ಕೆ ಮೀಸಲಿಟ್ಟ ಜಾಗವನ್ನು ಬದಲಿ ನಿವೇಶನ ಹಂಚಿಕೆಗೆ ಬಳಸಲಿದ್ದೇವೆ. ಕೆರೆ ಸಮೀಪದ ಜಾಗದಲ್ಲಿ ನೀರಿನ ಒರತೆ ಚೆನ್ನಾಗಿರುವುದರಿಂದ ಅಲ್ಲಿ ಗಿಡಗಳು ಚೆನ್ನಾಗಿ ಬೆಳೆಯಲಿವೆ' ಎಂದು ಬಿಡಿಎ ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ ತಿಳಿಸಿದರು.

'800 ಫಲಾನುಭವಿಗಳಿಗೆ ಬದಲಿ ನಿವೇಶನಗಳನ್ನು ನೀಡಬೇಕಾದೀತು ಎಂದು ಅಂದಾಜಿಸಿದ್ದೇವೆ. ಇಲ್ಲಿನ ಭೌಗೋಳಿಕ ಸ್ಥಿತಿಗತಿ ಬಗ್ಗೆ ಸಮಗ್ರ ಪರಿಶೀಲನೆ ನಡೆಸಿ ಈ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲಿದ್ದೇವೆ' ಎಂದು ಹೇಳಿದರು.

'ಬದಲಿ ನಿವೇಶನ ಹಂಚಿಕೆ ವಿಳಂಬವಾಗದಿರಲಿ'

ಬದಲಿ ನಿವೇಶನ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು ಎಂದು ಸಂತ್ರಸ್ತ ನಿವೇಶನದಾರರು ಒತ್ತಾಯಿಸಿದ್ದಾರೆ.

ಬಡಾವಣೆಯಲ್ಲಿ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ (ಎಸ್‌ಟಿಪಿ) ಸ್ಥಳ ಬದಲಾವಣೆ ಸಲುವಾಗಿ ನಿವೇಶನ ಕಳೆದುಕೊಂಡವರಿಗೆ ವರ್ಷಗಳ ಬಳಿಕವೂ ಬದಲಿ ನಿವೇಶನ ಹಂಚಿಕೆ ಆಗಿಲ್ಲ. ಇದು ಮುಳುಗಡೆ ಪ್ರದೇಶದಲ್ಲಿ ನಿವೇಶನ ಹೊಂದಿರುವವರ ಆತಂಕಕ್ಕೂ ಕಾರಣವಾಗಿದೆ.

'ಸಾಲ ಪಡೆದು ನಿವೇಶನ ಖರೀದಿಸಿದ್ದೇನೆ. ಬ್ಯಾಂಕ್ ವಿಧಿಸಿದ್ದ ಷರತ್ತಿನ ಪ್ರಕಾರ ಎರಡು ವರ್ಷಗಳಲ್ಲಿ ಮನೆ ನಿರ್ಮಾಣ ಆರಂಭಿಸಬೇಕು. ಇಲ್ಲದಿದ್ದರೆ ಗೃಹ ಸಾಲಕ್ಕೂ ವಾಣಿಜ್ಯ ಸಾಲದಷ್ಟು ಬಡ್ಡಿ ವಿಧಿಸಲಾಗುತ್ತದೆ. ಬಿಡಿಎ ನಿವೇಶನ ಎಂಬ ಕಾರಣಕ್ಕೆ ಮನೆ ನಿರ್ಮಾಣಕ್ಕೆ 5 ವರ್ಷಗಳವರೆಗೆ ಕಾಲಾವಕಾಶ ನೀಡಲು ಬ್ಯಾಂಕ್ ಒಪ್ಪಿದೆ. ನಿವೇಶನ ಹಂಚಿಕೆಯಾಗಿ ಐದು ವರ್ಷಗಳ ಬಳಿಕವೂ ಪ್ರಾಧಿಕಾರವು ಈ ಬಡಾವಣೆಗೆ ಮೂಲಸೌಕರ್ಯ ಕಲ್ಪಿಸಿಲ್ಲ. ಬದಲಿ ನಿವೇಶನ ಹಂಚಿಕೆಗೆ ಮತ್ತಷ್ಟು ವಿಳಂಬ ಮಾಡಿದರೆ ನಾವು ಗೃಹಸಾಲಕ್ಕೆ ಶೇ 7ರ ಬದಲು ಶೇ 12ರಷ್ಟು ಬಡ್ಡಿ ತೆರಬೇಕಾಗುತ್ತದೆ' ಎಂದು ನಿವೇಶನದಾರರೊಬ್ಬರು ತಿಳಿಸಿದರು.

'ಪಾರದರ್ಶಕವಾಗಿರಲಿ'

ಮುಳುಗಡೆ ಪ್ರದೇಶದಲ್ಲಿ ನಿವೇಶನ ಹಂಚಿಕೆಯಾಗಿರುವ ಫಲಾನುಭವಿಗಳಿಗೆ ಬದಲಿ ನಿವೇಶನ ಹಂಚುವ ಬಿಡಿಎ ನಿರ್ಧಾರವನ್ನು ಸಂತ್ರಸ್ತರು ಸ್ವಾಗತಿಸಿದ್ದಾರೆ. 'ಬದಲಿ ನಿವೇಶನ ಹಂಚುವ ಪ್ರಕ್ರಿಯೆಯನ್ನು ಬಿಡಿಎ ಪಾರದರ್ಶಕವಾಗಿ ನಡೆಸಬೇಕು. ಬದಲಿ ನಿವೇಶನಗಳು ವ್ಯಾಜ್ಯರಹಿತವಾಗಿರುವಂತೆ ಎಚ್ಚರವಹಿಸಬೇಕು' ಎಂದು ಕನ್ನಹಳ್ಳಿ ಕೆರೆಯ ಬಳಿ ನಿವೇಶನ ಹೊಂದಿರುವ ವಿಜಯ್ ತಿಳಿಸಿದರು.

'ನಮಗೆ 30x40 ಅಡಿ ವಿಸ್ತೀರ್ಣದ ನಿವೇಶನ ಹಂಚಿಕೆಯಾಗಿದ್ದು, ನೋಂದಣಿಗೆ ₹ 2 ಲಕ್ಷದವರೆಗೆ ವೆಚ್ಚವಾಗಿದೆ. ಬದಲಿ ನಿವೇಶನ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುವುದು ಬಿಡಿಎ ತಪ್ಪಿನಿಂದಾಗಿ. ಹಾಗಾಗಿ ಬದಲಿ ನಿವೇಶನದ ನೋಂದಣಿಯಿಂದ ಹಿಡಿದು ಖಾತಾ ಪಡೆಯುವವರೆಗೆ ತಗಲುವ ಸಮಗ್ರ ವೆಚ್ಚವನ್ನು ಪ್ರಾಧಿಕಾರವೇ ಭರಿಸಬೇಕು' ಎಂದು ಒತ್ತಾಯಿಸಿದರು.

ಆಕಾಶವಾಣಿ: 'ಅಮೃತ ವರ್ಷಿಣಿ' ಜಾಗಕ್ಕೆ 'ರಾಗಂ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳಿಗೆ ವಿಶೇಷ ವೇದಿಕೆಯಾಗಿರುವ ಆಕಾಶವಾಣಿಯ 'ಅಮೃತ ವರ್ಷಿಣಿ' ಸ್ಥಿತ್ಯಂತರ ಕಾಣಲಿದೆ.

'ಅಮೃತ ವರ್ಷಿಣಿ'ಯ ಸ್ಥಾನವನ್ನು 'ರಾಗಂ' ತುಂಬಲಿದೆ. ಆದರೆ, ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳು ಬದಲಾಗುವುದಿಲ್ಲ. ಕಲಾವಿದರಿಗೆ ಇನ್ನೂ ಹೆಚ್ಚಿನ ಅವಕಾಶಗಳು ದೊರೆಯಲಿವೆ. ಇದು ಕೇವಲ ತಾಂತ್ರಿಕ ಬದಲಾವಣೆಯಷ್ಟೇ ಎಂದು ಮೂಲಗಳು ತಿಳಿಸಿವೆ.

100.1 ತರಂಗಾಂತರದಲ್ಲೇ 'ಅಮೃತ ವರ್ಷಿಣಿ' ಇದುವರೆಗೆ ಲಭ್ಯವಾಗುತ್ತಿತ್ತು. 'ರಾಗಂ' ಸಹ ಇದೇ ತರಂಗಾಂತರದಲ್ಲಿ ದೊರೆಯಲಿದೆ.

ಆಕಾಶವಾಣಿ ತನ್ನ ಅಸ್ಮಿತೆಯನ್ನು ಸದಾ ಉಳಿಸಿಕೊಂಡು ಬಂದಿದೆ. ಭವಿಷ್ಯದಲ್ಲೂ ಉಳಿಸಿಕೊಳ್ಳಲಿದೆ. 'ರಾಗಂ' ಸಹ ಆಕಾಶವಾಣಿಯ ಭಾಗವಾಗಿದೆ. ಮೊದಲಿಗಿಂತಲೂ ಹೆಚ್ಚು ಶಾಸ್ತ್ರೀಯ ಕಾರ್ಯಕ್ರಮಗಳು ಕಲಾವಿದರಿಗೆ ದೊರೆಯಲಿವೆ. ಹೀಗಾಗಿ, ಆತಂಕ ಪಡುವ ಅಗತ್ಯವಿಲ್ಲ ಎಂದು ಅಧಿಕಾರಿಗಳು ಪ್ರತಿಪಾದಿಸಿದ್ದಾರೆ.

ಆಕಾಶವಾಣಿಯ 'ರಾಗಂ' ಡಿಟಿಎಚ್ ಚಾನಲ್ ಆಗಿದ್ದು, ಯೂಟ್ಯೂಬ್ ಚಾನಲ್ ಅಲ್ಲ. ಇದುವರೆಗೆ ಬೆಳಿಗ್ಗೆ 6ರಿಂದ 9ರವರೆಗೆ ಹಾಗೂ ಸಂಜೆ 6ರಿಂದ 11ರವರೆಗೆ ಸಂಗೀತ ಕಾರ್ಯಕ್ರಮಗಳನ್ನು 'ಅಮೃತ ವರ್ಷಿಣಿ'ಯಲ್ಲಿ ಪ್ರಸಾರ ಮಾಡಲಾಗುತ್ತಿತ್ತು. ಇನ್ನು ಮುಂದೆ 'ರಾಗಂ'ನಲ್ಲಿ ಬೆಳಿಗ್ಗೆ 6ರಿಂದ ರಾತ್ರಿ 11ರವರೆಗೆ ಪ್ರಸಾರವಾಗಲಿವೆ. ಇದರಿಂದ ಹೆಚ್ಚು ಸಮಯ ದೇಶದ ವಿವಿಧೆಡೆಯ ಕಲಾವಿದರ ಕಾರ್ಯಕ್ರಮಗಳು ಎಂದಿನಂತೆ ಪ್ರಸಾರವಾಗಲಿವೆ ಎಂದು ತಿಳಿಸಿದ್ದಾರೆ.

'ರಾಗಂ'ನಲ್ಲಿ ಚಿತ್ರ ಸಂಗೀತಕ್ಕೆ ಅವಕಾಶ ನೀಡುವುದಿಲ್ಲ. ಇದು ಸಂಪೂರ್ಣ ಶಾಸ್ತ್ರೀಯ ಸಂಗೀತಕ್ಕೆ ಮೀಸಲಾಗಿದೆ. ಇದು ರಾಷ್ಟ್ರದಾದ್ಯಂತ ಪ್ರಸಾರವಾಗಲಿದ್ದು, ಹೊಸ ಅವಕಾಶಗಳಿವೆ. ಸಹಜವಾಗಿಯೇ ಕೆಲ ಬದಲಾವಣೆಗಳು ಬೇರೆ ಬೇರೆ ರೀತಿಯಲ್ಲಿರುತ್ತವೆ ಎಂದು ವಿವರಿಸಿದ್ದಾರೆ.

ಆಧುನಿಕತೆಗೆ ತಕ್ಕಂತೆ ಬದಲಾವಣೆ ಅನಿವಾರ್ಯ. ಜನರು ಡಿಜಿಟಲ್ ಮಾಧ್ಯಮಗಳಿಗೆ ಹೆಚ್ಚು ಒಲವು ತೋರುತ್ತಿರುವುದರಿಂದ ಆಕಾಶವಾಣಿಯೂ ಬದಲಾಗುವುದು ಅನಿವಾರ್ಯ. ಜನರ ಪ್ರತಿಕ್ರಿಯೆಯೂ ನಿರಂತರವಾಗಿ ದೊರೆಯುವುದರಿಂದ ಹೆಚ್ಚು ಅನುಕೂಲವಾಗಲಿದೆ ಎಂದು ವಿವರಿಸಿದ್ದಾರೆ.

'ಅಮೃತ ವರ್ಷಿಣಿ' ಪ್ರಸಾರವು 2004ರ ಜ. 26ರಂದು ಆರಂಭವಾಗಿತ್ತು. ಹಳೆಯ 'ಟ್ರಾನ್ಸ್‌ಮೀಟರ್' ಬದಲಾಯಿಸಬೇಕಾಗಿರುವ ಕಾರಣದಿಂದ ಈಗ ಬದಲಾವಣೆ ಮಾಡಲಾಗುತ್ತಿದೆ. ಅ.18ರಿಂದಲೇ ಈ ಬದಲಾವಣೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬಾಂಗ್ಲಾ: ಹಿಂದೂಗಳ 66 ಮನೆಗಳ ಧ್ವಂಸ

ಢಾಕಾ (ಪಿಟಿಐ): ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದೂಗಳನ್ನು ಗುರಿಯಾಗಿಸಿಕೊಂಡು ಹಿಂಸಾಚಾರ ಮುಂದುವರಿದಿದೆ. ಗುಂಪೊಂದು ಹಿಂದೂಗಳಿಗೆ ಸೇರಿದ 66 ಮನೆಗಳನ್ನು ಧ್ವಂಸ ಮಾಡಿದ್ದು, ಕನಿಷ್ಠ 20 ಮನೆಗಳಿಗೆ ಬೆಂಕಿ ಹಚ್ಚಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಕಳೆದ ವಾರ ದುರ್ಗಾ ಪೂಜೆ ವೇಳೆ, ಪೆಂಡಾಲ್‌ಗಳನ್ನು ಧ್ವಂಸ ಮಾಡಿದ್ದ ಗುಂಪು, ದೇವಸ್ಥಾನದ ಮೇಲೂ ದಾಳಿ ನಡೆಸಿತ್ತು. ಈ ಘಟನೆಗಳನ್ನು ಖಂಡಿಸಿ ಹಿಂದೂಗಳು ಪ್ರತಿಭಟನೆ ನಡೆಸಿದ್ದರು.

'ಈ ನಡುವೆ, ಸಾಮಾಜಿಕ ಮಾಧ್ಯಮಗಳ ಮೂಲಕ ಧರ್ಮನಿಂದನೆ ಮಾಡಲಾಗಿದೆ ಎಂದು ಆರೋಪಿಸಿ ಹಿಂದೂಗಳನ್ನು ಗುರಿಯಾಗಿಸಿಕೊಂಡು ರಂಗಪುರ ಜಿಲ್ಲೆಯ ಗ್ರಾಮವೊಂದರಲ್ಲಿ ಭಾನುವಾರ ರಾತ್ರಿ ದಾಳಿ ನಡೆಸಲಾಗಿದೆ.

ಲಖಿಂಪುರ–ಖೇರಿ ಮತ್ತೆ ನಾಲ್ವರ ಸೆರೆ

ಲಖಿಂಪುರ–ಖೇರಿ (ಪಿಟಿಐ): ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿ ಬಿಜೆಪಿ ಕಾರ್ಯಕರ್ತ ಸೇರಿ ನಾಲ್ವರನ್ನು ಉತ್ತರ ಪ್ರದೇಶ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಬಿಜೆಪಿ ಕಾರ್ಯಕರ್ತ ಸುಮಿತ್ ಜೈಸ್ವಾಲ್, ಶಿಶುಪಾಲ್, ಸತ್ಯಪ್ರಕಾಶ್ ತ್ರಿಪಾಠಿ ಹಾಗೂ ನಂದನ್‌ಸಿಂಗ್ ಬಿಷ್ಟ್ ಬಂಧಿತರು.

ಇದರೊಂದಿಗೆ ಪ್ರಕರಣಕ್ಕೆ ಸಂಬಂಧಿಸಿ ಬಂಧಿತರ ಸಂಖ್ಯೆ 10ಕ್ಕೇರಿದಂತಾಗಿದೆ. ಪೊಲೀಸ್ ಕಸ್ಟಡಿಯಲ್ಲಿದ್ದ ಪ್ರಕರಣದ ಪ್ರಮುಖ ಆರೋಪಿ ಆಶಿಶ್ ಮಿಶ್ರಾ ಹಾಗೂ ಬಂಧಿತ ಎಲ್ಲರನ್ನು ನ್ಯಾಯಾಂಗ ಕಸ್ಟಡಿಗೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

21ರಿಂದ ಬಿಸಿಯೂಟ ಮರುಪರಿಶೀಲನೆಗೆ ಮನವಿ

ಬೆಂಗಳೂರು: ಶಾಲೆಗಳಲ್ಲಿ ಇದೇ 21ರಿಂದ ಮಧ್ಯಾಹ್ನದ ಬಿಸಿಯೂಟ ಆರಂಭಿಸುವ ಮತ್ತು ಭಾನುವಾರ ಕೂಡಾ ಶಾಲೆಗಳನ್ನು ನಡೆಸುವ ನಿರ್ಧಾರವನ್ನು ಮರು ಪರಿಶೀಲಿಸುವಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರಿಗೆ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮನವಿ ಸಲ್ಲಿಸಿದೆ.

ದಸರಾ ರಜಾ ಅವಧಿ ಮುಗಿದು ಇದೇ 21ರಿಂದ ಶಾಲೆಗಳು ಮತ್ತೆ ಆರಂಭಗೊಳ್ಳುತ್ತಿದೆ. ಅದೇ ದಿನದಿಂದ ಬಿಸಿಯೂಟ ಆರಂಭಿಸುವಂತೆ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಆದರೆ, ಬಿಸಿಯೂಟ ತಯಾರಿಸಲು ಶಾಲೆಗಳಲ್ಲಿ ಪಡಿತರ, ಅಡುಗೆ ಅನಿಲ ಸಿಲಿಂಡರ್ ಮತ್ತಿತರ ಸಿದ್ಧತೆ ಆಗಿಲ್ಲ. ಹೀಗಾಗಿ ಶಾಲೆಗಳು ಆರಂಭವಾದ ನಾಲ್ಕು ದಿನಗಳ ಬಳಿಕ ಬಿಸಿಯೂಟ ಆರಂಭಿಸಬೇಕು ಎಂದು ಸಂಘ ಮನವಿ ಮಾಡಿದೆ.

ಕೋವಿಡ್ ಸಂದರ್ಭದಲ್ಲೂ ಶಿಕ್ಷಕರು ಆನ್‌ಲೈನ್, ಆಫ್‌ಲೈನ್ ತರಗತಿ, ವಿದ್ಯಾಗಮ, ವಠಾರ ಶಾಲೆ, ಕೋವಿಡ್ ಕರ್ತವ್ಯ, ಚೆಕ್ ಪೋಸ್ಟ್ ಕೆಲಸ ನಿರ್ವಹಿಸಿದ್ದಾರೆ. ಹೀಗೆ ಶಿಕ್ಷಕರು ನಿರಂತರವಾಗಿ ಕೆಲಸದಲ್ಲಿ ತೊಡಗಿದ್ದಾರೆ. ಮಕ್ಕಳ ಮಾನಸಿಕತೆ ಹಾಗೂ ಶಿಕ್ಷಕರ ಹಿತದೃಷ್ಟಿಯಿಂದ ಭಾನುವಾರ ತರಗತಿ ನಡೆಸುವ ನಿರ್ಧಾರವನ್ನು ಕೈಬಿಡಬೇಕು ಎಂದು ಸಂಘದ ಅಧ್ಯಕ್ಷ ಶಂಭುಲಿಂಗನಗೌಡ ಪಾಟೀಲ ಮತ್ತು ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಲಿ ಆಗ್ರಹಿಸಿದ್ದಾರೆ.

'ಕಾಯ್ದೆಯನ್ನು ನ್ಯಾಯಾಂಗ ಸ್ವಾತಂತ್ರ್ಯದ ಕಾರಣ ನೀಡಿ ರದ್ದು ಮಾಡಲಾಗದು'

ನವದೆಹಲಿ: 'ನ್ಯಾಯಾಂಗ ಸ್ವಾತಂತ್ರ್ಯದ ಕಾರಣ ನೀಡಿ, ಸಂಸತ್‌ನಲ್ಲಿ ಅಂಗೀಕಾರವಾದ ಕಾಯ್ದೆಯೊಂದರ ಸಿಂಧುತ್ವವನ್ನು ಒರೆಗೆ ಹಚ್ಚಲಾಗದು' ಎಂದು ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ಗೆ ತಿಳಿಸಿದೆ.

'ಒಂದು ಕಾಯ್ದೆಯನ್ನು ರೂಪಿಸಿ, ಅಂಗೀಕರಿಸುವುದು ನೀತಿ ನಿರೂಪಣೆಗೆ ಸಂಬಂಧಿಸಿದ್ದು. ಸಂಸತ್‌ನಲ್ಲಿ ಅಂಗೀಕರಿಸಿದ ಕಾಯ್ದೆಯೊಂದನ್ನು ರದ್ದುಪಡಿಸುವುದು ಸಂವಿಧಾನದ ಮೂರು ಅಂಗಗಳ ಅಧಿಕಾರ ಪ್ರತ್ಯೇಕಿಸುವ ಮೂಲತತ್ವದ ಉಲ್ಲಂಘನೆಯಾಗುವುದು' ಎಂದೂ ಕೇಂದ್ರ ಸರ್ಕಾರ ಪ್ರತಿಪಾದಿಸಿದೆ.

'ಸಂವಿಧಾನ ರಚನೆಯ ಮೂಲ ತತ್ವಗಳನ್ನು ಬಳಸಿ ಸಂವಿಧಾನ ತಿದ್ದುಪಡಿಯೊಂದನ್ನು ರದ್ದು ಮಾಡಬಹುದು. ಆದರೆ, ಸಂಸತ್ ಅಂಗೀಕರಿಸಿದ ಶಾಸನವನ್ನು ರದ್ದುಪಡಿಸಲಾಗದು' ಎಂದು ತಿಳಿಸಿದೆ.

ನ.8ರಿಂದ ದತ್ತಮಾಲಾ ಅಭಿಯಾನ



ಗಂಗಾಧರ್ ಕುಲಕರ್ಣಿ

ಚಿಕ್ಕಮಗಳೂರು: ಶ್ರೀರಾಮಸೇನೆ ವತಿಯಿಂದ ನವೆಂಬರ್ 8 ರಿಂದ 14ರವರೆಗೆ ಜಿಲ್ಲೆಯಲ್ಲಿ ದತ್ತಮಾಲಾ ಅಭಿಯಾನ ನಡೆಯಲಿದೆ ಎಂದು ಸಂಘಟನೆ ರಾಜ್ಯ ಘಟಕದ ಕಾರ್ಯಾಧ್ಯಕ್ಷ ಗಂಗಾಧರ ಕುಲಕರ್ಣಿ ಇಲ್ಲಿ ಸೋಮವಾರ ಹೇಳಿದರು.

8ರಂದು ಬೆಳಿಗ್ಗೆ 10 ಗಂಟೆಗೆ ನಗರದ ಶಂಕರ ಮಠದಲ್ಲಿ ದತ್ತ ಮಾಲಾಧಾರಣೆ ನಡೆಯಲಿದೆ. 11ರಂದು ದತ್ತ ದೀಪೋತ್ಸವ ಜರುಗಲಿದೆ. 12ರಂದು ನಗರದಲ್ಲಿ ಪಡಿ ಸಂಗ್ರಹ, 14ರಂದು ದತ್ತ ಪೀಠದಲ್ಲಿ ಧಾರ್ಮಿಕ ಕೈಂಕರ್ಯ ಹಾಗೂ ಸಭೆ ನಡೆಯಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'2019ರಲ್ಲಿ ದತ್ತ ಮಾಲಾ ಅಭಿಯಾನದ ಅಂಗವಾಗಿ ಏರ್ಪಡಿಸಿದ್ದ ಶೋಭಾಯಾತ್ರೆಯಲ್ಲಿ ಗುರುದತ್ತಾತ್ರೇಯರ ವಿಗ್ರಹವನ್ನು ಮೆರವಣಿಗೆ ನಡೆಸಲು ಜಿಲ್ಲಾಡಳಿತ ಅನುಮತಿ ನಿರಾಕರಿಸಿತ್ತು. ಅದರ ಪ್ರತಿಭಟನಾರ್ಥವಾಗಿ ಈ ಭಾರಿ ಶೋಭಾಯಾತ್ರೆ ನಡೆಸುತ್ತಿಲ್ಲ' ಎಂದರು.

ವಿಪ್ರೊ ಜೊತೆ ಅಲಯನ್ಸ್ ವಿ.ವಿ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲಯನ್ಸ್ ವಿಶ್ವವಿದ್ಯಾಲಯವು ವಿಪ್ರೊ 3ಡಿ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲು ನಿರ್ಧರಿಸಿದೆ.

'ಉದ್ಯಮಶೀಲತೆ ಆಧರಿತ ಐಒಟಿ ಕೇಂದ್ರ ಮತ್ತು ಐಡಿಇಎ ಪ್ರಯೋಗಾಲಯಗಳ ಸ್ಥಾಪನೆ ಹಾಗೂ ಕೌಶಲಾಭಿವೃದ್ಧಿ ಕಾರ್ಯಕ್ರಮಗಳ ವಿನ್ಯಾಸ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಈ ಒಪ್ಪಂದಕ್ಕೆ ವಿಶ್ವವಿದ್ಯಾಲಯದ ಉಪ ಕುಲಪತಿ ಅನುಭಾ ಸಿಂಗ್ ಹಾಗೂ ವಿಪ್ರೊ 3ಡಿ ಸಂಸ್ಥೆ ಉಪಾಧ್ಯಕ್ಷ ಹಾಗೂ ಉದ್ಯಮ ವಿಭಾಗದ ಮುಖ್ಯಸ್ಥ ಅಜಯ್ ಪಾರಿಖ್ ಸಹಿ ಹಾಕಲಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

ಮೃಗಾಲಯ ವೀಕ್ಷಣೆಗೆ ಅವಕಾಶ

ಮೈಸೂರು: ದಸರಾ ಹಬ್ಬದ ಪ್ರಯುಕ್ತ ಪ್ರವಾಸಿಗರ ಭೇಟಿ ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ಇದೇ 19ರ ಮಂಗಳವಾರವೂ ಚಾಮರಾಜೇಂದ್ರ ಮೃಗಾಲಯ ಹಾಗೂ ಕಾರಂಜಿ ಕೆರೆ ವೀಕ್ಷಣೆಗೆ ಅವಕಾಶ ನೀಡಲಾಗಿದೆ ಎಂದು ಮೃಗಾಲಯದ ಕಾರ್ಯನಿರ್ವಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೃಗಾಲಯಕ್ಕೆ ಪ್ರತಿ ಮಂಗಳವಾರ ರಜೆ ಇದ್ದು, ಈ ಹಿಂದೆ ಸಾರ್ವಜನಿಕರ ಭೇಟಿಗೆ ಅವಕಾಶ ಇರಲಿಲ್ಲ.

'ಚಳವಳಿಯ ಹಾಡುಗಳು' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಡಾ. ಕೆ. ಶರೀಫಾ

'ಬೋಗಸ್ ಸಂಸ್ಕೃತಿ ಪೋಷಣೆ ಅಪಾಯಕಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೋಗಸ್ ಸಂಸ್ಕೃತಿಗಳನ್ನು ಬೆಳೆಸುತ್ತಿರುವವರೇ ಇಂದು ಪ್ರಜಾಪ್ರಭುತ್ವದ ರಕ್ಷಕರಾಗುತ್ತಿರುವುದು ದುರಂತ' ಎಂದು ಸಾಹಿತಿ ಡಾ. ಕೆ. ಶರೀಫಾ ಅಭಿಪ್ರಾಯಪಟ್ಟರು.

ಜನ ಪ್ರಕಾಶನ ಹಾಗೂ ಬುಕ್ ಬ್ರಹ್ಮ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ ಅವರ 'ಚಳವಳಿಯ ಹಾಡುಗಳು' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪ್ರಭುತ್ವದ ವಿರುದ್ಧ ಕವಿತೆ ಬರೆದರೆ ಎಫ್‌ಐಆರ್ ದಾಖಲಿಸುವ ಕಾಲಘಟ್ಟದಲ್ಲಿ ನಾವಿದ್ದೇವೆ. ಈಗಾಗಲೇ ಅನೇಕ ಹೋರಾಟಗಾರರು ಜೈಲು ಶಿಕ್ಷೆ ಸಹ ಅನುಭವಿಸಿದ ಉದಾಹರಣೆಗಳಿವೆ. ಜತೆಗೆ, ಶಸ್ತ್ರಾಸ್ತ್ರಗಳನ್ನು ನಿಷೇಧಿಸಿರುವ ದೇಶದಲ್ಲೂ ತ್ರಿಶೂಲ ದೀಕ್ಷೆ ನಡೆಯುತ್ತಿರುವ ಕಾಲಘಟ್ಟ ಇದಾಗಿದೆ' ಎಂದರು.

'ಬರಗೂರು ರಾಮಚಂದ್ರಪ್ಪ ಅವರು ಕಟ್ಟಿದ ಚಳವಳಿಗಳು ಅದ್ಭುತ ಪರಿಣಾಮ ಬೀರಿವೆ. ಬಂಡಾಯ ಚಳವಳಿಯ ಸಂದರ್ಭದಲ್ಲಿ ಪಟ್ಟಭದ್ರರ ಭಯವೂ ಕಾಡಿತ್ತು. ವಿರೋಧಗಳು ಸಹ ವ್ಯಕ್ತವಾಗಿದ್ದವು. ಬಂಡಾಯ ಚಳವಳಿಯ ಬೆನ್ನಲುಬಾಗಿದ್ದ ಬರಗೂರು ಅವರು ನಮ್ಮೆಲ್ಲರನ್ನೂ ತಾಯ್ತನದಿಂದ ಪೋಷಿಸಿದ್ದರು. ನಿಷ್ಠುರವಾಗಿ ಸಿಡಿದೆಳುವ ಪ್ರವೃತ್ತಿ ಹಾಗೂ ವೈಚಾರಿಕತೆ ಆಳ ಮತ್ತು ಸ್ಪಷ್ಟತೆ ಅವರ ವ್ಯಕ್ತಿತ್ವದಲ್ಲಿದೆ' ಎಂದು ವಿವರಿಸಿದರು.

'ನಡೆ, ನುಡಿಯಲ್ಲಿ ಸೈದ್ಧಾಂತಿಕ ಬದ್ಧತೆಗಳು ಇಂದಿಗೂ ಬರಗೂರು ರಾಮಚಂದ್ರಪ್ಪ ಅವರಲ್ಲಿ ಉಳಿದುಕೊಂಡಿವೆ. ಬಂಡಾಯ ಸಾಹಿತಿಗೆ ಸಾಮಾಜಿಕ ಜವಾಬ್ದಾರಿ ಮತ್ತು ರಾಜಕೀಯ ಸ್ಪಷ್ಟತೆ ಇರಬೇಕು ಎನ್ನುವುದನ್ನು ಅವರು ಸದಾ ಹೇಳುತ್ತಾರೆ' ಎಂದು ಹೇಳಿದರು.

ಬರಗೂರು ರಾಮಚಂದ್ರಪ್ಪ ಅವರು ಮಾತನಾಡಿ, 'ಚಳವಳಿ ಪ್ರಜ್ಞೆಯನ್ನು ಜೀವಂತವಾಗಿಡುವುದು ಇಂದು ಹೆಚ್ಚು ಅಗತ್ಯವಿದೆ. ಕನ್ನಡ ಸಾಹಿತ್ಯವೇ ನನಗೆ ಚಳವಳಿ ಪ್ರಜ್ಞೆ ಮೂಡಿಸಿದೆ. ಈ ಚಳವಳಿ ಪ್ರಜ್ಞೆಯನ್ನು ಉಳಿಸಿ ಬೆಳೆಸಬೇಕು' ಎಂದು ಸಲಹೆ ನೀಡಿದರು.

ಕೃತಿ ಬಿಡುಗಡೆ ಮಾಡಿ ಮಾತನಾಡಿದ ವಿಮರ್ಶಕ ಡಾ.ಎಚ್. ದಂಡಪ್ಪ, ಬರಗೂರು ರಾಮಚಂದ್ರಪ್ಪ ಅವರ ವ್ಯಕ್ತಿತ್ವ, ಹೋರಾಟದ ದಿನಗಳು, ಶಿಷ್ಯರಿಗೆ ಮಾರ್ಗದರ್ಶನ ನೀಡಿದ ವೃತ್ತಿ ಜೀವನದ ದಿನಗಳನ್ನು ನೆನಪಿಸಿಕೊಂಡರು.

'ಚಳವಳಿಯ ಹಾಡುಗಳು' ಕೃತಿಯಲ್ಲಿ ಜನಸಾಮಾನ್ಯರ ಸಾಂಸ್ಕೃತಿಕ ದರ್ಶನವಿದೆ' ಎಂದು ಹೇಳಿದರು.

'ಬಲಪಂಥೀಯರು ಸೃಜನಶೀಲರಾಗಲು ಸಾಧ್ಯವೇ ಇಲ್ಲ'

'ಇಂದು ಎಡಪಂಥ ಮತ್ತು ಬಲಪಂಥದ ಬಗ್ಗೆ ತೀವ್ರ ಚರ್ಚೆ ನಡೆಯುತ್ತಿದೆ. ಯುವಕರು ಎಡಪಂಥದ ಬಗ್ಗೆ ಒಲವು ಬೆಳೆಸಿಕೊಳ್ಳದಿದ್ದರೂ ಪರವಾಗಿಲ್ಲ. ಬಲಪಂಥದ ಮಾರ್ಗ ಆಯ್ಕೆ ಮಾಡಿಕೊಳ್ಳಬಾರದು' ಎಂದು ಸಾಹಿತಿ ನಟರಾಜ ಹುಳಿಯಾರ್ ಹೇಳಿದರು.

'ಕರ್ನಾಟಕದಲ್ಲಿ ಬಲಪಂಥದ ಒಬ್ಬ ದೊಡ್ಡ ಲೇಖಕ ಹುಟ್ಟಿಲ್ಲ. ಬಲಪಂಥದಲ್ಲಿ ಸೃಜನಶೀಲರಾಗಲು ಸಾಧ್ಯವೇ ಇಲ್ಲ. ಬಲಪಂಥೀಯ ಸಿದ್ಧಾಂತ ಸೃಜನಶೀಲತೆಗೆ ಅವಕಾಶ ಕಲ್ಪಿಸುವುದಿಲ್ಲ. ವ್ಯಕ್ತಿಯ ಕಲ್ಪನೆಯನ್ನು ನಿಯಂತ್ರಿಸುತ್ತದೆ. ಎಸ್.ಎಲ್. ಭೈರಪ್ಪ ಅವರು ಒಂದು ಕಾಲದಲ್ಲಿ ಒಳ್ಳೆಯ ಲೇಖಕರಾಗಿದ್ದರು. ಆದರೆ, ದಾರಿ ತಪ್ಪಿದರು' ಎಂದು ಹೇಳಿದರು.

'ರಾಜ್ಯದಲ್ಲಿ ಇಂದು ವಿಶ್ವವಿದ್ಯಾಲಯಗಳ ಹಲವು ವಿಭಾಗಗಳು ಕೋಮುವಾದಕ್ಕೆ ಸಿಲುಕಿವೆ. ಸಂವಾದಕ್ಕೂ ತೆರೆದುಕೊಳ್ಳದಂತಹ ವಾತಾವರಣ ಸೃಷ್ಟಿಯಾಗಿದೆ. ಆದರೆ, ಕನ್ನಡ ವಿಭಾಗಗಳು ಪ್ರಗತಿಪರ ಚಿಂತನೆಗಳನ್ನು ಅಳವಡಿಸಿಕೊಳ್ಳುವಲ್ಲಿ ಮುಂಚೂಣಿಯಲ್ಲಿವೆ' ಎಂದು ಹೇಳಿದರು.

ಧರಣೇಂದ್ರ ಕುರಕುರಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಶಿರಸಿ: ಖ್ಯಾತ ಅನುವಾದಕ ಇಲ್ಲಿನ ಉದಾಸಿ ನಗರದ ಧರಣೇಂದ್ರ ಕುರಕುರಿ ಅವರಿಗೆ ಉತ್ತರ ಪ್ರದೇಶದ ಹಿಂದಿ ಸಂಸ್ಥಾನ ನೀಡುವ 2020ನೇ ಸಾಲಿನ 'ಸೌಹಾರ್ದ ಸಮ್ಮಾನ್' ಪ್ರಶಸ್ತಿ ಘೋಷಿಸಲಾಗಿದೆ.

ಪ್ರಶಸ್ತಿಯು ₹2.5 ಲಕ್ಷ ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ನವೆಂಬರ್ ತಿಂಗಳಿನಲ್ಲಿ ಲಖನೌದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಎರಡು ಭಾಷೆಗಳ ನಡುವೆ ಸೌಹಾರ್ದ ಬೆಸೆಯುವ ಉತ್ತಮ ಅನುವಾದಕರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ.

ಸಜ್ಜಾಗಿದೆ ಇನ್ಫೊಸಿಸ್ ಫೌಂಡೇಷನ್ ಸಂಕೀರ್ಣ • ಜಗತ್ತಿನ ಅತಿ ದೊಡ್ಡ ಹೃದ್ರೋಗ ಆಸ್ಪತ್ರೆಯಾಗುತ್ತಿದೆ ಜಯದೇವ

ಇನ್ಫೊಸಿಸ್ ನೆರವು: ಜಯದೇವ ಮತ್ತಷ್ಟು ವಿಶಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ಫೊಸಿಸ್ ಪ್ರತಿಷ್ಠಾನವು ನಗರದ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಆವರಣದಲ್ಲಿ 350 ಹಾಸಿಗೆಗಳ ಸಾಮರ್ಥ್ಯದ ಹೊಸ ಕಟ್ಟಡ ಸಂಕೀರ್ಣವನ್ನು ನಿರ್ಮಿಸಿಕೊಟ್ಟಿದ್ದು, ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. 'ಇನ್ಫೊಸಿಸ್ ಫೌಂಡೇಷನ್ ಸಂಕೀರ್ಣ'ದ ಸೇರ್ಪಡೆಯೊಂದಿಗೆ ಜಯದೇವ ಆಸ್ಪತ್ರೆಯು ವಿಶ್ವದಲ್ಲೇ ಅತಿದೊಡ್ಡ ಹೃದ್ರೋಗ ಆಸ್ಪತ್ರೆಯಾಗಲಿದೆ.

ನಗರದ ಆಸ್ಪತ್ರೆಯ 700 ಹಾಸಿಗೆಗಳು, ಕಲಬುರಗಿ ಹಾಗೂ ಮೈಸೂರಿನ ಶಾಖೆಗಳ ಸೌಕರ್ಯಗಳು ಸೇರಿ ಜಯದೇವ ಸಂಸ್ಥೆಯು ಒಟ್ಟು 1,450 ಹಾಸಿಗೆಗಳ ಸಾಮರ್ಥ್ಯವನ್ನು ಹೊಂದಿದೆ. ಹೊಸ ಸಂಕೀರ್ಣವು ಸೇವೆಗೆ ಲಭ್ಯವಾದ ಬಳಿಕ ನಗರದ ಜಯದೇವ ಆಸ್ಪತ್ರೆಯ ಹಾಸಿಗೆಗಳ ಸಾಮರ್ಥ್ಯ 1,050ಕ್ಕೆ ಹಾಗೂ ಸಂಸ್ಥೆಯ ಹಾಸಿಗೆಗಳ ಒಟ್ಟು ಸಾಮರ್ಥ್ಯ 1800 ಕ್ಕೆ ಹೆಚ್ಚಲಿದೆ.

'ಹೃದ್ರೋಗ ಚಿಕಿತ್ಸೆಗೆ ಸೀಮಿತವಾಗಿರುವ ಆಸ್ಪತ್ರೆಗಳಲ್ಲಿ ಗುಜರಾತ್‌ನಲ್ಲಿರುವ ಯು.ಎನ್.ಮೆಹ್ತಾ ಆಸ್ಪತ್ರೆ ಜಗತ್ತಿನಲ್ಲೇ ಅತಿ ದೊಡ್ಡದು. ಅಲ್ಲಿ ಚಿಕಿತ್ಸೆಗೆ 1,000 ಹಾಸಿಗೆಗಳು ಬಳಕೆಯಾಗುತ್ತಿವೆ. ಇನ್ಫೊಸಿಸ್ ಪ್ರತಿಷ್ಠಾನದ ಹೃದಯ ವೈಶಾಲ್ಯದಿಂದ ನಮ್ಮ ಸಂಸ್ಥೆ ಜಗತ್ತಿನ ಅತಿದೊಡ್ಡ ಹೃದ್ರೋಗ ಆಸ್ಪತ್ರೆಯಾಗುತ್ತಿದೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಹೇಳಿದರು.

'ನಮ್ಮ ಆಸ್ಪತ್ರೆಗೆ ರಾತ್ರಿಯೂ ಪ್ರತಿ ಐದು ನಿಮಿಷಕ್ಕೊಬ್ಬರಂತೆ ಹೃದ್ರೋಗಿಗಳು ತುರ್ತುಚಿಕಿತ್ಸೆಗೆ ದಾಖಲಾಗುತ್ತಾರೆ. 700 ಹಾಸಿಗೆಗಳಿದ್ದರೂ ಸಾಲುತ್ತಿಲ್ಲ. ಐಸಿಯುನಲ್ಲಿ ಹಾಸಿಗೆ ಕೊರತೆ ತೀವ್ರವಾಗಿದೆ. ಹೊಸ ಸಂಕೀರ್ಣವು ಈ ಕೊರತೆಗಳನ್ನು ನೀಗಿಸಲಿದೆ' ಎಂದರು.

'ಆಸ್ಪತ್ರೆಗೊಮ್ಮೆ ಭೇಟಿ ನೀಡಿದ್ದ ನಾರಾಯಣಮೂರ್ತಿಯವರು ರೋಗಿಗಳ ಊರು ಮತ್ತು ಆರ್ಥಿಕ ಸ್ಥಿತಿಗತಿ ತಿಳಿದುಕೊಂಡರು. ಕಡುಬಡವರಿಗೂ ಇಲ್ಲಿ ಅತಿ ಕಡಿಮೆ ದರದಲ್ಲಿ ಚಿಕಿತ್ಸೆ ಸಿಗುತ್ತಿರುವುದನ್ನು ಹಾಗೂ ಇಲ್ಲಿ ಹಾಸಿಗೆಗಳ ಕೊರತೆ ಇರುವುದನ್ನು ಗಮನಿಸಿದರು. ಇದಾದ ಮರುದಿನವೇ ಇನ್ಫೊಸಿಸ್ ಪ್ರತಿಷ್ಠಾನದ ಸುಧಾಮೂರ್ತಿ ಕರೆ ಮಾಡಿ ಆಸ್ಪತ್ರೆಗೆ ಹೊಸ ಕಟ್ಟಡ ಕಟ್ಟಿಸಿಕೊಡುವ ವಿಚಾರ ತಿಳಿಸಿದರು' ಎಂದು ಸ್ಮರಿಸುತ್ತಾರೆ ನಿರ್ದೇಶಕರು.

'ಆರಂಭದಲ್ಲಿ 200 ಹಾಸಿಗೆಗಳ ಆಸ್ಪತ್ರೆ ನಿರ್ಮಿಸಲು ಉದ್ದೇಶಿಸಿದ್ದ ಇನ್ಫೊಸಿಸ್ ಪ್ರತಿಷ್ಠಾನವು ಬಳಿಕ 350 ಹಾಸಿಗೆಗಳ ಆಸ್ಪತ್ರೆಯನ್ನು ಕಟ್ಟಿಸಿಕೊಟ್ಟಿದೆ. 2019 ರಲ್ಲಿ ಆಗಿನ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿಯವರು ಹೊಸ ಸಂಕೀರ್ಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು. ಕೋವಿಡ್ ಸಾಂಕ್ರಾಮಿಕ, ಲಾಕ್‌ಡೌನ್‌ಗಳ ನಡುವೆಯೂ ಕಾಮಗಾರಿ ಅಲ್ಪಾವಧಿಯಲ್ಲಿ ಪೂರ್ಣಗೊಂಡಿದೆ. ಕೇವಲ 36 ಗುಂಟೆ ಜಾಗದಲ್ಲಿ ನಾಲ್ಕು ಮಹಡಿಗಳ ಹಾಗೂ 1.8 ಲಕ್ಷ ಚದರ ಅಡಿ ವಿಸ್ತೀರ್ಣದ ಆಸ್ಪತ್ರೆ ನಿರ್ಮಾಣವಾಗಿರುವುದು ಎಂಜಿನಿಯರಿಂಗ್ ಪವಾಡ ಎನ್ನಬಹುದು' ಎಂದು ಹೇಳಿದರು.



ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ ನಿರ್ಮಾಣಗೊಂಡಿರುವ ಇನ್ಫೊಸಿಸ್ ಸಂಕೀರ್ಣ

'ಅಗ್ಗದ ದರದಲ್ಲಿ ಉತ್ಕೃಷ್ಟ ಚಿಕಿತ್ಸೆ'

'ತಾರಾ ಮೌಲ್ಯದ ಖಾಸಗಿ ಹೃದ್ರೋಗ ಆಸ್ಪತ್ರೆಗಳಲ್ಲಿ ಸಿಗುವಷ್ಟೇ ಗುಣಮಟ್ಟದ ಚಿಕಿತ್ಸೆಯು, ಅಲ್ಲಿಗಿಂತ ಶೇ 60ರಷ್ಟು ಕಡಿಮೆ ದರದಲ್ಲಿ ಜಯದೇವದಲ್ಲಿ ಲಭ್ಯ. ರಿಯಾಯಿತಿ ದರದಲ್ಲಿ ಗುಣಮಟ್ಟದ ಚಿಕಿತ್ಸೆ ನೀಡುವುದನ್ನು ಅಧ್ಯಯನ ನಡೆಸಿದ್ದ ಐಐಎಂ, ದೇಶದ ಸ್ವಾಯತ್ತ ಆಸ್ಪತ್ರೆಗಳು ಇದೇ ಆಡಳಿತ ಮಾದರಿಯನ್ನು ಅನುಸರಿಸುವಂತೆ ಶಿಫಾರಸು ಮಾಡಿತ್ತು' ಎಂದು ಡಾ.ಸಿ.ಎನ್.ಮಂಜುನಾಥ್ ತಿಳಿಸಿದರು.

'ಕಡತಗಳಿಗಿಂತ ಜೀವ ಬಲು ಮುಖ್ಯ. ನಮ್ಮಲ್ಲೇನಿದ್ದರೂ ಮಾನವೀಯತೆಗೆ ಆದ್ಯತೆ. ಚಿಕಿತ್ಸೆ ಮೊದಲು, ಹಣಪಾವತಿ ನಂತರ ಎಂಬುದು ನಮ್ಮ ಸಿದ್ಧಾಂತ' ಎಂದರು.



ಬಡ ಹೃದ್ರೋಗಿಗಳಿಗೂ ಗುಣಮಟ್ಟದ ಚಿಕಿತ್ಸೆ ನೀಡುತ್ತಿರುವ ಅತ್ಯುತ್ತಮ ಆಸ್ಪತ್ರೆ ಜಯದೇವ. ಇದನ್ನು ದೇಶದ ಅತಿದೊಡ್ಡ ಆಸ್ಪತ್ರೆಯನ್ನಾಗಿಸಲು ಕೈ ಜೋಡಿಸುತ್ತಿರುವ ಬಗ್ಗೆ ನಮಗೆ ಸಂತೋಷವಿದೆ.

ಸುಧಾಮೂರ್ತಿ
ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ



ಜಯದೇವ ಆಸ್ಪತ್ರೆಯ ಇನ್ಫೊಸಿಸ್ ಸಂಕೀರ್ಣವು ದೇವರೇ ಕಳುಹಿಸಿದ ಕೊಡುಗೆ. ಇದನ್ನು ಸಿಮೆಂಟ್, ಉಕ್ಕಿನಿಂದಲ್ಲ; ಮಾನವೀಯತೆ, ಹೃದಯವಂತಿಕೆಯಿಂದ ನಿರ್ಮಿಸಲಾಗಿದೆ.

ಡಾ.ಸಿ.ಎನ್.ಮಂಜುನಾಥ್, ನಿರ್ದೇಶಕ, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ



105 ಹೃದ್ರೋಗ ತಜ್ಞರನ್ನು ಜಯದೇವ ಆಸ್ಪತ್ರೆ ಹೊಂದಿದೆ

50 ಕಾರ್ಡಿಯೊಥೊರಾಸಿಕ್ ಶಸ್ತ್ರಚಿಕಿತ್ಸಕರನ್ನು ಸಂಸ್ಥೆ ಹೊಂದಿದೆ

35 ಸಂಸ್ಥೆಯಲ್ಲಿರುವ ಅರಿವಳಿಕೆ ತಜ್ಞರು

ಸೌಲಭ್ಯಗಳು

'ಇನ್ಫೊಸಿಸ್ ಸಂಕೀರ್ಣದಲ್ಲಿ ತೀವ್ರ ನಿಗಾ ಘಟಕದಲ್ಲಿ 100 ಹಾಸಿಗೆಗಳು ಹಾಗೂ ಸಾಮಾನ್ಯ ವಾರ್ಡ್‌ಗಳಲ್ಲಿ 250 ಹಾಸಿಗೆಗಳಿರಲಿವೆ. ಎರಡು ಕಾರ್ಡಿಯಾಕ್ ಕ್ಯಾಥ್‌ಲ್ಯಾಬ್‌ಗಳು, ಎರಡು ಶಸ್ತ್ರಚಿಕಿತ್ಸಾ ಕೊಠಡಿಗಳು (ಒ.ಟಿ), ಇನ್ನೊಂದು ಹೈಬ್ರಿಡ್ ಒ.ಟಿ (ಒ.ಟಿ ಮತ್ತು ಕ್ಯಾಥ್‌ಲ್ಯಾಬ್) ನಿರ್ಮಾಣವಾಗುತ್ತಿವೆ. ಹೊಸ ಸಂಕೀರ್ಣಕ್ಕೆ ₹105 ಕೋಟಿಗೂ ಅಧಿಕ ವೆಚ್ಚವಾಗಲಿದೆ' ಎಂದು ಸಂಸ್ಥೆಯ ನಿರ್ದೇಶಕರು ವಿವರಿಸಿದರು.

'ಹೊಸ ಕಟ್ಟಡದ ಎರಡು ಕ್ಯಾಥ್‌ಲ್ಯಾಬ್‌ಗಳೂ ಸೇರಿ ಸಂಸ್ಥೆಯ ಕ್ಯಾಥ್‌ಲ್ಯಾಬ್‌ಗಳ ಸಂಖ್ಯೆ 15ಕ್ಕೆ ಹೆಚ್ಚಲಿದೆ. 2,500ಕ್ಕೂ ಅಧಿಕ ಹೊರರೋಗಿಗಳು ಇಲ್ಲಿ ಚಿಕಿತ್ಸೆ ಪಡೆಯಲಿದ್ದಾರೆ. ಈ ಕಟ್ಟಡವನ್ನು ನವೆಂಬರ್‌ನಲ್ಲಿ ಲೋಕಾರ್ಪಣೆಗೊಳಿಸಲು ಸಜ್ಜಾಗಿದ್ದೇವೆ' ಎಂದರು.

ವರ್ಷದಲ್ಲಿ 40 ಸಾವಿರ ಮಂದಿಗೆ ಚಿಕಿತ್ಸೆ: ಪ್ರತಿ ವರ್ಷ 40 ಸಾವಿರಕ್ಕೂ ಹೆಚ್ಚು ರೋಗಿಗಳು ಜಯದೇವದಲ್ಲಿ ಆ್ಯಂಜಿಯೊಗ್ರಾಮ್, ಆ್ಯಂಜಿಯೋಪ್ಲಾಸ್ಟಿ, ಪೇಸ್‌ಮೇಕರ್ ಚಿಕಿತ್ಸೆ ಪಡೆಯುತ್ತಾರೆ. ದೇಶದಲ್ಲೇ ಅತಿ ಹೆಚ್ಚು ಕ್ಯಾಥ್‌ಲ್ಯಾಬ್ ಪ್ರಕ್ರಿಯೆಗಳನ್ನು ನಡೆಸುವ ಆಸ್ಪತ್ರೆಯಿದು. ನಿತ್ಯವೂ ಇಲ್ಲಿ 150 ರಿಂದ 175 ಆ್ಯಂಜಿಯೋಗ್ರಾಮ್ ಹಾಗೂ ಆ್ಯಂಜಿಯೊಪ್ಲಾಸ್ಟಿಗಳು, 20ಕ್ಕೂ ಹೆಚ್ಚು ತೆರೆದ ಹೃದಯದ ಶಸ್ತ್ರಚಿಕಿತ್ಸೆಗಳು ನಡೆಯುತ್ತವೆ. ಸಂಸ್ಥೆಯು 12 ವರ್ಷಗಳಲ್ಲಿ 350ಕ್ಕೂ ಅಧಿಕ ಹೃದ್ರೋಗ ತಜ್ಞರು ಮತ್ತು ಹೃದಯ ಶಸ್ತ್ರಚಿಕಿತ್ಸಕರನ್ನು ರೂಪಿಸಿದೆ.

ಸಾರಿಗೆ ನಿಗಮದ ನೌಕರರ ಮರುನೇಮಕಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ಏಪ್ರಿಲ್‌ನಲ್ಲಿ ರಾಜ್ಯದಾದ್ಯಂತ ನಡೆದ ಸಾರಿಗೆ ನಿಗಮಗಳ ನೌಕರರ ಮುಷ್ಕರದ ಸಮಯದಲ್ಲಿ ಕೆಲಸದಿಂದ ವಜಾ ಮಾಡಿರುವ 4 ಸಾವಿರ ನೌಕರರನ್ನು ಮರು ನೇಮಕ ಮಾಡಬೇಕು' ಎಂದು ರಾಜ್ಯ ಸಾರಿಗೆ ನಿಗಮಗಳ ಸಿಬ್ಬಂದಿ ಮತ್ತು ಕಾರ್ಮಿಕರ ಒಕ್ಕೂಟದ ಅಧ್ಯಕ್ಷ ಎಚ್.ವಿ. ಅನಂತ ಸುಬ್ಬರಾವ್ ಸರ್ಕಾರವನ್ನು ಆಗ್ರಹಿಸಿದರು.

ವಜಾ ಆಗಿರುವ ಕಾರ್ಮಿಕರನ್ನು ಮರು ನೇಮಕ ಮಾಡುವುದಾಗಿ ಸಾರಿಗೆ ಸಚಿವ ಬಿ. ಶ್ರೀರಾಮುಲು ಸೆಪ್ಟೆಂಬರ್ 21ರಂದು ಕರೆದಿದ್ದ ಕಾರ್ಮಿಕರ ಸಂಘಗಳ ಮುಖಂಡರ ಸಭೆಯಲ್ಲಿ ಭರವಸೆ ನೀಡಿದ್ದರು. ಆದರೆ, ಇದೇ 8ರಂದು ಸೇರಿದ್ದ ಬಿಎಂಟಿಸಿ ಆಡಳಿತ ಮಂಡಳಿ ಸಭೆಯು ವಜಾ ಆದ ನೌಕರರ ಮರುನೇಮಕ ಮಾಡುವುದಿಲ್ಲ ಎಂಬ ಆಘಾತಕಾರಿ ನಿಲುವು ಕೈಗೊಂಡಿದೆ ಎಂದು ಅನಂತ ಸುಬ್ಬರಾವ್ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಟೀಕಿಸಿದರು.

ಈ ವಿಷಯದಲ್ಲಿ ಅಂತಿಮ ತೀರ್ಮಾನ ಕೈಗೊಳ್ಳುವ ಅಧಿಕಾರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬಿಡಲಾಗಿದೆ. ಹಾಗಾದರೆ ಸಾರಿಗೆ ಸಚಿವರ ಆಶ್ವಾಸನೆಗೆ ಬೆಲೆ ಇಲ್ಲವೇ ಎಂದೂ ಅವರು ಪ್ರಶ್ನಿಸಿದರು.

ಈಗಾಗಲೇ ಕೋವಿಡ್‌ನಿಂದ ಮೃತಪಟ್ಟ ನೌಕರನೊಬ್ಬನ ಕುಟುಂಬದ ಮೂವರು ಸದಸ್ಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಲ್ಲದೆ, ಮತ್ತೊಬ್ಬ ನೌಕರ ಆತ್ಮಹತ್ಯೆಗೆ ಶರಣಾಗಿದ್ದು, ಇನ್ನೊಬ್ಬ ಆತ್ಮಹತ್ಯೆಗೆ ಯತ್ನಿಸಿದ್ದಾನೆ. ನಿಗಮಗಳ ಉಳಿದ ಕಾರ್ಮಿಕರು ಹತಾಶ ದಾರಿ ಹಿಡಿಯುವ ಮುನ್ನ ಸಾರಿಗೆ ಸಚಿವರು, ಮುಖ್ಯಮಂತ್ರಿಗಳು ವಜಾ ಆಗಿರುವ ಕಾರ್ಮಿಕರನ್ನು ಮರುನೇಮಕ ಮಾಡುವ ತೀರ್ಮಾನ ಕೈಗೊಳ್ಳಬೇಕು ಎಂದು ಸುಬ್ಬರಾವ್ ಮನವಿ ಮಾಡಿದರು.

ಜಯಂತ ಕಾಯ್ಕಿಣಿ ಭಾಷಾಂತರ ಕೃತಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಗೋಕರ್ಣ: ಅಮೆರಿಕ ಸಾಹಿತ್ಯ ಭಾಷಾಂತರಕಾರರ ಸಂಸ್ಥೆಯ (ಎ.ಎಲ್.ಟಿ.ಎ) 'ಅಮೆರಿಕ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ'ಗೆ ಸಾಹಿತಿ ಜಯಂತ ಕಾಯ್ಕಿಣಿ ಅವರ 'ನೋ ಪ್ರೆಸೆಂಟ್ಸ್ ಪ್ಲೀಸ್' ಕೃತಿಯು ಆಯ್ಕೆಯಾಗಿದೆ. ಕನ್ನಡದ ಈ ಕೃತಿಯನ್ನು ಸಾಹಿತಿ ತೇಜಸ್ವಿನಿ ನಿರಂಜನ ಇಂಗ್ಲಿಷ್‌ಗೆ ಭಾಷಾಂತರಿಸಿದ್ದಾರೆ.

ಎ.ಎಲ್.ಟಿ.ಎ ಭಾನುವಾರ ಈ ಮಾಹಿತಿ ಪ್ರಕಟಿಸಿದೆ. 2021ನೇ ಸಾಲಿನ ಸಾಹಿತ್ಯ ಪ್ರಶಸ್ತಿಯನ್ನು ನವೆಂಬರ್‌ನಲ್ಲಿ ನಡೆಯುವ ಸಂಸ್ಥೆಯ 44ನೇ ಅಧಿವೇಶನದಲ್ಲಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಯು ನಗದು ಪುರಸ್ಕಾರವನ್ನು ಒಳಗೊಂಡಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಸಾಹಿತಿ ಜಯಂತ ಕಾಯ್ಕಿಣಿ, 'ಪ್ರಶಸ್ತಿ ಪ್ರಕಟವಾಗಿರುವುದು ತುಂಬ ಸಂತೋಷದ ವಿಷಯ. ಕನ್ನಡ ಸಾಹಿತ್ಯದ ಭಾಷಾಂತರ ಕೃತಿಗೆ ಈ ಪ್ರಶಸ್ತಿ ಸಿಕ್ಕಿರುವುದು ನಾಡಿಗೆ ಹೆಮ್ಮೆಯ ವಿಷಯ. ಇದರಿಂದ ಇನ್ನೂ ಹೆಚ್ಚಿನ ಜನ ಈ ಪುಸ್ತಕ ಓದುವಂತಾಗುತ್ತದೆ. ಇಂಗ್ಲಿಷ್‌ಗೆ ಭಾಷಾಂತರಿಸಿದ ತೇಜಸ್ವಿನಿಯವರಿಗೆ ಅಭಿನಂದನೆ ಸಲ್ಲುತ್ತದೆ' ಎಂದು ಹೇಳಿದರು.

ನಾಲ್ವರಿಗೆ 'ಬರಗೂರು ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಿರೀಶ್ ಕಾಸರವಳ್ಳಿ, ಸಾರಾ ಅಬೂಬಕರ್, ಬಿ.ಕೆ.ಸುಮಿತ್ರ ಹಾಗೂ ಚಂದ್ರಕಾಂತ ಪೋಕಳೆ ಅವರು ಡಾ.ಬರಗೂರು ಪ್ರತಿಷ್ಠಾನ ನೀಡುವ 'ಬರಗೂರು ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.

ಪ್ರತಿಷ್ಠಾನವು ಸಿನಿಮಾ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ಮಾಡಿದ ತಲಾ ಒಬ್ಬರಿಗೆ ಪ್ರತಿವರ್ಷವೂ ಪ್ರಶಸ್ತಿ ನೀಡುತ್ತಿದೆ. ಪ್ರಶಸ್ತಿಯು ತಲಾ ₹25 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿರುತ್ತದೆ.

ಸಿನಿಮಾ ಕ್ಷೇತ್ರಕ್ಕೆ ಕೊಡುಗೆ ನೀಡಿರುವ ಕಾಸರವಳ್ಳಿ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಸಾರಾ ಅವರಿಗೆ 2020ನೇ ಸಾಲಿನ ಪ್ರಶಸ್ತಿ ದೊರೆತಿದೆ.

ಹಿನ್ನೆಲೆ ಗಾಯಕಿಯಾಗಿ ಹೆಸರು ಗಳಿಸಿರುವ ಹಾಗೂ ಸುಗಮ ಸಂಗೀತ ಕ್ಷೇತ್ರಕ್ಕೆ ಅನನ್ಯ ಕೊಡುಗೆ ನೀಡಿರುವ ಬಿ.ಕೆ.ಸುಮಿತ್ರ ಮತ್ತು ಮರಾಠಿಯಿಂದ ಕನ್ನಡಕ್ಕೆ 40ಕ್ಕೂ ಹೆಚ್ಚು ಕೃತಿಗಳನ್ನು ಅನುವಾದಿಸಿರುವ ಚಂದ್ರಕಾಂತ ಅವರಿಗೆ 2021ನೇ ಸಾಲಿನ ಪ್ರಶಸ್ತಿ ಒಲಿದಿದೆ. ಇದೇ 30ರಂದು ನಗರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.


'ಜನರನ್ನು ಎತ್ತಿಕಟ್ಟುವ ಮನಃಸ್ಥಿತಿಗೆ ಛೀಮಾರಿ'

ಕಾಪು (ಪಡುಬಿದ್ರಿ): 'ಕಾಪು ಠಾಣೆ ಪೊಲೀಸರು ಆಯುಧ ಪೂಜೆಯ ದಿನ ಒಂದೇ ರೀತಿಯ ವಸ್ತ್ರ ಧರಿಸಿರುವುದರಲ್ಲಿ ಕೋಮು ಭಾವನೆ ಕಂಡದ್ದು ಸಿದ್ದರಾಮಯ್ಯ ಅವರಿಗೆ ಮಾತ್ರ. ಕಾಪು ಕ್ಷೇತ್ರ ಸಾಮರಸ್ಯ–ಶಾಂತಿಯುತವಾಗಿದ್ದು, ಜನರನ್ನು ಎತ್ತಿಕಟ್ಟುವ ಕೀಳು ಮನಃಸ್ಥಿತಿಯ ಸಿದ್ದರಾಮಯ್ಯ ಅವರ ದುಸ್ಸಾಹಸಕ್ಕೆ ಛೀಮಾರಿ' ಎಂದು ಕಾಪು ಶಾಸಕ ಲಾಲಾಜಿ ಆರ್. ಮೆಂಡನ್ ಪ್ರತಿಕ್ರಿಯಿಸಿದ್ದಾರೆ.

'ಸಮಾಜದಲ್ಲಿ ಎರಡು ಪಂಗಡಗಳನ್ನು ಎತ್ತಿಕಟ್ಟುವುದರಲ್ಲಿ, ಒಡೆದು ಆಳುವುದರಲ್ಲಿ ಸಿದ್ದರಾಮಯ್ಯ ನಿಸ್ಸೀಮರು. ಈ ದ್ವಂದ್ವ ನೀತಿಯಿಂದ ಕಾಂಗ್ರೆಸ್ ಅಧೋಗತಿಯಲ್ಲಿದೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ನಿಧನ ವಾರ್ತೆ

ನಟ ಶಂಕರ್ ರಾವ್




ಬೆಂಗಳೂರು: ಚಂದನವನದ ನಟ, ಕಿರುತೆರೆ ಕಲಾವಿದ ಶಂಕರ್ ರಾವ್ (84) ಅವರು ಸೋಮವಾರ ನಿಧನರಾದರು. ಅವರು ಕೆಲಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದರು.

ಮೂಲತಃ ತುಮಕೂರಿನವರಾದ ಶಂಕರರಾವ್, ಬಾಲ್ಯದಲ್ಲೇ ನಟನೆಯ ಆಸಕ್ತಿ ಹೊಂದಿದ್ದರು. ತೆಲುಗು ಚಿತ್ರಗಳನ್ನು ನೋಡಿ ಸಿನಿಮಾ ಕ್ಷೇತ್ರದಲ್ಲಿ ಆಸಕ್ತಿ ಬೆಳೆಸಿಕೊಂಡರು. 1956ರಲ್ಲಿ ಬೆಂಗಳೂರಿಗೆ ಬಂದು, 'ಗೆಳೆಯರ ಬಳಗ' ಎಂಬ ರಂಗತಂಡ ಕಟ್ಟಿ, ನಾಟಕ ಪ್ರದರ್ಶನ ಮಾಡುತ್ತಿದ್ದರು. 'ನಟರಂಗ' ತಂಡದ ಜೊತೆಗೂ ಅವರು ಗುರುತಿಸಿಕೊಂಡಿದ್ದರು.

ನಾಟಕಗಳಲ್ಲಿ ಶಂಕರರಾವ್ ಅಭಿನಯ ನೋಡಿದ ನಿರ್ಮಾಪಕರೊಬ್ಬರು 'ಯಾರ ಸಾಕ್ಷಿ' ಸಿನಿಮಾದಲ್ಲಿ ಅವರಿಗೆ ಅವಕಾಶ ನೀಡಿದರು. ನಂತರ ಅವರಿಗೆ ಸಾಲು ಅವಕಾಶಗಳು ಸಿಕ್ಕಿದವು. 'ಪಾಪ ಪಾಂಡು' ಧಾರಾವಾಹಿಯ ಬಾಲ್‌ರಾಜ್, 'ಧ್ರುವ' ಹಾಗೂ 'ಅಪ್ಪು' ಚಿತ್ರಗಳ ಉಪನ್ಯಾಸಕ, 'ಬಿಸಿಬಿಸಿ' ಚಿತ್ರದಲ್ಲಿ ರಸಿಕ ಮನಸ್ಸಿನ ತಾತ... ಹೀಗೆ ಹಲವು ಪಾತ್ರಗಳು ಗಮನ ಸೆಳೆದಿದ್ದವು.

ಬನಶಂಕರಿ ಚಿತಾಗಾರದಲ್ಲಿ ಶಂಕರ್ ರಾವ್ ಅವರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಮಾಜಿ ಶಾಸಕ ಡಾ.ಎಂ.ಪಿ.ಕರ್ಕಿ



ಹೊನ್ನಾವರ (ಉತ್ತರ ಕನ್ನಡ): ಕುಮಟಾ–ಹೊನ್ನಾವರ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಡಾ.ಎಂ.ಪಿ.ಕರ್ಕಿ (86) ಅವರು ಪಟ್ಟಣದ ಸೇಂಟ್ ಇಗ್ನೇಶಿಯಸ್ ಆಸ್ಪತ್ರೆಯಲ್ಲಿ ಸೋಮವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ. ಅವರು 1983 ಹಾಗೂ 1994 ರಲ್ಲಿ ಎರಡು ಸಲ ಶಾಸಕರಾಗಿದ್ದರು. ಒಂದು ಬಾರಿ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಬಿ.ಜೆ.ಪಿ ಜಿಲ್ಲಾ ಘಟಕದ ಅಧ್ಯಕ್ಷರಾಗಿ, ಹೊನ್ನಾವರದ ಎಜುಕೇಷನ್ ಸೊಸೈಟಿ ಅಧ್ಯಕ್ಷ ಸೇರಿದಂತೆ ವಿವಿಧ ಸಂಘ, ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿದ್ದರು. ಉತ್ತರ ಕನ್ನಡದಲ್ಲಿ ಬಿ.ಜೆ.ಪಿ ಸಂಘಟನೆಗೆ ಅವರು ಶ್ರಮಿಸಿದ್ದರು.

ಅಂತ್ಯಕ್ರಿಯೆಯು ಮಂಗಳವಾರ ನಡೆಯಲಿದೆ ಎಂದು ಅವರ ಆಪ್ತರು ತಿಳಿಸಿದ್ದಾರೆ.

ನಾರಾಯಣರಾವ್ ಮಾನೆ



ಬೆಂಗಳೂರು: ಹಿಂದೂಸ್ತಾನಿ ಸಂಗೀತ ವಿದ್ವಾಂಸ ನಾರಾಯಣರಾವ್ ಮಾನೆ (92)ನಗರದಲ್ಲಿ ಸೋಮವಾರ ನಿಧನರಾದರು.

ಪ್ಯಾಲೇಸ್ ಗುಟ್ಟಹಳ್ಳಿಯಲ್ಲಿ ವಾಸವಿದ್ದ ಅವರಿಗೆ ಇಬ್ಬರು ಪುತ್ರಿಯರು ಹಾಗೂ ಮೂವರು ಪುತ್ರರಿದ್ದಾರೆ.

ಅವರು ರೇಡಿಯೊ ಹಾಗೂ ದೂರದರ್ಶನದಲ್ಲಿ ಹಲವು ಕಾರ್ಯಕ್ರಮಗಳನ್ನು ನೀಡಿದ್ದರು. ಸ್ವಾತಂತ್ರ್ಯ ಚಳವಳಿಯಲ್ಲೂ ಭಾಗವಹಿಸಿದ್ದರು. ಅವರಿಗೆ ಕರ್ನಾಟಕ ರಾಜ್ಯೋತ್ಸವ, ಸಂತ ಶಿಶುನಾಳ ಷರೀಫ ಸೇರಿದಂತೆ ಹಲವು ಪ್ರಶಸ್ತಿಗಳು ಒಲಿದಿದ್ದವು. ಡಾಕ್ಟರೇಟ್ ಗೌರವವೂ ಸಂದಿತ್ತು.

ಚಾಮರಾಜಪೇಟೆಯಲ್ಲಿರುವ ಚಿತಾಗಾರದಲ್ಲಿ ಸೋಮವಾರ ಸಂಜೆ ಮೃತರ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ಪಂಜಾಬ್, ಹರಿಯಾಣ, ರಾಜಸ್ಥಾನ, ಉತ್ತರ ಪ್ರದೇಶದಲ್ಲಿ ರೈಲು ತಡೆ: 60 ರೈಲುಗಳ ಸಂಚಾರ ವ್ಯತ್ಯಯ

ರೈಲು ಹಳಿಗಳ ಮೇಲೆ ರೈತರ ಧರಣಿ

ನವದೆಹಲಿ/ಚಂಡಿಗಡ/ಜೈಪುರ (ಪಿಟಿಐ): ಲಖಿಂಪುರ-ಖೇರಿ ಹಿಂಸಾಚಾರ ಖಂಡಿಸಿ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಕರೆ ನೀಡಿದ್ದ ಆರು ಗಂಟೆಗಳ 'ರೈಲುತಡೆ' ಚಳವಳಿ ಅಂಗವಾಗಿ ಪಂಜಾಬ್, ಹರಿಯಾಣ, ರಾಜಸ್ಥಾನ ಮತ್ತು ಉತ್ತರ ಪ್ರದೇಶದ ಹಲವು ಕಡೆಗಳಲ್ಲಿ ರೈತರು ರೈಲು ಹಳಿಗಳ ಮೇಲೆ ಕುಳಿತು ಸೋಮವಾರ ಪ್ರತಿಭಟನೆ ನಡೆಸಿದರು.

ಉತ್ತರ ರೈಲ್ವೆ ವಲಯದ 150 ಸ್ಥಳಗಳಲ್ಲಿ ಪ್ರತಿಭಟನೆ ಪರಿಣಾಮ ಬೀರಿತು. ಸುಮಾರು 60 ರೈಲುಗಳ ಓಡಾಟಕ್ಕೆ ಅಡ್ಡಿಯುಂಟಾಯಿತು. ವಾಯುವ್ಯ ರೈಲ್ವೆ ವಲಯಕ್ಕೆ ಸೇರುವ ರಾಜಸ್ಥಾನ ಮತ್ತು ಹರಿಯಾಣದ ಕೆಲವು ವಿಭಾಗಗಳಲ್ಲಿ ರೈಲು ಸಂಚಾರದ ಮೇಲೆ ಪರಿಣಾಮ ಉಂಟಾಯಿತು. 18 ರೈಲುಗಳನ್ನು ರದ್ದುಪಡಿಸಲಾಯಿತು. 10 ರೈಲುಗಳ ಮಾರ್ಗ ಬದಲಿಸಲಾಯಿತು.

ಪಂಜಾಬ್‌ನ ಲುಧಿಯಾನ, ಅಮೃತಸರ, ಜಲಂಧರ್, ಮೊಗಾ, ಪಟಿಯಾಲ ಮತ್ತು ಫಿರೋಜ್‌ಪುರ ಮತ್ತು ಹರಿಯಾಣದ ಚಾರ್ಖಿ ದಾದ್ರಿ, ಸೋನಿಪತ್, ಕುರುಕ್ಷೇತ್ರ, ಜಿಂದ್, ಕರ್ನಾಲ್ ಮತ್ತು ಹಿಸಾರ್‌ನಲ್ಲಿ ರೈತರು ಪ್ರತಿಭಟನೆ ನಡೆಸಿದರು.

ಉತ್ತರ ಪ್ರದೇಶದ ಮುಜಾಫ್ಫರ್ ನಗರದಲ್ಲಿ ಭಾರತೀಯ ಕಿಸಾನ್ ಯೂನಿಯನ್ ಕಾರ್ಯಕರ್ತರು ಅಮೃತಸರ-ದೆಹಲಿ ಮತ್ತು ಜಲಂಧರ್ ಎಕ್ಸ್‌ಪ್ರೆಸ್ ರೈಲುಗಳನ್ನು ತಡೆದರು. ಮೀರಠ್ ಮತ್ತು ಗ್ರೇಟರ್ ನೋಯ್ಡಾದ ಡಂಕೌರ್ ನಿಲ್ದಾಣಗಳಲ್ಲಿ ರೈಲುಗಳಿಗೆ ತಡೆ ಒಡ್ಡಲಾಯಿತು. ಗಾಜಿಯಾಬಾದ್‌ನ ಮೋದಿನಗರದಲ್ಲಿ ಸರಕು ಸಾಗಾಟ ರೈಲಿನ ಮುಂದೆ ಪ್ರತಿಭಟನೆ ನಡೆಸಲಾಯಿತು.

ನವದೆಹಲಿ-ಅಮೃತಸರ ಶತಾಬ್ದಿ ಎಕ್ಸ್‌ಪ್ರೆಸ್ ಅನ್ನು ಶಂಭು ನಿಲ್ದಾಣದ ಬಳಿ ತಡೆಯಲಾಯಿತು. ಕಡಿಮೆ ಜನಸಂಚಾರ ಮತ್ತು ಅಲ್ಪ-ದೂರದ 25 ರೈಲುಗಳನ್ನು ರದ್ದುಗೊಳಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಹೇಳಿದರು.

ಮಹಿಳೆಯರು ಸೇರಿದಂತೆ ಪ್ರತಿಭಟನಿರತ ರೈತರು ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಕೇಂದ್ರ ಸಚಿವ ಅಜಯ್ ಮಿಶ್ರಾ ಅವರನ್ನು ಬಂಧಿಸುವಂತೆ ಒತ್ತಾಯಿಸಿದರು. ಪ್ರತಿಭಟನೆಯ ಕಾರಣದಿಂದ ರೈಲು ನಿಲ್ದಾಣಗಳಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿತ್ತು.

ರಾಜಸ್ಥಾನದಲ್ಲಿ ರೈತರು ಹನುಮಾನಗಡ ಜಿಲ್ಲೆಯಲ್ಲಿ ರೈಲ್ವೆ ಹಳಿಗಳ ಮೇಲೆ ಕುಳಿತು ಪ್ರತಿಭಟನೆ ನಡೆಸಿ, ಕೇಂದ್ರ ಮತ್ತು ಉತ್ತರ ಪ್ರದೇಶ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದರು. ಸಂಯುಕ್ತ ಕಿಸಾನ್ ಮೋರ್ಚಾದ ಸದಸ್ಯರು ಜೈಪುರ ಜಂಕ್ಷನ್ ನಿಲ್ದಾಣ ಪ್ರವೇಶದ್ವಾರದಲ್ಲಿ ಪ್ರತಿಭಟನೆ ನಡೆಸಿದರು. ಬಿಕಾನೇರ್ ವಿಭಾಗದ ಶ್ರೀಗಂಗಾನಗರದಲ್ಲಿ ಧರಣಿ ನಡೆಯಿತು.



ಅಮೃತಸರ ರೈಲು ನಿಲ್ದಾಣದ ಹಳಿಗಳ ಮೇಲೆ ರೈತ ಸಂಘಟನೆಗಳ ಸದಸ್ಯರು ಸೋಮವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಲಖಿಂಪುರದಲ್ಲಿ ಪ್ರತಿಭಟನೆ ಇಲ್ಲ

ಹಿಂಸಾಚಾರಕ್ಕೆ ಕಾರಣವಾಗಿದ್ದ ಲಖಿಂಪುರ-ಖೇರಿಯಲ್ಲಿ ಯಾವುದೇ ಪ್ರತಿಭಟನೆ ನಡೆಯಲಿಲ್ಲ. ರೈಲ್ವೆ ಇಲಾಖೆಯು ರೈಲು ಸೇವೆಯನ್ನು ಸ್ಥಗಿತಗೊಳಿಸಿತ್ತು. ಹೀಗಾಗಿ ಇಲ್ಲಿ ರೈಲು ತಡೆ ಕಾರ್ಯಕ್ರಮವನ್ನು ರೈತ ಸಂಘ ವಾಪಸ್ ಪಡೆಯಿತು. ಸ್ಥಳೀಯ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು, ಜಿಲ್ಲೆಯಲ್ಲಿ ರೈಲು ತಡೆ ಕಾರ್ಯಕ್ರಮ ಹಿಂಪಡೆದಿದ್ದೇವೆ ಎಂದು ಖೇರಿಯ ಜಿಲ್ಲಾ ಅಧ್ಯಕ್ಷ ಅಮನ್‌ದೀಪ್ ಸಿಂಗ್ ಸಂಧು ತಿಳಿಸಿದ್ದಾರೆ.

'ಅಕಾಲಿಕ ಮಳೆ ಮತ್ತು ಭಾರಿ ಗಾಳಿಯಿಂದಾಗಿ ಜಿಲ್ಲೆಯಲ್ಲಿ ಭತ್ತದ ಬೆಳೆಗೆ ಹಾನಿಯಾಗಿದೆ. ಹೀಗಾಗಿ ರೈತರು ಫಸಲು ನಿರ್ವಹಣೆಯಲ್ಲಿ ನಿರತರಾಗಿದ್ದಾರೆ. ರೈಲ್ವೆ ಇಲಾಖೆ ಕೂಡ ಜಿಲ್ಲೆಯಲ್ಲಿ ರೈಲುಗಳ ಸಂಚಾರವನ್ನು ಸ್ಥಗಿತಗೊಳಿಸಿದೆ. ಆದ್ದರಿಂದ ಆಂದೋಲನ ನಡೆಸಿ ಯಾವುದೇ ಪ್ರಯೋಜನವಿಲ್ಲ' ಎಂದು ಅವರು ಹೇಳಿದ್ದಾರೆ.

ಪ್ರತಿಭಟನೆಯ ಅರಿವಿಲ್ಲದೆ ಲುಧಿಯಾನ ನಿಲ್ದಾಣಕ್ಕೆ ಬಂದಿದ್ದ ವ್ಯಕ್ತಿಯೊಬ್ಬರು ಪ್ರತಿಭಟನಾನಿರತರೊಂದಿಗೆ ಚರ್ಚಿಸುತ್ತಿದ್ದರು. 'ರಾಜಕಾರಣಿಗಳ ಮೇಲಿನ ಸಿಟ್ಟಿಗೆ ಸಾಮಾನ್ಯ ಜನರಿಗೆ ಏಕೆ ತೊಂದರೆ ನೀಡುತ್ತೀರಿ' ಎಂದು ಪ್ರಶ್ನಿಸಿದರು. ರೈಲು ನಿಲುಗಡೆ ಮಾಡಿದ್ದರಿಂದ, ಪಟಿಯಾಲ ನಿಲ್ದಾಣದಲ್ಲಿ ದಿನೇಶ್ ಜೋಶಿ ಎಂಬ ಪ್ರಯಾಣಿಕರು ತಮ್ಮ ಮಗುವಿಗೆ ಹಾಲು ಮತ್ತು ಬಿಸಿ ನೀರಿಗಾಗಿ ಅಲೆದಾಡಬೇಕಾಯಿತು.

ಮೊಗಾ ಎಂಬಲ್ಲಿ ಪ್ರತಿಭಟನಾಕಾರರು 'ಜೈ ಜವಾನ್ ಜೈ ಕಿಸಾನ್' ಘೋಷಣೆ ಕೂಗಿದರು. ಲಖಿಂಪುರ ಹಿಂಸಾಚಾರದಲ್ಲಿ ಮೃತಪಟ್ಟ ನಾಲ್ವರು ರೈತರ ಚಿತ್ರಗಳನ್ನು ಇರಿಸಿ ಪ್ರತಿಭಟನೆ ನಡೆಸಿದರು.

ಒಡಿಶಾದ ಈಸ್ಟ್ ಕೋಸ್ಟ್ ರೈಲ್ವೆ ವಿಭಾಗದಲ್ಲಿ ಸೋಮವಾರ ನಡೆದ ಪ್ರತಿಭಟನೆಯಿಂದ ರೈಲುಸೇವೆ 30 ನಿಮಿಷದಿಂದ ಒಂದು ಗಂಟೆಯವರೆಗೆ ವ್ಯತ್ಯಯವಾಯಿತು. ರೈಲು ತಡೆಗೆ ಕಾಂಗ್ರೆಸ್, ಎಎಪಿ ಹಾಗೂ ಎಡಪಕ್ಷಗಳು ಬೆಂಬಲ ಸೂಚಿಸಿದ್ದವು.

ರೈಲು ತಡೆ ಪ್ರತಿಭಟನೆಯಿಂದ ದೆಹಲಿಯಲ್ಲಿ ಯಾವುದೇ ತೊಂದರೆಯಾಗಿಲ್ಲ ಎಂದು ದೆಹಲಿ ಪೊಲೀಸರು ಹೇಳಿದ್ದಾರೆ. ಕೆಲವೆಡೆ ರೈಲು ಹಳಿಗಳಲ್ಲಿ ಪ್ರತಿಭಟನೆಗಳನ್ನು ಹೊರತುಪಡಿಸಿದರೆ, ರೈಲು ತಡೆ ಚಳವಳಿಯಿಂದ ಉತ್ತರ ಪ್ರದೇಶದಲ್ಲಿ ಭಾರಿ ತೊಂದರೆ ಉಂಟಾಗಿಲ್ಲ. ರಾಜ್ಯದ ಕೆಲವೆಡೆ ರೈತರು ಸಂಕ್ಷಿಪ್ತವಾಗಿ ಪ್ರತಿಭಟನೆ ನಡೆಸಿದರು. ರೈಲು ನಿಲ್ದಾಣಗಳಲ್ಲಿ ಮತ್ತು ಸುತ್ತಮುತ್ತ ಭಾರಿ ಪೊಲೀಸ್ ನಿಯೋಜನೆ ಮಾಡಲಾಗಿತ್ತು.





ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್*	124.80	119.50	14,061	5,157
ಹಾರಂಗಿ	2,859	2,858.26	1,360	1,249
ಕಬಿನಿ	2284.00	2,281.41	7,400	2,000
ಹೇಮಾವತಿ	2,922	2,911.21	3,406	4,243
ಲಿಂಗನಮಕ್ಕಿ	1,819	1,815.45	3,478	-
ಸೂಪಾ (ಮೀ)	564	556.91	811	3,929
ಮಾಣಿ	594	587.34	578	-
ತುಂಗಭದ್ರಾ	1,633	1,632.99	16,519	16,159
ಮಲಪ್ರಭಾ	2079.5	2,079.50	1,094	1,094
ಘಟಪ್ರಭಾ	2175	2,175	2,510	2,510
ಭದ್ರಾ	186	186	3,453	3,453
ಆಲಮಟ್ಟಿ (ಮೀ)	519.6	519.60	13,481	13,481
ನಾರಾಯಣಪುರ (ಮೀ)	492.25	492.22	11,500	15,500

* ನೆಲಮಟ್ಟದಿಂದ

ಶಿಕ್ಷಣ ಬಿಟ್ಟು ಭಿಕ್ಷೆ ಬೇಡಿದ ಮೋದಿ ಪ್ರಧಾನಿ ವಿರುದ್ಧ ಕೆಪಿಸಿಸಿ ವಾಗ್ದಾಳಿ

ಬೆಂಗಳೂರು: 'ಶಿಕ್ಷಣ ಬಿಟ್ಟು ಭಿಕ್ಷೆ ಬೇಡಿದವನಿಗೆ ಆರ್ಥಿಕತೆಯ ಗಂಧ-ಗಾಳಿಯೇ ಗೊತ್ತಿಲ್ಲ. ಅತ್ಯಾಚಾರಿ ಬಾಬಾಗಳು, ಡ್ರಗ್ಸ್ ದಂಧೆಕೋರರು, ವಂಚಕರ ಜತೆ ಮೋದಿ ನಂಟಿದೆ' ಎಂದು ಕೆಪಿಸಿಸಿ ಟ್ವೀಟ್ ಮಾಡಿದೆ.

ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಏಕ ವಚನದಲ್ಲಿ ನಿಂದಿಸಿರುವ ಕಾಂಗ್ರೆಸ್, 'ಹೆಬ್ಬೆಟ್ ಗಿರಾಕಿ' ಎಂದೂ ಕಟಕಿಯಾಡಿದೆ.

'ಬಟ್ಟೆ ಶೋಕಿ, ಬಿಟ್ಟಿ ಪ್ರಚಾರ, ಸುಳ್ಳು ಭಾಷಣಗಳೇ ಬಂಡವಾಳ. ಬಾಬಾಗಳು, ಡ್ರಗ್ಸ್ ಧಂಧೆಕೋರರು, ವಂಚಕರ ಹಗರಣದಿಂದ ಹೆಬ್ಬೆಟ್ ಗಿರಾಕಿ ಮೋದಿಯ ಪಾಲೆಷ್ಟು ಎಂದು ಪ್ರಶ್ನಿಸಿದೆ. ಅದಾನಿ ಪೋರ್ಟ್‌ನಲ್ಲಿ ಡ್ರಗ್ಸ್ ಪ್ರಕರಣದಲ್ಲಿ ಮೋದಿಗೆ ಸಿಕ್ಕ ಕಿಕ್ ಬ್ಯಾಕ್ ಎಷ್ಟು' ಎಂದೂ ಪ್ರಶ್ನಿಸಿದೆ.

'ಟೆಲಿಪ್ರಾಂಪ್ಟರ್ ಇಲ್ಲದೆ ಮಾತೇ ಹೊರಡುವುದಿಲ್ಲ. ವಿದೇಶಾಂಗ ವ್ಯವಹಾರಗಳಲ್ಲಿ ಭಾಷಾಂತರಕಾರರಿಲ್ಲದೇ ಆಟವೇ ನಡೆಯುವುದಿಲ್ಲ' ಎಂದು ಹೇಳಿದೆ.

ಬುದ್ಧಿಯೇ ಬೆಳೆಯದ ಯುವ ನಾಯಕ: ಇದಕ್ಕೆ ತಿರುಗೇಟು ನೀಡಿರುವ ಬಿಜೆಪಿ, 'ದೇಶದಲ್ಲಿ ಸಾಕಷ್ಟು ಶಾಲೆಗಳಿದ್ದರೂ 50 ವರ್ಷ ದಾಟಿದ ಅತಿ ಹಿರಿಯ ಯುವ ನಾಯಕ ಭಾರತದಲ್ಲಿ ಓದಲೇ ಇಲ್ಲ, ವಯಸ್ಕರ ಶಿಕ್ಷಣ ಇದ್ದರೂ ಪಪ್ಪುವಿನ ಬುದ್ಧಿ ಬೆಳೆಯಲೇ ಇಲ್ಲ' ಎಂದು ಬಿಜೆಪಿ ವ್ಯಂಗ್ಯ ಮಾಡಿದೆ. 'ತಾತ, ಮುತ್ತಾತ, ಅಪ್ಪ ಪ್ರಧಾನಿ ಆಗಿದ್ದಾರೆ ಎಂಬ ಒಂದೇ ಅರ್ಹತೆಯ ಆಧಾರದ ಮೇಲೆ ತಾನು ಪ್ರಧಾನಿಯಾಗುತ್ತೇನೆ ಎಂದು ಭಿಕ್ಷುಕನಂತೆ ಅಲೆಯುತ್ತಿದ್ದಾನೆ' ಎಂದು ಬಿಜೆಪಿ ಟ್ವೀಟ್ ಮಾಡಿದೆ.

'ನನ್ನ ಆಸ್ತಿ ಇದ್ದಷ್ಟೇ ಇದೆ'

'ನನ್ನ ಆಸ್ತಿ ಎಷ್ಟಿತ್ತೋ ಅಷ್ಟೇ ಇದೆ. ಲೋಕಾಯುಕ್ತಕ್ಕೆ ದೂರು ಕೊಟ್ಟವರಿಗೆ ಅದರ ದಾಖಲೆ ಸಿಕ್ಕಿರಬಹುದು. 800 ಪಟ್ಟು ಆಸ್ತಿ ಏರಿಕೆ ಆಗಿದ್ದು ಯಾರದ್ದು ಎಂಬುದು ಕಾಂಗ್ರೆಸ್‌ನವರಿಗೆ ಗೊತ್ತಿರಬಹುದಲ್ಲವೇ? ತಾನು ಕಳ್ಳ, ಪರರ ನಂಬದ ಕಳ್ಳ ಕಾಂಗ್ರೆಸ್' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು ಕಾಂಗ್ರೆಸ್ ತಮ್ಮ ವಿರುದ್ಧ ಮಾಡಿರುವ ಟೀಕೆಗೆ ಪ್ರತಿಕ್ರಿಯಿಸಿದ್ದಾರೆ.

'ಕೋತಿ ತಾನು ಬೆಣ್ಣೆ ತಿಂದು ಮೇಕೆ ಮೂತಿಗೆ ಹಚ್ಚಿದಂತೆ ವಿ.ಎಸ್.ಉಗ್ರಪ್ಪ ಮಾಧ್ಯಮಗಳಲ್ಲಿ ಬಹಿರಂಗ ಮಾಡಿದ ಆ ಪಕ್ಷದ ಅಧ್ಯಕ್ಷರ ಸತ್ಯ ವಿಶ್ವವಿಖ್ಯಾತ ಆಗುತ್ತಿದ್ದಂತೆ ಬಿಜೆಪಿ ನಾಯಕರ ತಲೆಗೆ ಕಟ್ಟಲು ಮುಂದಾದರು. ಕಮಿಷನ್ ಗಿರಾಕಿಗಳ ಸತ್ಯ ಹೊರಬರುತ್ತಿದ್ದಂತೆ ಬಿಜೆಪಿ ವಿರುದ್ಧ ಟ್ವೀಟ್ ಮಾಡಿ ವಿಷಯಾಂತರ ಮಾಡುತ್ತಿರುವುದು ನಾಚಿಕೆಗೇಡು' ಎಂದು ರವಿ ಟ್ವೀಟ್ ಮಾಡಿದ್ದಾರೆ.

ದಕ್ಷಿಣ ಭಾರತದಲ್ಲಿ ತೀವ್ರ ಮಳೆ ಸಾಧ್ಯತೆ: ಹವಾಮಾನ ಇಲಾಖೆ ಮುನ್ಸೂಚನೆ

ಬುಧವಾರದ ಬಳಿಕ ಮತ್ತೆ ಮಳೆ

ನವದೆಹಲಿ: ದಕ್ಷಿಣ ಭಾರತದಲ್ಲಿ ಸೋಮವಾರ ಮತ್ತು ಮಂಗಳವಾರ ಮಳೆ ಬಿಡುವು ನೀಡಲಿದ್ದು, ಬುಧವಾರದ ನಂತರ ಎರಡು ದಿನ ಮತ್ತೆ ತೀವ್ರ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತದ ಪರಿಣಾಮ, ಈಶಾನ್ಯ ಭಾರತ ಮತ್ತು ಮಧ್ಯ ಭಾರತದ ರಾಜ್ಯಗಳಲ್ಲಿ ಸೋಮವಾರ ಮತ್ತು ಮಂಗಳವಾರ ಭಾರಿ ಮಳೆಯಾಗಲಿದೆ. ಆದರೆ, ಬುಧವಾರದ ನಂತರ ದಕ್ಷಿಣ ಭಾರತದ ರಾಜ್ಯಗಳಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಬುಧವಾರ ಕರ್ನಾಟಕದ ಕರಾವಳಿ ಮತ್ತು ದಕ್ಷಿಣ ಒಳನಾಡು, ಕೇರಳ, ತಮಿಳುನಾಡು ಮತ್ತು ಆಂಧ್ರಪ್ರದೇಶದ ದಕ್ಷಿಣದ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ. ಗುರುವಾರವೂ ಭಾರಿ ಮಳೆ ಮುಂದುವರಿಯಲಿದ್ದು, ಮಧ್ಯ ಕರ್ನಾಟಕಕ್ಕೂ ಮಳೆ ವಿಸ್ತರಿಸಲಿದೆ. ಶುಕ್ರವಾರ ಈ ಎಲ್ಲಾ ಪ್ರದೇಶಗಳಲ್ಲಿ ಮಳೆ ಮತ್ತಷ್ಟು ಬಿರುಸು ಪಡೆಯಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಉತ್ತರಾಖಂಡ, ಬಿಹಾರ, ಅಸ್ಸಾಂ, ಅರುಣಾಚಲ ಪ್ರದೇಶ, ಸಿಕ್ಕಿಂ, ಮೇಘಾಲಯಗಳಲ್ಲಿ ಮಂಗಳವಾರ ಮತ್ತು ಬುಧವಾರಕ್ಕೆ ಅನ್ವಯವಾಗುವಂತೆ ಎಲ್ಲೋ ಅಲರ್ಟ್ ಘೋಷಿಸಲಾಗಿದೆ. ಗುರುವಾರದ ನಂತರ ಈ ಪ್ರದೇಶಗಳಲ್ಲಿ ಮಳೆಯ ತೀವ್ರತೆ ಕಡಿಮೆಯಾಗಲಿದೆ.



ಅಲಪ್ಪುಳ ಜಿಲ್ಲೆಯಲ್ಲಿ ಸೋಮವಾರ ಮದುವೆಯಾಗಬೇಕಿದ್ದ ವಧು ಐಶ್ವರ್ಯ ಮತ್ತು ವರ ಆಕಾಶ್ ಅವರು ಮದುವೆ ಮಂಟಪಕ್ಕೆ ದೊಡ್ಡ ಕಡಾಯಿಯಲ್ಲಿ ತೆರಳಿದರು —ಪಿಟಿಐ ಚಿತ್ರ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಚಾರ್ ಧಾಮ್ ಯಾತ್ರೆ ಸ್ಥಗಿತ

ಉತ್ತರಾಖಂಡದಲ್ಲಿ ಸೋಮವಾರ ಭಾರಿ ಮಳೆಯಾಗಿದ್ದು, ಹಲವೆಡೆ ಭೂಕುಸಿತ ಸಂಭವಿಸಿದೆ. ಮಳೆ ಸಂಬಂಧಿ ಅವಘಡಗಳಲ್ಲಿ ಮೂವರು ಮೃತಪಟ್ಟಿದ್ದಾರೆ. ಮಳೆ ತೀವ್ರವಾಗಿರುವ ಕಾರಣ ಚಾರ್ ಧಾಮ್ ಯಾತ್ರೆಯನ್ನು ಸ್ಥಗಿತಗೊಳಿಸಲಾಗಿದೆ.

ಯಾತ್ರೆ ಕೈಗೊಂಡಿರುವ ಭಕ್ತಾದಿಗಳನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರ ಮಾಡಲಾಗಿದೆ. ಇನ್ನೂ ಮೂರು ದಿನ ತೀವ್ರ ಮಳೆಯಾಗಲಿದೆ. ವಾತಾವರಣ ತಿಳಿಯಾದ ನಂತರ ಯಾತ್ರೆಯನ್ನು ಪುನರಾರಂಭಿಸಲಾಗುತ್ತದೆ ಎಂದು ರಾಜ್ಯ ಸರ್ಕಾರವು ಹೇಳಿದೆ. ಚುನಾವಣಾ ಪ್ರಚಾರ ರದ್ದು: ಮಧ್ಯಪ್ರದೇಶದಲ್ಲಿ ಸೋಮವಾರ ಭಾರಿ ಮಳೆಯಾಗಿದ್ದು, ಖಾಂಡ್ವಾ ಲೋಕಸಭಾ ಕ್ಷೇತ್ರದ ಉಪಚುನಾವಣೆಯ ಪ್ರಚಾರಕ್ಕೆ ತಡೆಯಾಗಿದೆ.

ಮತ್ತೊಂದು ಶವ, ಕಾಲು ಪತ್ತೆ

ಇಡುಕ್ಕಿ ಜಿಲ್ಲೆಯ ಕೊಕ್ಕಾಯರ್‌ನಲ್ಲಿ ಭೂಕುಸಿತದಲ್ಲಿ ಸಿಲುಕಿದವರ ರಕ್ಷಣಾ ಕಾರ್ಯ ಸೋಮವಾರವೂ ಮುಂದುವರಿದಿತ್ತು. ಕಾರ್ಯಾಚರಣೆ ವೇಳೆ 12 ವರ್ಷದ ಬಾಲಕನೊಬ್ಬನ ಶವ ಪತ್ತೆಯಾಯಿತು. ಶವದ ಕೆಲವು ಭಾಗಗಳು ಪತ್ತೆಯಾಗಿಲ್ಲ.

ಬಾಲಕನ ಶವಕ್ಕೆ ಸಮೀಪವೇ ಒಂದು ಕಾಲು ಪತ್ತೆಯಾಗಿದ್ದು, ಅದು ವಯಸ್ಕ ವ್ಯಕ್ತಿಯೊಬ್ಬರ ಕಾಲು ಎಂದು ವೈದ್ಯರು ಹೇಳಿದ್ದಾರೆ. ಆದರೆ ಅದು ಈವರೆಗೆ ಪತ್ತೆಯಾದ ಯಾವ ಶವಕ್ಕೂ ಹೊಂದಿಕೆಯಾಗುತ್ತಿಲ್ಲ. . ಇದಕ್ಕಾಗಿ ಡಿಎನ್‌ಎ ಪರೀಕ್ಷೆ ನಡೆಸಲಾಗುತ್ತದೆ ಎಂದು ರಕ್ಷಣಾ ಸಿಬ್ಬಂದಿ ಹೇಳಿದ್ದಾರೆ.

ಇದೇ 21 ರಿಂದ ಹಿಂಗಾರು ಸಾಧ್ಯತೆ

ಬೆಂಗಳೂರು: 'ರಾಜ್ಯದಲ್ಲಿ ನೈರುತ್ಯ ಮುಂಗಾರಿನ ಅಬ್ಬರ ಕಡಿಮೆಯಾಗಿದ್ದು, ಅ.21 ರಿಂದ ರಾಜ್ಯಕ್ಕೆ ಹಿಂಗಾರು ಪ್ರವೇಶಿಸುವ ಸಾಧ್ಯತೆಗಳಿವೆ' ಎಂದು ಹವಾಮಾನ ಇಲಾಖೆಯ ಬೆಂಗಳೂರು ವಿಭಾಗದ ಉಸ್ತುವಾರಿ ನಿರ್ದೇಶಕಿ ಗೀತಾ ಅಗ್ನಿಹೋತ್ರಿ ತಿಳಿಸಿದರು.

'ಮುಂಗಾರು ಚುರುಕುಗೊಂಡಿದ್ದರಿಂದ ರಾಜ್ಯದಲ್ಲಿ ಒಂದು ವಾರದಿಂದ ಬಿಡದೇ ಮಳೆ ಬಂದಿತ್ತು. ಸದ್ಯ ಮುಂದಿನ ಎರಡು ದಿನಗಳವರೆಗೆ ರಾಜ್ಯದಲ್ಲಿ ಮಳೆಯಾಗುವ ಸಂಭವ ಕಡಿಮೆ. ಅ.21 ರಿಂದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಭಾಗಗಳಲ್ಲಿ ಮತ್ತೆ ಮಳೆ ಪ್ರಮಾಣ ಹೆಚ್ಚಲಿದ್ದು, ಹಿಂಗಾರು ಮಳೆ ಪ್ರವೇಶದ ಲಕ್ಷಣಗಳು ಕಂಡುಬಂದಿವೆ' ಎಂದರು.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಾಮರಾಜನಗರ, ಹಾಸನ, ಕೊಡಗು, ಕೋಲಾರ, ಮಂಡ್ಯ, ರಾಮನಗರ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ ಮಳೆಯಾಗುವ ಸಾಧ್ಯತೆ ಇರುವುದರಿಂದ ಅ.21 ಹಾಗೂ 22 ರಂದು 'ಯೆಲ್ಲೊ ಅಲರ್ಟ್' ಘೋಷಿಸಿರುವುದಾಗಿ ಹವಾಮಾನ ಇಲಾಖೆ ತಿಳಿಸಿದೆ.

ಮಳೆ-ಎಲ್ಲಿ, ಎಷ್ಟು?: ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ ಸೋಮವಾರ 5 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಕಾರ್ಕಳ, ಅಂಕೋಲಾ, ಚಿಕ್ಕಮಗಳೂರು, ಹರಪನಹಳ್ಳಿ, ತಿಪಟೂರು, ಕುಣಿಗಲ್‌ನಲ್ಲಿ ತಲಾ 1 ಸೆಂ. ಮೀ ಮಳೆಯಾಗಿದೆ.

ಪ್ರಧಾನಿ 'ಹೆಬ್ಬೆಟ್ ಗಿರಾಕಿ' ಟೀಕೆಗೆ ಯಡಿಯೂರಪ್ಪ ತಿರುಗೇಟು

ಕಾಂಗ್ರೆಸ್ ದೇಶದ ಜನರ ಕ್ಷಮೆ ಕೇಳಬೇಕು

ಚಿತ್ರದುರ್ಗ: 'ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವವನ್ನು ಇಡೀ ವಿಶ್ವವೇ ಒಪ್ಪಿಕೊಂಡಿದೆ. ಅಂತಹ ನಾಯಕರ ಬಗ್ಗೆ ಕಾಂಗ್ರೆಸ್ ಬಳಕೆ ಮಾಡಿದ ಶಬ್ದಗಳು ಆ ಪಕ್ಷದ ಯೋಗ್ಯತೆಯನ್ನು ತೋರಿಸುತ್ತದೆ.



ಅವಹೇಳನಕಾರಿ ಪದ ಬಳಕೆ ಮಾಡಿದ ಕಾಂಗ್ರೆಸ್ ದೇಶದ ಜನರ ಕ್ಷಮೆ ಕೇಳಬೇಕು' ಎಂದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಒತ್ತಾಯಿಸಿದರು.

'ಹೆಬ್ಬೆಟ್ ಗಿರಾಕಿ ಮೋದಿ' ಎಂಬ ಕೆಪಿಸಿಸಿ ಟ್ವೀಟ್‌ಗೆ ಪ್ರತಿಕ್ರಿಯೆ ನೀಡಿದ ಅವರು, 'ಹಗುರವಾಗಿ ಮಾತನಾಡುತ್ತ ಕಾಂಗ್ರೆಸ್ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ದೇಶದಲ್ಲಿ ಮುಳುಗುತ್ತಿರುವ ಹಡಗಿನಂತೆ ಕಾಣುತ್ತಿರುವ ಕಾಂಗ್ರೆಸ್ ಕರ್ನಾಟಕದಲ್ಲಿ ಮಾತ್ರ ಚೂರು ಉಳಿದುಕೊಂಡಿದೆ. ಇನ್ನು ಮುಂದೆ ಈ ಅಸ್ತಿತ್ವವೂ ಇರುವುದಿಲ್ಲ' ಎಂದರು.

'ಕಾಂಗ್ರೆಸ್ ಪಕ್ಷದ ಆಂತರಿಕ ಕಚ್ಚಾಟ ತಾರಕಕ್ಕೆ ಏರಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ನಡುವೆ ತಿಕ್ಕಾಟ ಶುರುವಾಗಿದೆ. ಈ ಸ್ಥಿತಿಯ ಪ್ರಯೋಜನ ಪಡೆಯಲು ಬಿಜೆಪಿ ಇಷ್ಟಪಡುವುದಿಲ್ಲ. ಟೀಕೆಯ ಮೂಲಕ ಚುನಾವಣೆ ಎದುರಿಸುವ ಮನಃಸ್ಥಿತಿ ಬಿಜೆಪಿಗೆ ಇಲ್ಲ. ಸರ್ಕಾರದ ಸಾಧನೆಯನ್ನು ಮತದಾರರ ಮುಂದಿಡುತ್ತೇವೆ' ಎಂದರು.

'ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆಯಾಗಿರುವ ಪರಿಣಾಮ ಇಂಧನ ಬೆಲೆಯಲ್ಲಿ ವ್ಯತ್ಯಾಸವಾಗಿದೆ. ಇದು ದೇಶದ ಜನರಿಗೂ ಗೊತ್ತಿದೆ. ಇಂಧನ ಬೆಲೆ ಏರಿಕೆಯು ಉಪಚುನಾವಣೆಯ ಮೇಲೆ ಪರಿಣಾಮ ಬೀರುವುದಿಲ್ಲ. ರಾಜ್ಯ ಸರ್ಕಾರದ ಸಾಧನೆ ಹಾಗೂ ಪ್ರಧಾನಿ ಮೋದಿ ಅವರ ಕಾರ್ಯವನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸುತ್ತೇವೆ' ಎಂದರು.

'ರಾಜ್ಯ ಪ್ರವಾಸ ಕೈಬಿಟ್ಟಿಲ್ಲ'

ಪಕ್ಷ ಸಂಘಟನೆಗಾಗಿ ಹಮ್ಮಿಕೊಂಡ ರಾಜ್ಯ ಪ್ರವಾಸವನ್ನು ಕೈಬಿಟ್ಟಿಲ್ಲ. ಉಪಚುನಾವಣೆಯ ಪ್ರಚಾರದ ಬಳಿಕ ಇದು ಆರಂಭವಾಗಲಿದೆ ಎಂದು ಬಿ.ಎಸ್.ಯಡಿಯೂರಪ್ಪ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

'ಹಾನಗಲ್ ಹಾಗೂ ಸಿಂದಗಿ ಉಪಚುನಾವಣೆಯ ಪ್ರಚಾರಕ್ಕೆ ಅ.20ರಿಂದ ತೆರಳುತ್ತೇನೆ. ಎರಡೂ ಕ್ಷೇತ್ರಗಳಲ್ಲಿ ಅತಿ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸುವ ವಿಶ್ವಾಸವಿದೆ' ಎಂದು ಹೇಳಿದರು.

'ತಿಪ್ಪಾರೆಡ್ಡಿಗೆ ಸಚಿವ ಸ್ಥಾನ'

'ಚಿತ್ರದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ಆರು ಬಾರಿ ಗೆಲುವು ಸಾಧಿಸಿದ ಶಾಸಕ ಜಿ.ಎಚ್.ತಿಪ್ಪಾರೆಡ್ಡಿ ಅವರಿಗೆ ಸಚಿವ ಸಂಪುಟದಲ್ಲಿ ಅವಕಾಶ ಕಲ್ಪಿಸದೇ ತಪ್ಪಾಗಿದೆ' ಎಂದು ಬಿ.ಎಸ್.ಯಡಿಯೂರಪ್ಪ ಹೇಳಿದರು.

'ಮುಂದಿನ ಸಚಿವ ಸಂಪುಟ ವಿಸ್ತರಣೆಯ ಸಂದರ್ಭದಲ್ಲಿ ತಿಪ್ಪಾರೆಡ್ಡಿ ಅವರನ್ನು ಪರಿಗಣಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಶಿಫಾರಸು ಮಾಡುತ್ತೇನೆ. ಅವರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಪ್ರಯತ್ನಿಸಲಾಗುವುದು' ಎಂದರು.




ಚಿತ್ರದುರ್ಗದ ಮುರುಘಾ ಮಠದಲ್ಲಿ ಶಿವಮೂರ್ತಿ ಮುರುಘಾ ಶರಣರಿಗೆ ಸೋಮವಾರ ಹಮ್ಮಿಕೊಂಡಿದ್ದ ಗುರುವಂದನೆ ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ 'ಶರಣಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಶಾಸಕರಾದ ಜಿ.ಎಚ್.ತಿಪ್ಪಾರೆಡ್ಡಿ, ಎಂ.ಚಂದ್ರಪ್ಪ, ಶಿವಮೂರ್ತಿ ಮುರುಘಾ ಶರಣರು, ಸಂಸದ ಜಿ.ಎಂ.ಸಿದ್ದೇಶ್ವರ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಇದ್ದಾರೆ. – ಪ್ರಜಾವಾಣಿ ಚಿತ್ರ

ಅವಹೇಳನಕಾರಿ ಟ್ವೀಟ್: ಡಿಕೆಶಿ ವಿಷಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಕೆಪಿಸಿಸಿ ಸಾಮಾಜಿಕ ಜಾಲತಾಣ ವಿಭಾಗದಿಂದ ಅವಹೇಳನಕಾರಿ ಟ್ವೀಟ್ ಆಗಿರುವುದರ ಬಗ್ಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿಷಾದ ವ್ಯಕ್ತಪಡಿಸಿದ್ದಾರೆ.



ಶಿವಕುಮಾರ್

'ಈ ಟ್ವೀಟ್ ತಕ್ಷಣ ತೆಗೆದುಹಾಕಲು ಸೂಚನೆ ನೀಡಲಾಗಿದೆ. ಈ ಅಚಾತುರ್ಯಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆ' ಎಂದು ಅವರು ಸೋಮವಾರ ರಾತ್ರಿ ತಿಳಿಸಿದ್ದಾರೆ.

'ಇಂತಹ ಪ್ರಮಾದವನ್ನು ಕಾಂಗ್ರೆಸ್ ಎಂದಿಗೂ ಸಹಿಸುವುದಿಲ್ಲ' ಎಂದೂ ಅವರು ತಿಳಿಸಿದ್ದಾರೆ.

ಮುಖ್ಯಮಂತ್ರಿ ವಿರುದ್ಧ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಗಂಭೀರ ಆರೋಪ

ಬಿಎಸ್‌ವೈ ಭ್ರಷ್ಟಾಚಾರ: ಬೊಮ್ಮಾಯಿ ಪಾಲುದಾರ

ಪ್ರಜಾವಾಣಿ ವಾರ್ತೆ

ವಿಜಯಪುರ: ಯಡಿಯೂರಪ್ಪ ಅವಧಿಯಲ್ಲಿ ನಡೆದ ಭ್ರಷ್ಟಾಚಾರದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡ ಪಾಲುದಾರ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಗಂಭೀರ ಆರೋಪ ಮಾಡಿದರು.

ಸಿಂದಗಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅಶೋಕ ಮನಗೂಳಿ ಪರ ಮೊರಟಗಿಯಲ್ಲಿ ಸೋಮವಾರ ಆಯೋಜಿಸಿದ್ದ ಬಹಿರಂಗ ಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ ಅವರು, ಬಿ.ಎಸ್. ಯಡಿಯೂರಪ್ಪ ಸಂಪುಟದಲ್ಲಿ ಗೃಹ ಸಚಿವರಾಗಿದ್ದ ಬೊಮ್ಮಾಯಿ ಕೂಡ ಲೂಟಿ ಹೊಡೆದ ಗಿರಾಕಿಯೇ ಎಂದು ಹೇಳಿದರು.

ಬೊಮ್ಮಾಯಿ ಜನರಿಂದ ಆಯ್ಕೆಯಾಗಿ ಬಂದವರಲ್ಲ, ಆರ್‌ಎಸ್‌ಎಸ್‌ನಿಂದ ನೇಮಕವಾದ ಗಿರಾಕಿ. ಹೊಸವೇಷ ಹಾಕಿಕೊಂಡು ಈಗ ಜನರ ಮುಂದೆ ಬಂದಿದ್ದಾರೆ. ರಾಜ್ಯವನ್ನು ಕೇಸರಿಕರಣ ಮಾಡಲು ಹೊರಟಿದ್ದಾರೆ ಎಂದು ಆರೋಪಿಸಿದರು.

'ಸತ್ಯನಾಶ ಸರ್ಕಾರ': ಪ್ರಧಾನಿ ಮೋದಿ ಅವರದು 'ಸಬ್ ಕಾ ಸಾತ್ ಸಬ್ ಕಾ ವಿಕಾಸ್ ಸರ್ಕಾರವಲ್ಲ; ಸಬ್ ಕಾಸತ್ಯನಾಶ್ ಸರ್ಕಾರ್' ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಮೋದಿ ಸರ್ಕಾರ ಹೆಸರು ಬದಲಿಸುವ ಸರ್ಕಾರವೇ ಹೊರತು ಕೆಲಸ ಮಾಡುವ ಸರ್ಕಾರವಲ್ಲ. ಯುಪಿಎ ಅವಧಿಯಲ್ಲಿ ಜಾರಿಯಾದ ಜನಪರ ಯೋಜನೆಗಳನ್ನು ಬದಲಾವಣೆ ಮಾಡುವ, ಊರು, ಕ್ರೀಡಾಂಗಣಗಳ ಹೆಸರು ಬದಲಾವಣೆಗಷ್ಟೇ ಸೀಮಿತವಾಗಿದೆ ಎಂದರು.

ಕರ್ನಾಟಕ, ಗೋವಾ, ಉತ್ತರಾಖಂಡ, ಮಧ್ಯಪ್ರದೇಶ, ಮಣಿಪುರದಲ್ಲಿ ರಚನೆಯಾಗಿದ್ದ ಕಾಂಗ್ರೆಸ್‌ನ ಸ್ಥಿರ ಸರ್ಕಾರಗಳನ್ನು ಮೋದಿ, ಅಮಿತ್ ಶಾ ಜೋಡಿ ಇ.ಡಿ, ಸಿಬಿಐ ದುರುಪಯೋಗ ಪಡಿಸಿಕೊಂಡು ವಾಮಮಾರ್ಗದ ಮೂಲಕ ಕೆಡವಿ, ಪ್ರಜಾಪ್ರಭುತ್ವ ಮತ್ತು ಸಂವಿಧಾನ ಬಾಹಿರವಾಗಿ ಬಿಜೆಪಿ ಸರ್ಕಾರ ರಚನೆ ಮಾಡಿದ್ದಾರೆ ಎಂದು ಆರೋಪಿಸಿದರು.

ಪ್ರಜಾ ಮತ ಜನತಂತ್ರದ ಹಬ್ಬ 2021



ಸಿಂದಗಿ ವಿಧಾನಸಭಾ ಕ್ಷೇತ್ರದ ಮೊರಟಗಿಯಲ್ಲಿ ಸೋಮವಾರ ಆಯೋಜಿಸಿದ್ದ ಉಪ ಚುನಾವಣೆಯ ಬಹಿರಂಗ ಸಭೆಯಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿದರು. ಕಾಂಗ್ರೆಸ್ ಅಭ್ಯರ್ಥಿ ಅಶೋಕ ಮನಗೂಳಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ,ಈಶ್ವರ ಖಂಡ್ರೆ, ರಾಜ್ಯಸಭಾ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಡಾ.ಎಚ್.ಸಿ.ಮಹಾದೇವಪ್ಪ, ಎಂ.ಬಿ. ಪಾಟೀಲ, ಸಿ.ಎಸ್.ನಾಡಗೌಡ ಇದ್ದಾರೆ– ಪ್ರಜಾವಾಣಿ ಚಿತ್ರ

ಬಿಜೆಪಿ, ಆರ್‌ಎಸ್‌ಎಸ್ ಏನಾದರೂ ಮಾಡಿಕೊಳ್ಳಲಿ. ಆದರೆ, ಸರ್ಕಾರಿ ಅಧಿಕಾರಿಗಳಾಗಿ ಪೊಲೀಸ್ ಠಾಣೆಯಲ್ಲಿ ಕೇಸರಿಕರಣ ಮಾಡಲು ಹೊರಟಿರುವುದು ಖಂಡನೀಯ

ಸಿದ್ದರಾಮಯ್ಯ,
ವಿಧಾನಸಭೆ ವಿರೋಧ ಪಕ್ಷದ ನಾಯಕ

'ಕುಟುಂಬದ ರಿಮೋಟ್ ಕಂಟ್ರೋಲ್‌ನಲ್ಲಿ ಸಿದ್ದರಾಮಯ್ಯ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಸಮಾಜವಾದಿ ಹಿನ್ನೆಲೆಯಿಂದ ಬಂದಿರುವ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಕುಟುಂಬವೊಂದರ ರಿಮೋಟ್ ಕಂಟ್ರೋಲ್ ನಲ್ಲಿ ಇದ್ದಾರೆ. ಇದು ನಿಜಕ್ಕೂ ದುಃಖದ ಸಂಗತಿ ಎಂದು ಮುಖ್ಯಮಂತ್ರಿ ಬೊಮ್ಮಾಯಿ ತಿರುಗೇಟು ನೀಡಿದರು.


'ಬೊಮ್ಮಾಯಿ ಅವರು ಆರ್‌ಎಸ್‌ಎಸ್ ರಿಮೋಟ್ ಕಂಟ್ರೋಲ್ ನಲ್ಲಿ ಇದ್ದಾರೆ' ಎಂಬ ಸಿದ್ದರಾಮಯ್ಯ ಅವರ ಆರೋಪಕ್ಕೆ ಸೋಮವಾರ ಇಲ್ಲಿ ತೀಕ್ಷ್ಣ ಪ್ರತಿಕ್ರಿಯೆ ನೀಡಿದರು.

'ಆರ್‌ಎಸ್‌ಎಸ್ ರಾಷ್ಟ್ರ ಕಟ್ಟುವ ಸಂಸ್ಥೆ. ಈ ಕಾರ್ಯಕ್ಕೆ ಇಡೀ ಸಂಸ್ಥೆ ಸಮರ್ಪಣೆ ಮಾಡಿಕೊಂಡಿದೆ. ಸಿದ್ದರಾಮಯ್ಯ ಅವರ ಅಭಿಪ್ರಾಯವನ್ನು ನಾನು ವಿರೋಧಿಸುವುದಿಲ್ಲ' ಎಂದು ಹೇಳಿದರು.

ಕರ್ತವ್ಯ ಲೋಪ: 3 ಶಿಕ್ಷಕರ ಅಮಾನತು

ವಿಜಯಪುರ: ಸಿಂದಗಿ ವಿಧಾನಸಭೆ ಉಪಚುನಾವಣೆ ಕಾರ್ಯಕ್ಕೆ ನಿಯೋಜಿಸಲಾಗಿದ್ದ ಮೂವರು ಶಿಕ್ಷಕರನ್ನು ಕರ್ತವ್ಯಲೋಪದ ಆರೋಪದ ಮೇರೆಗೆ ಜಿಲ್ಲಾಧಿಕಾರಿ ಪಿ.ಸುನೀಲ್ ಕುಮಾರ್ ಸೋಮವಾರ ಅಮಾನತುಗೊಳಿಸಿದ್ದಾರೆ.

ಸಿಂದಗಿ ವಿದ್ಯಾನಗರದ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ನಂ-04ರ ಸಹ ಶಿಕ್ಷಕರಾದ ವಿ.ವಿ.ನಿಂಬರ್ಗಿ, ಎಸ್.ಆರ್.ಸಿಂದಗಿ ಹಾಗೂ ಆರ್.ಎ.ಕತಾರೆ ಅವರು ಚುನಾವಣೆ ವೇಳೆ ಮೇಲಧಿಕಾರಿಗಳ ಗಮನಕ್ಕೆ ತರದೇ ಕೇಂದ್ರ ಸ್ಥಾನ ಬಿಟ್ಟು ಹೋದ ಕಾರಣಕ್ಕೆ ಸೇವೆಯಿಂದ ಅಮಾನತುಗೊಳಿಸಿದ್ದಾರೆ.





> ಬೇಸರಕ್ಕೆ ಮದ್ದು ಕ್ರಿಯಾಶೀಲತೆ, ಕಾಯಕನಿಷ್ಠೆ. ಅದು ನಮ್ಮದಾಗಲಿ. ಬೇಸರವಾದಾಗ ಕತ್ತೆತ್ತಿ ನೇಸರ ನೋಡೋಣ, ಬದುಕಿಗೆ ಭರವಸೆಗಳನ್ನು, ಉತ್ಸಾಹವನ್ನು ತುಂಬಿಕೊಳ್ಳೋಣ.

ಬೇಕಿತ್ತು ಈ ಬ್ರೇಕ್!

ಡಾ. ಕೆ. ಎಸ್. ಶುಭ್ರತಾ

ಎಂಟು ವರ್ಷದ ಮಿತ್ರಳಿಗೆ ಮತ್ತು ಅವಳ ತಂಗಿ ನೇತ್ರಳಿಗೆ ಅಂದು ಖುಷಿಯೋ ಖುಷಿ. ಅಮ್ಮನ ಜೊತೆ ಪಗಡೆಯಾಟ ಆಡುತ್ತಾ ಒಂದೂವರೆ ಗಂಟೆಯಾಯಿತು. ಅಮ್ಮನ ಚಿತ್ತ ಮೊದ ಮೊದಲು ಮೊಬೈಲ್ ಮೇಲೆ ಇದ್ದರೂ, ಈಗಂತೂ ಒಂದು ಗಂಟೆಯಿಂದ ಮೊಬೈಲ್ ಮುಟ್ಟೇ ಇಲ್ಲ. ಒಂದೆರಡು ಬಾರಿ 'ಈ ವಾಟ್ಸ್ಆ್ಯಪ್, ಫೇಸ್‌ಬುಕ್ ಕೆಲಸವೇ ಮಾಡುತ್ತಿಲ್ಲವಲ್ಲ' ಎಂದು ಗೊಣಗಿದರಾದರೂ ಮತ್ತೆ ಪಗಡೆಯಾಟದಲ್ಲಿ ಮಕ್ಕಳೊಂದಿಗೆ ಮಕ್ಕಳಾಗಿ ಆಡುತ್ತಿದ್ದಾಳೆ ಅಮ್ಮ. ಅಪ್ಪ ಬಂದವನೂ 'ಯಾಕೋ ಈ ನೆಟ್‌ವರ್ಕ್ ಸರಿ ಇಲ್ಲ' ಎಂದು ಇವರೊಂದಿಗೇ ಕುಳಿತು ಇವರಾಡುವುದನ್ನು ಮೊದಲ ಬಾರಿ ನೋಡಿ ಆನಂದಿಸಿದ. ಮಧ್ಯದಲ್ಲಿ ಎಲ್ಲರೂ ಊಟದ ಮೇಜಿನ ಸುತ್ತ ಕುಳಿತು ಮೊಬೈಲ್‌ನ 'ಟನ್ ಟನ್' ತೊಂದರೆ ಇಲ್ಲದೆ ಊಟ ಮಾಡಿದರು ಕೂಡ. ಆಮೇಲೆ, ಮಲಗುವುದಕ್ಕೂ ಮುಂಚೆ ಮಕ್ಕಳಿಗೆ ಅಮ್ಮನಿಂದ ಕಥೆಯ ವಾಚನವೂ ಆಯಿತು. ಮಕ್ಕಳು ದಿಲ್‌ಖುಷ್.

> ಅಂದು ರಾತ್ರಿ ಒಂಬತ್ತು ಗಂಟೆಗೆ ಜಗತ್ತಿನಾದ್ಯಂತ ಫೇಸ್‌ಬುಕ್, ವಾಟ್ಸ್ಆ್ಯಪ್‌ಗಳು ಥಟ್ ಎಂದು ತಟಸ್ಥವಾದವು. ಹಲವರ ಪಾಲಿಗೆ ಜಗತ್ತೇ ಇಲ್ಲವಾಯಿತು!

ಬೇಕಿತ್ತು ಈ ಬ್ರೇಕ್ !

ಅಕ್ಟೋಬರ್ 4ರ ಸೋಮವಾರದಂದು ಮಿತ್ರ-ನೇತ್ರರ ಅನುಭವ ಹಲವಾರು ಕುಟುಂಬಗಳಲ್ಲಾಗಿರುವುದು ಖಂಡಿತ. ಅಂದು ರಾತ್ರಿ ಒಂಬತ್ತು ಗಂಟೆಗೆ ಜಗತ್ತಿನಾದ್ಯಂತ ಫೇಸ್‌ಬುಕ್ ಕುಟುಂಬದ ಆ್ಯಪ್‌ಗಳು ಅಂದರೆ ಫೇಸ್‌ಬುಕ್, ವಾಟ್ಸ್ಆ್ಯಪ್ ಮತ್ತು ಇನ್‌ಸ್ಟಾಗ್ರಾಮ್‌ಗಳು ಥಟ್ ಎಂದು ತಟಸ್ಥವಾದವು. ಸುಮಾರು ಆರು ಗಂಟೆಗಳ ಅವಧಿಗೆ ಅವ್ಯಾವೂ ಕೆಲಸ ಮಾಡಲಿಲ್ಲ. ಹಲವರ ಪಾಲಿಗೆ ಜಗತ್ತೇ ಇಲ್ಲವಾಯಿತು!

ಇಪ್ಪತ್ತೊಂದನೇ ಶತಮಾನದಲ್ಲಿ ಹೇಗೆ ನಮಗೆ ತಂತ್ರಜ್ಞಾನ ಇಲ್ಲದ ಜೀವನ ಊಹಿಸಲಾಗದೋ, ಹಾಗೆ ಸಾಮಾಜಿಕ ಜಾಲತಾಣ(ಸೋಶಿಯಲ್ ಮೀಡಿಯಾ)ಗಳು ಇಲ್ಲದೆ ಕಳೆವ ದಿನವನ್ನು ಊಹಿಸುವುದೂ ಕಷ್ಟವೆನಿಸುತ್ತದೆ. ಆದರೂ ಈ ಸೋಶಿಯಲ್ ಮೀಡಿಯಾದಿಂದ ಕೆಲವು ಗಂಟೆಗಳ ಬ್ರೇಕ್ ಅಗತ್ಯವಿತ್ತು. ಸೋಶಿಯಲ್ ಮೀಡಿಯಾ ಇಲ್ಲದೆ ಕಾಲ ಕಳೆಯುವುದು ಸಾಧ್ಯವಿದೆ ಎಂದು ಅರಿತಂತಾಯ್ತು. ಮನಸ್ಸು ಡೀಟಾಕ್ಸ್ ಆಗಲು ಸಮಯ ನೀಡಿದ ಹಾಗಾಯಿತು. ಮೊಬೈಲ್‌ನಿಂದ ತಲೆಯೆತ್ತಿ ಸುತ್ತಮುತ್ತಲ ಜಗತ್ತನ್ನು ನೋಡಿದಂತಾಯ್ತು.

ಮನೆಯ ಕುಟುಂಬದ ಸದಸ್ಯರೊಂದಿಗೆ ಕುಳಿತು, ಸಂತಸದಿಂದ ಮಾತನಾಡುವುದಕ್ಕೆ ಪುರುಸೊತ್ತು ಸಿಕ್ಕಿತು. ಒಟ್ಟಿಗೆ ಕುಳಿತು ಊಟ ಮಾಡುವುದನ್ನು ಮರೆತೇ ಹೋಗಿರುವ ನಮಗೆ, ಹಾಗೆ ಮಾಡಲು ಇದೊಂದು ಅವಕಾಶವಾದಂತಾಯ್ತು.

ಇದೂ 'ವರ್ತನಾ ವ್ಯಸನ' ಆಗಬಹುದು!

ಇಂದು ಕೇವಲ ಒಂದು ಬಟನ್ ಒತ್ತುವುದರಿಂದ ಜಗತ್ತಿನ ಇನ್ನೊಂದು ಮೂಲೆಯಲ್ಲಿರುವ ನಮ್ಮ ಸ್ನೇಹಿತರ ಜೊತೆ ಮಾತನಾಡಬಹುದು, ಸಂಬಂಧಗಳನ್ನು ಸ್ಥಾಪಿಸಬಹುದು. ನಮ್ಮ ಪ್ರತಿಭೆಯನ್ನು ತೋರಿಸಿ ಭೇಷ್ ಪಡೆಯಬಹುದು. ಹೀಗೆ ಒಂದೇ ಎರಡೇ ಸೋಶಿಯಲ್ ಮೀಡಿಯಾದ ಲಾಭಗಳು? ಆದರೆ ನೆನಪಿಡಿ! ಈ ಸೋಶಿಯಲ್ ಮೀಡಿಯ ಎರಡು ಅಲುಗಿನ ಕತ್ತಿಯಿದ್ದಂತೆ. ಸೋಶಿಯಲ್ ಮೀಡಿಯಾ ಕೂಡ ಮಾದಕವಸ್ತುಗಳಂತೆ ವ್ಯಸನವಾಗಬಹುದು. ಹದಿಹರೆಯದ ವಿದ್ಯಾರ್ಥಿಗಳಲ್ಲಂತೂ ಇದೊಂದು ಕ್ರೇಜ್ ಆಗಿಬಿಟ್ಟಿದೆ. ಮನೋವೈದ್ಯಕೀಯ ಶಾಸ್ತ್ರದ ಪ್ರಕಾರ 'ವರ್ತನಾ ವ್ಯಸನ'ಗಳಲ್ಲಿ (Behavioural Addiction) ಇದೂ ಒಂದು. ಈ ವ್ಯಸನದಿಂದಾಗಿ ಕಲಿಕೆಯಲ್ಲಿ ತೊಂದರೆ, ಕುಟುಂಬದ ಬಗ್ಗೆ ನಿರ್ಲಕ್ಷ್ಯ, ಉದ್ಯೋಗದಲ್ಲಿ ಸಮಸ್ಯೆ, ಒಂಟಿಯಾಗಿರುವಿಕೆ, ಕುತ್ತಿಗೆ ನೋವು, ದೃಷ್ಟಿದೋಷಗಳು, ನಿದ್ರೆಯ ಸಮಸ್ಯೆಗಳು ಮುಂತಾದ ಸಮಸ್ಯೆಗಳು ಕಾಡಬಹುದು.

ಸೋಶಿಯಲ್ ಮೀಡಿಯಾ ಬಳಕೆಗೆ ಸಂಬಂಧಪಟ್ಟಂತೆ ಈ ಕೆಳಗಿನ ಯಾವುದಾದರೂ ಪ್ರಶ್ನೆಗಳಿಗೆ ಉತ್ತರ ಹೌದಾದಲ್ಲಿ ತಕ್ಷಣವೇ ಎಚ್ಚೆತ್ತುಕೊಳ್ಳಿ.

1) ದಿನದಲ್ಲಿ ಗಂಟೆಗಟ್ಟಲೆ ಈ ಸೋಶಿಯಲ್ ಮೀಡಿಯಾ ಬಳಸುತ್ತಿರುವಿರಾ?

2) ಯಾವಾಗಲೂ ಫೇಸ್‌ಬುಕ್, ವಾಟ್ಸ್ಆ್ಯಪ್‌ಗಳ ಬಗ್ಗೆಯೇ ಮನಸ್ಸು ಯೋಚಿಸುತ್ತದೆಯೇ? 'ಫೋಟೊಗೆ ಲೈಕ್ ಬಂತೇ?' 'ಯಾರು ಕಮೆಂಟ್ ಮಾಡಿದರು?' ಎಂದು ಸದಾ ಮೊಬೈಲ್ ನೋಡುತ್ತೀರೇ?

3) ಯಾವಾಗ ಇಂಟರ್ನೆಟ್ ಇಲ್ಲವೋ ಆಗ ಮನಸ್ಸು ಚಡಪಡಿಸುತ್ತದೆಯೇ?

4) ಯಾವಾಗಲೂ ಈ ಸೋಶಿಯಲ್ ಮೀಡಿಯಾ ಬೇಕೇ ಬೇಕೆಂಬ ಅತಿಯಾದ ಹಂಬಲ ಕಾಡುತ್ತದೆಯೇ?

5) ದಿನೇ ದಿನೇ ಇದರ ಬಳಕೆ ಹೆಚ್ಚುತ್ತಿದೆಯೇ?

6) ಎಲ್ಲಾ ಹಾನಿಕಾರಕ ಪರಿಣಾಮಗಳನ್ನು ತಿಳಿದೂ, ಸೋಶಿಯಲ್ ಮೀಡಿಯಾ ಬಳಕೆಗೆ ಕಡಿವಾಣ ಹಾಕಲಾಗುತ್ತಿಲ್ಲವೇ?

ಪರಿಹಾರ ಇದೆಯೇ?

- ಸೋಶಿಯಲ್ ಮೀಡಿಯಾಗಳನ್ನು ಸಂಪೂರ್ಣವಾಗಿ ಬಿಡುವ ಅಗತ್ಯವಿಲ್ಲ. ಆದರೆ ಅದರಲ್ಲಿ ಕಳೆಯುವ ಸಮಯಕ್ಕೆ ನಾವು ಮಿತಿ ಹಾಕಿಕೊಳ್ಳಬೇಕಿದೆ.
- ಜನರ, ಸಂಬಂಧಗಳ ಬದಲೀ ವ್ಯವಸ್ಥೆಯಾಗಿ ನಾವು ಈ ಸೋಶಿಯಲ್ ಮೀಡಿಯಾಗಳನ್ನು ಬಳಸಬಾರದು.
- ಮನೆಯಲ್ಲಿ, ಊಟ ಮಾಡುವ ಸಮಯದಲ್ಲಿ ಡೇಟಾ ಆಫ್ ಮಾಡುವ ಪ್ರವೃತ್ತಿ ಬೆಳೆಸಿಕೊಂಡರೆ ಒಳಿತು.
- ರಾತ್ರಿಯಂತೂ ಮಲಗುವುದಕ್ಕೆ ಒಂದು ಗಂಟೆ ಮುಂಚೆ ಮೊಬೈಲ್ ಅನ್ನು ನೋಡದಿದ್ದರೆ ಆಹ್ಲಾದಕರವಾದ ನಿದ್ರೆ ಬರುವುದು ಖಂಡಿತ.
- ಆಗಾಗ ಈ ಮೊಬೈಲ್‌ನ ಡೇಟಾ ಆಫ್ ಮಾಡಿ ನಮ್ಮ ಮನೋಬಲವನ್ನು ಪರೀಕ್ಷಿಸುವುದೂ ಅಗತ್ಯ.
- ಹದಿಹರೆಯದ ಮಕ್ಕಳಿಗಂತೂ ಈ ಸೋಶಿಯಲ್ ಮೀಡಿಯಾ ಬಳಕೆಯ ಬಗ್ಗೆ, ಅದರ ಸಾಧಕ ಬಾಧಕಗಳ ಬಗ್ಗೆ ಸವಿವರವಾಗಿ ತಿಳಿಸುವುದು ಅವಶ್ಯಕ.

ವಾಟ್ಸ್ಆ್ಯಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ ಇಲ್ಲದೇ ಜಗತ್ತನ್ನು ಕಲ್ಪಿಸಿಕೊಳ್ಳುವುದಕ್ಕೆ ಹಲವರಿಗೆ ಕಷ್ಟ. ಈ ಆರು ಗಂಟೆಗಳ ಕಾಲ, ಸೋಶಿಯಲ್ ಮೀಡಿಯಾಗೆ ಬ್ರೇಕ್ ಬಿತ್ತಲ್ಲ, ಅದು ನಮಗೆ ಸಾಕಷ್ಟು ಕಲಿಸಿದೆ. ಅಸಾಧ್ಯ ಎಂದುಕೊಂಡದ್ದು ಸಾಧ್ಯವಿದೆ ಎಂದು ತೋರಿಸಿದೆ. ಸೋಶಿಯಲ್ ಮೀಡಿಯಾದ ಹೊರಗೆ ಜಗತ್ತಿತ್ತು; ಈಗ ಇದೆ; ಮತ್ತೆ ಮುಂದೆಯೂ ಇರುತ್ತದೆ ಎಂಬುದನ್ನು ದೃಢಪಡಿಸಿದೆ. ಸಂತಸದಿಂದಿರಲು ಕೇವಲ ಸೋಶಿಯಲ್ ಮೀಡಿಯಾದ ಲೈಕ್‌ಗಳು ಬೇಕಿಲ್ಲ. ಮೊಬೈಲ್ ಆಫ್ ಮಾಡಿ, ಸುತ್ತಮುತ್ತಲಿನ ಸಹೃದಯರೊಂದಿಗೆ ಬೆರೆಯಬೇಕಷ್ಟೆ! ಹೊರಗಣ್ಣು ಮುಚ್ಚಿ, ಮನಸ್ಸಿನ ಒಳಗಣ್ಣು ತೆರೆದು ನೋಡಬೇಕಷ್ಟೇ!! ❖



ಬೇಸರ ಬೇಡ ನೇಸರ ನೋಡ

ರಘು ವಿ.

ಬದುಕಿನಲ್ಲಿ ಬೇಸರವೂ ಒಂದು ಪ್ರಮುಖ ವಿಷಯ. ಪುಟ್ಟ ಮಗುವಿನಿಂದ ಹಿಡಿದು ವಯೋವೃದ್ಧರಾದಿಯಾಗಿ ಎಲ್ಲರಲ್ಲೂ ಒಂದೊಂದು ಬಗೆಯ ಬೇಸರ. ಶಾಲೆಯಿದ್ದರೆ, ಹೋಗಬೇಕು ಪಾಠ ಕಲಿಯಬೇಕೆಂಬ ಬೇಸರ. ಇರದಿದ್ದರೆ, ಮಿತ್ರರನ್ನು ಭೇಟಿಯಾಗದ, ಜೊತೆಯಾಗಿ ಆಡಿ ಕುಣಿಯದ ಬೇಸರ. ಕಚೇರಿಯಿದ್ದರೆ ಹೋಗಬೇಕು, ಕೆಲಸ ಮಾಡಬೇಕು ಎಂಬ ಬೇಸರ. ರಜೆಯಿದ್ದರೆ ಕೆಲಸವಿರದ ಬೇಸರ.

ಬೇಸರಕ್ಕೆ ಮೂಲ ಕಾರಣ ಏನು? ಅದು ಹೊರಗಿನ ಪ್ರಪಂಚದ ಆಗುಹೋಗುವಿಕೆಗಿಂತ, ಅದರ ಬಗೆಗಿನ ನಮ್ಮ ಪ್ರತಿಕ್ರಿಯೆಯ ಕಾರಣದಿಂದ ಉಂಟಾಗುವ ಮನಃಸ್ಥಿತಿ ಎಂದು ತಿಳಿಯುವವರೆಗೆ ಬೇಸರದ ದೂರು ನಿಲ್ಲದು. ಹಾಗೆಂದ ಮಾತ್ರಕ್ಕೆ ಹೊರಗಿನ ಪರಿಸ್ಥಿತಿಯ ಪರಿಣಾಮ ನಮ್ಮ ಮೇಲೆ ಆಗದಿರಲು ನಾವೇನು ಕಲ್ಲುಬಂಡೆಗಳಲ್ಲ. ಆದರೆ ವಿವೇಚನೆ ಇರದಿದ್ದರೆ ಈ ಬೇಸರ ನಮ್ಮನ್ನು ನುಂಗಿ ನೊಣೆಯುವುದು ಸತ್ಯ.

ರೂಮಿ ಹೇಳುತ್ತಾನೆ: 'ನಿನ್ನೆದೆಯೊಳಗೊಂದು ಮೇಣದ ಬತ್ತಿಯಿದೆ, ಹೊತ್ತಿಕೊಳ್ಳಲು ಕಾಯುತ್ತಿದೆ, ನಿನ್ನ ಅಂತರಂಗದೊಳಗೊಂದು ಶೂನ್ಯವಿದೆ, ತುಂಬಿಕೊಳ್ಳಲು ಕಾಯುತ್ತಿದೆ. ನಿನಗೆ ಹಾಗೆನಿಸುತ್ತಿದೆ, ಅಲ್ಲವೆ?' (There is a candle in your heart, ready to be kindled. There is a void in your soul, ready to be filled. You feel it, don't you?)

ಇದು ಒಟ್ಟಾರೆ ಬದುಕಿನ ಬೇಸರದ ಮೂಲ. ಅಪೂರ್ಣವಾದಂತೆ ಕಾಣಿಸಿಕೊಳ್ಳುವ ಬದುಕಿನ ಪೂರ್ಣತೆಯತ್ತ ಚಿತ್ತ ಧಾವಿಸುವುದೇ ಬೇಸರದ ಬೀಜ. ತುಂಬಿಕೊಳ್ಳುವ ಹಂಬಲವೇ ನಮ್ಮ ಎಲ್ಲ ಪ್ರಯತ್ನಗಳ ಮೂಲ. ಆದರೆ ಈ ಪೂರ್ಣತೆಯೂ ಕೂಡ ಒಂದು ಪರಿಕಲ್ಪನೆಯಾದ್ದರಿಂದ ಅಧ್ಯಾತ್ಮ 'ಯಾವುದನ್ನು ಅರಿತರೆ ಎಲ್ಲವನ್ನು ಅರಿತಂತಾಗುತ್ತದೊ, ಅದನ್ನು ಅರಸುವುದೇ ನಿಜವಾದ ವಿದ್ಯೆ' ಎಂದು ಇದನ್ನು ಮತ್ತಷ್ಟು ವಿಸ್ತರಿಸಿಬಿಡುತ್ತದೆ.

ಯೋಗದ ಪ್ರಕಾರ ಬೇಸರ ಮನಸ್ಸಿನ ಒಂದು ವ್ಯಾಧಿ! ಇರಲಿ, ಅಧ್ಯಾತ್ಮದ ವಿಚಾರಗಳನ್ನು ಬದಿಗಿಟ್ಟು ಪ್ರಸ್ತುತ ಬೇಸರದ ಕಾರಣ-ಪರಿಣಾಮ-ಪರಿಹಾರಗಳನ್ನು ಕುರಿತು ವಿಶ್ಲೇಷಿಸುವಾಗ ವೀರಾಧಿವೀರನಾದ ಅರ್ಜುನನೂ ಯುದ್ಧದ ಆರಂಭದ ಮುನ್ನ ವಿಷಾದದಿಂದ ಕುಸಿದ ಎಂಬುದನ್ನು ನೆನಪು ಮಾಡಿಕೊಳ್ಳೋಣ. ಕೃಷ್ಣನ ಸ್ಥಾನದಲ್ಲಿ ಸಾಮಾನ್ಯ ಸಾರಥಿಯಿದ್ದಿದ್ದರೆ ಅರ್ಜುನನಿಗೆ ಸಮಾಧಾನ ಮಾಡಿ 'ಹೌದು, ಯುದ್ಧ ಬೇಡ. ಏಕೀ ರಕ್ತಪಾತ? ಪಾಲಿಗೆ ಬಂದದ್ದೇ ಪಂಚಾಮೃತ' ಎಂದು ಹಿಂದಿರುಗಿ ಕರೆತರುತ್ತಿದ್ದನೋ ಏನೋ? ಆದರೆ ಕೃಷ್ಣ ನುರಿತ ಆಪ್ತಸಲಹೆಗಾರನಂತೆ ಅರ್ಜುನನನ್ನು ಕರ್ಮದ ಫಲ ಮರೆತು ಕ್ರಿಯೆಯಲ್ಲಿ ತೊಡಗುವಂತೆ ಪ್ರೋತ್ಸಾಹಿಸುತ್ತಾನೆ. ಹೌದು, ಇಂದಿಗೂ ಆಧುನಿಕ ಮನಶ್ಶಾಸ್ತ್ರವೂ ಬೇಸರ-ಖಿನ್ನತೆಗಳಿಗೆ ಚಟುವಟಿಕೆಯೇ ಪರಿಹಾರ ಎಂದು ಸಲಹೆ ನೀಡುತ್ತವೆ. ಮನಸ್ಸು ಮತ್ತು ದೇಹ ಸದಾ ಚಟುವಟಿಕೆಗಳಲ್ಲಿ ಇರಬೇಕು. ಆಗ ಬೇಸರ ಹತ್ತಿರ ಸುಳಿಯದು. ಜೊತೆಗೆ ಬೇಸರವೂ ಸಾಂಕ್ರಾಮಿಕ ಎಂಬುದನ್ನು ಗಮನಿಸಬೇಕು.

ಬೇರೆಯವರ ಅಭಿಪ್ರಾಯಗಳು, ಬೇಸರದ ಆಲೋಚನೆಗಳು ನಮ್ಮ ಮೇಲೆ ಹೇಗೆ ಪರಿಣಾಮ ಬೀರುತ್ತವೆ? ಹಾಗೇ ಕರ್ಮವು ಹೇಗೆ ಯೋಗವಾಗುತ್ತದೆ ಎಂಬುದನ್ನು ಗಿಬ್ರಾನ್ ಕೂಡ ಸೊಗಸಾಗಿ ತಿಳಿಸುತ್ತಾನೆ: 'ನಿಮಗೆ ಬದುಕು ಕತ್ತಲೆ ಎಂದೂ ಹೇಳಲಾಗಿದೆ; ನಿಮ್ಮ ದಣಿದ ಮನದಲ್ಲಿ ದಣಿದವರ ಆ ನುಡಿ ಪ್ರತಿಧ್ವನಿಯಾಗಿದೆ. ಹೌದು, ಬದುಕು ಕತ್ತಲೆನಿಸುತ್ತದೆ, ಪ್ರೇರಣೆಯಿಲ್ಲದಾಗ. ಜ್ಞಾನದ ನೆಲೆಯಿಂದ ಹೊಮ್ಮದ ಪ್ರೇರಣೆ ಅಂಧ, ಮತ್ತು ಕಾಯಕದ ಎದುರು ಎಲ್ಲ ಜ್ಞಾನವೂ ವ್ಯರ್ಥ. ಮತ್ತು ಪ್ರೇಮವಿಲ್ಲದ ಎಲ್ಲ ಕಾಯಕವೂ ಶೂನ್ಯ, ನೀನು ನಿಜವಾದ ಪ್ರೇಮದಿಂದ ಕೆಲಸ ಕೈಗೊಂಡಾಗ ಅದು ನಿನ್ನನ್ನು ನಿನ್ನೊಂದಿಗೆ ಜೋಡಿಸುತ್ತದೆ, ಪರಸ್ಪರರನ್ನು ಒಗ್ಗೂಡಿಸುತ್ತದೆ, ಹಾಗೂ ದೇವರೊಂದಿಗೆ ಒಂದಾಗಿಸುತ್ತದೆ... ಕಾಯಕವು ಪ್ರೇಮದ ವ್ಯಕ್ತರೂಪ.'

ಕಗ್ಗದ ಎರಡು ಸೂತ್ರಗಳಲ್ಲಿ ಬೇಸರವನ್ನು ಕುರಿತಂತೆ ತಿಮ್ಮಗುರುವಿನ ಅಭಿಪ್ರಾಯವನ್ನು ಕಾಣಬಹುದು. ಬೇಸರಕ್ಕೆ ಕಾರಣ ಭಿನ್ನತೆ. ತಾನು ಬೇರೆ ಎಂಬ ಭಾವವೇ ಎಲ್ಲ ಒಳತೋಟಗಳಿಗೆ ಕಾರಣ. ಆದುದರಿಂದ ತಿಮ್ಮಗುರು ಹೇಳುತ್ತಾರೆ: 'ಭ್ರಾಮಕದ ಸೃಷ್ಟಿಯಾ ವಿಷಮಲಕ್ಷಣಗಳಲಿ ಸಾಮರಸ್ಯವನರಸೋ'. ಭ್ರಮೆಯ ಈ ಸೃಷ್ಟಿಯ ವಿಪರ್ಯಾಸಗಳಲ್ಲಿ, ಸವಾಲಿನ ಸಂದರ್ಭಗಳಲ್ಲಿ ಸಾಮರಸ್ಯವನ್ನು ಕಾಣು (ಭಿನ್ನತೆಯನ್ನು ಕಾಣಬೇಡ). ಮತ್ತೊಂದು ಸೂತ್ರ: 'ದುಮ್ಮಾನಪಡುವುದೇಂ ಚಿಮ್ಮುಲ್ಲಸವ ಧರೆಗೆ'. ಬದುಕಿನ ಕಷ್ಟಕೋಟಲೆಗಳಿಂದ ವಿಮುಖನಾಗುವ ಪ್ರಯತ್ನದಲ್ಲಿ ಜನ್ಮ ಸಾಕೆಂದು ಒದ್ದಾಡದೆ, 'ದುಮ್ಮಾನ(ದುಃಖ) ಪಡದೆ ಉಲ್ಲಾಸವನ್ನು ಹರಡು' ಎಂಬುದು ಎರಡನೇ ಸೂತ್ರ. ಇವೆರಡಕ್ಕೂ ನಮಗೆ ಶ್ರೇಷ್ಠ ಉದಾಹರಣೆ ಆಕಾಶದ ಸೂರ್ಯ. ಅವನು ಯಾವ ಭಿನ್ನತೆಯನ್ನೂ ತೋರದೆ ಚರಾಚರ ವಸ್ತುಗಳ ಮೇಲೆ ತನ್ನ ಬೆಳಕು ಚೆಲ್ಲುತ್ತಾನೆ. ದಿನವೂ ಉದಯ-ಅಸ್ತಂಗತೆಗಳಲ್ಲಿ ಸಿಲುಕಿದರೂ ಅದು ಏಕತಾನತೆಯ ಕೆಲಸವೆಂದು ಕೊರಗದೆ ತಾನು ನೀಡಬೇಕಾದುದನ್ನು ನೀಡಿ ಸಂಜೆ ಮರೆಯಾಗುತ್ತಾನೆ. ಬೇಸರಕ್ಕೆ ಮದ್ದು ಕ್ರಿಯಾಶೀಲತೆ, ಕಾಯಕನಿಷ್ಠೆ. ಅದು ನಮ್ಮದಾಗಲಿ. ಬೇಸರವಾದಾಗ ಕತ್ತೆತ್ತಿ ನೇಸರ ನೋಡೋಣ, ಬದುಕಿಗೆ ಭರವಸೆಗಳನ್ನು, ಉತ್ಸಾಹವನ್ನು ತುಂಬಿಕೊಳ್ಳೋಣ. ❖

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 78

1066) ಮೊದಲ ಜಾಗತಿಕ ಯುದ್ಧದಲ್ಲಿ ಬಳಸಲಾದ ರಾಸಾಯನಿಕ
ಎ) ಮಸ್ಟರ್ಡ್ ಗ್ಯಾಸ್ ಬಿ) ಮಿಥೇನ್ ಗ್ಯಾಸ್
ಸಿ) ಈಥೇನ್ ಗ್ಯಾಸ್ ಡಿ) ಪ್ರೋಪೇನ್

1067) ಸಿಮೆಂಟ್ ಬೇಗನೆ ಗಟ್ಟಿಯಾಗುವುದನ್ನು ತಡೆಗಟ್ಟುವ ಲವಣ
ಎ) ಸೋಡಿಯಂ ಬಿ) ಕ್ಯಾಲ್ಸಿಯಂ
ಸಿ) ಜಿಪ್ಸಂ ಡಿ) ರಂಜಕ

1068) ರೆಫ್ರಿಜರೇಟರ್‌ನಲ್ಲಿ ಉಪಯೋಗಿಸುವ ಅನಿಲ ಯಾವುದು?
ಎ) ಅಮೋನಿಯಾ ಬಿ) ಓಜೋನ್
ಸಿ) ಕ್ರಿಪ್ಟಾನ್ ಡಿ) ನಿಯಾನ್

1069) ಅಗ್ನಿಶಾಮಕ ಯಂತ್ರ ಹಾಗೂ ಸಿನಿಮಾ ಮಂದಿರಗಳಲ್ಲಿ ಬೆಂಕಿ ನಂದಿಸಲು ಬಳಸುವ ಅನಿಲ ಯಾವುದು?
ಎ) ಇಂಗಾಲದ ಡೈಆಕ್ಸೈಡ್
ಬಿ) ಸಲ್ಫ್ಯೂರಿಕ್ ಅಸಿಡ್
ಸಿ) ಹೈಡ್ರೋಜನ್ ಡಿ) ಆಮ್ಲಜನಕ

1070) ಯಾವ ಲೋಹವು ಮಾನವರಲ್ಲಿ ಕ್ರಮವಾಗಿ ವಿಷವನ್ನು ಹರಡುತ್ತದೆ?
ಎ) ಸೀಸ ಬಿ) ಗಂಧಕ
ಸಿ) ರಂಜಕ ಡಿ) ಮೆಗ್ನಿಷಿಯಂ

1071) ಹ್ಯಾಲೊಜಿನ್‌ಗಳಲ್ಲಿ ಅತ್ಯಂತ ಕ್ರಿಯಾಶೀಲವಾದುದು
ಎ) ಕ್ಲೋರಿನ್ ಬಿ) ಫ್ಲೋರಿನ್
ಸಿ) ಮಿಥೇನ್ ಡಿ) ಈಥೇನ್

1072) ಸಾಮಾನ್ಯ ಮನುಷ್ಯನ ರಕ್ತದೊತ್ತಡವು ಎಷ್ಟಿರುತ್ತದೆ?
ಎ) 80/120 mm Hg ಬಿ) 150/90 mm Hg
ಸಿ) 120/80 mm Hg ಡಿ) 90/150 mm Hg

1073) ಭಾರತದಲ್ಲಿ ಪ್ರಥಮ ಬದಲಿ ಹೃದಯ ಶಸ್ತ್ರಚಿಕಿತ್ಸೆ ನಡೆಸಿದ ವೈದ್ಯರು
ಎ) ಡಾ.ಕೇಶವನ್ ನಾಯರ್
ಬಿ) ಡಾ.ವಾಲಿತನಯ
ಸಿ) ಡಾ.ವೇಣುಗೋಪಾಲ್
ಡಿ) ಡಾ.ಪಿ.ಕೆ.ಕೆ.ಅಯ್ಯಂಗಾರ್

1074) ಲ್ಯುಕೇಮಿಯಾದಲ್ಲಿ ಯಾವ ರಕ್ತ ಕಣಗಳು ಹಾನಿಗೊಳಗಾಗುತ್ತವೆ?
ಎ) ಬಿಳಿರಕ್ತ ಕಣಗಳು ಬಿ) ಕೆಂಪು ರಕ್ತ ಕಣಗಳು
ಸಿ) ಪ್ಲೇಟ್‌ಲೆಟ್ಸ್ ಡಿ) ಮೇಲಿನ ಎಲ್ಲವೂ

1075) ಹಿಮೊಗ್ಲೋಬಿನ್ ತಯಾರಿಕೆಗೆ ಬೇಕಾಗುವ ಅವಶ್ಯಕ ಖನಿಜ
ಎ) ಕಬ್ಬಿಣ ಬಿ) ತಾಮ್ರ
ಸಿ) ಅಯೋಡಿನ್ ಡಿ) ಮ್ಯಾಂಗನಿಸ್

1076) ನ್ಯುಮೋನಿಯಾ ಎಂಬುದು ಯಾವ ಭಾಗಕ್ಕೆ ತಗುಲುವ ರೋಗ?
ಎ) ಶ್ವಾಸಕೋಶ ಬಿ) ಹೃದಯ
ಸಿ) ಕಣ್ಣು ಡಿ) ಜಠರ

1077) ರಕ್ತ ಹೆಪ್ಪುಗಟ್ಟುವಿಕೆಯನ್ನು ಏನೆಂದು ಕರೆಯುತ್ತಾರೆ?
ಎ) ಪೈಟ್ರೋಸಿಸ್ ಬಿ) ಥ್ರೊಂಬೋಸಿಸ್
ಸಿ) ಆಗ್ಲುಟಿನೈಸೆಷನ್ ಡಿ) ನ್ಯೂಮ್ಯಾಜಿಟಂ

1078) ಬಣ್ಣಕುರುಡುತನ
ಎ) ಮಹಿಳೆಯರಲ್ಲಿ ಅಪರೂಪ
ಬಿ) ಪುರುಷರಲ್ಲಿ ಅಪರೂಪ
ಸಿ) ಮಹಿಳೆಯರಲ್ಲಿ ಸಾಮಾನ್ಯ
ಡಿ) ಪುರುಷರಲ್ಲಿ ಸಾಮಾನ್ಯ

1079) ಪಿಟ್ಯುಟರಿ ಗ್ರಂಥಿಯ ಅಧೀನಕ್ಕೊಳಪಡದೇ ಕಾರ್ಯ ಚಟುವಟಿಕೆ ನಡೆಸುವ ಗ್ರಂಥಿ
ಎ) ಪ್ಯಾರಾಥೈರಾಯಿಡ್ ಗ್ರಂಥಿ
ಬಿ) ಪ್ಯಾಂಕ್ರಿಯಾಸ್ ಸಿ) ಅಡ್ರಿನಾಲ್
ಡಿ) ಯಾವುದು ಅಲ್ಲ

1080) ಅಲ್ಫಾ-ಕೆರೋಟಿನ್ ಎಂಬ ಪ್ರೊಟೀನ್ ಇರುವುದು ಯಾವುದರಲ್ಲಿ?
ಎ) ಹತ್ತಿ ಬಿ) ಉಣ್ಣೆ
ಸಿ) ಸೆಣಬು ಡಿ) ಕಬ್ಬು

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 77ರ ಉತ್ತರ: 1051: ಡಿ, 1052. ಡಿ, 1053. ಸಿ, 1054. ಬಿ, 1055. ಡಿ, 1056. ಡಿ, 1057. ಸಿ, 1058. ಬಿ, 1059. ಸಿ, 1060. ಎ, 1061. ಬಿ, 1062. ಎ, 1063. ಡಿ, 1064. ಬಿ, 1065. ಎ

ಒತ್ತಡ ನಿಭಾಯಿಸಿ; ಸ್ತನ ಕ್ಯಾನ್ಸರ್‌ನಿಂದ ದೂರವಿರಿ

ಕೃಷ್ಣಿ ಶಿರೂರ

ಒಂದೆಡೆ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಕುರಿತು ಅರಿವು, ಜಾಗೃತಿ ಮೂಡಿರುವುದು ಸಮಾಧಾನದ ಸಂಗತಿಯೆನಿಸಿದರೆ, ಸ್ತನ ಕ್ಯಾನ್ಸರ್ ಪ್ರಕರಣ ಹೆಚ್ಚುತ್ತಲೇ ಸಾಗಿರುವುದು ಆತಂಕಕಾರಿ ಸತ್ಯ.

ನಿಜ. ಕಳೆದ ಎರಡು ವರ್ಷಗಳ ಹಿಂದಕ್ಕೊಮ್ಮೆ ಹೊರಳಿ ನೋಡಿದರೆ ಸ್ತನ ಕ್ಯಾನ್ಸರ್ ಪ್ರಕರಣಗಳ ಪತ್ತೆ ದುಪ್ಪಟ್ಟು ಆಗಿದೆ. ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ವರದಿ ಪ್ರಕಾರ ಪ್ರತಿವರ್ಷ ಸುಮಾರು ಹದಿನಾಲ್ಕು ಲಕ್ಷ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಪತ್ತೆಯಾಗುತ್ತಿದೆ. ಸುಮಾರು ನಾಲ್ಕೂವರೆ ಲಕ್ಷ ಮಹಿಳೆಯರು ಸ್ತನ ಕ್ಯಾನ್ಸರ್‌ನಿಂದ ಸಾಯುತ್ತಾರೆ. ಪ್ರತಿ ನಾಲ್ಕು ನಿಮಿಷಕ್ಕೆ ಒಬ್ಬ ಮಹಿಳೆ ಸ್ತನ ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದರೆ, ಪ್ರತಿ 13 ನಿಮಿಷಕ್ಕೆ ಒಬ್ಬ ಮಹಿಳೆ ಇದೇ ಕ್ಯಾನ್ಸರ್‌ನಿಂದಾಗಿ ಸಾಯುತ್ತಿದ್ದಾಳೆ. 2018ರ ಅಂಕಿ-ಅಂಶಗಳ ಪ್ರಕಾರಣ ದೇಶದಲ್ಲಿ 1,62,468 ಹೊಸ ರೋಗಿಗಳು ಮತ್ತು 87,090 ರೋಗಿಗಳು ಸ್ತನ ಕ್ಯಾನ್ಸರ್‌ನಿಂದಾದ ಸಾವುಗಳು ದಾಖಲಾಗಿವೆ. 2021ರ ಅಂಕಿ-ಅಂಶ ನಮ್ಮ ಹುಬ್ಬೇರಿಸುತ್ತವೆ. ಹೊಸ ಪ್ರಕರಣಗಳು 19 ಲಕ್ಷಕ್ಕೇರಿದರೆ, ಸಾವಿನ ಸಂಖ್ಯೆ 6.08 ಲಕ್ಷಕ್ಕೇರಿದೆ.

ಇದೆಲ್ಲ ಮಹಿಳೆ ಇಂದು ಮನೆ ಒಳಗೂ, ಹೊರಗೂ ಕೆಲಸ ನಿರ್ವಹಿಸುತ್ತಿರುವ ಪರಿಣಾಮವೂ ಆಗಿದೆ. ಒತ್ತಡ ಭರಿತ ಬದುಕಿನಿಂದ ಮಹಿಳೆಯರು ಆರೋಗ್ಯವನ್ನು ನಿರ್ಲಕ್ಷಿಸುತ್ತಿದ್ದಾರೆ. ಸ್ತನ ನ್ಯಾನ್ಸರ್‌ಗೆ ಸಾಕಷ್ಟು ಕಾರಣಗಳನ್ನು ಸಂಶೋಧನೆಗಳು ಪಟ್ಟಿ ಮಾಡಿದ್ದರೂ



ಮಾನಸಿಕ ಒತ್ತಡ ಕೂಡ ಪ್ರಮುಖ ಕಾರಣವಾಗುತ್ತಿದೆ. ಇಂಥ ಅಪಾಯಕಾರಿ ಸ್ತನಕ್ಯಾನ್ಸರ್‌ನಿಂದ ಹೊರಗಿರಲು ಮಾರ್ಗೋಪಾಯಗಳಿವೆ. ಅದು ಮನಸ್ಸಿಗೆ ಸಂಬಂಧಿಸಿದ್ದು ಕೂಡ. ಮಹಿಳೆ ಮಾನಸಿಕ ಒತ್ತಡವನ್ನು ನಿಭಾಯಿಸುವಿಕೆಯನ್ನು ಕರಗತ ಮಾಡಿಕೊಂಡಲ್ಲಿ ಸ್ತನ ಕ್ಯಾನ್ಸರ್‌ಅನ್ನು ದೂರವಿಡಬಹುದು. ಜೊತೆಗೆ ಸ್ತನ ಕ್ಯಾನ್ಸರ್‌ನಿಂದ ಹೆಚ್ಚುತ್ತಿರುವ ಸಾವಿನ ಪ್ರಮಾಣದಲ್ಲಿ ಭಯದ ಕಾರಣವೂ ಇದೆ. ಇಂಥ ಭಯದಿಂದ ಹೊರಗಿದ್ದು, ಸಂಕಷ್ಟವನ್ನು ಎದುರಿಸಲು ನಾವು ಮಾನಸಿಕವಾಗಿ ಗಟ್ಟಿಗೊಳ್ಳುವ ಅವಶ್ಯವಿದೆ.

ಹಾಗಾದರೆ ಮಾನಸಿಕ ಒತ್ತಡವನ್ನು ಹೇಗೆ ನಿಭಾಯಿಸುವುದು? ಹೇಗೆ ಮಾನಸಿಕ ಸ್ತಿಮಿತ ಕಾಯ್ದುಕೊಳ್ಳುವುದು? - ಇಂಥ ಪ್ರಶ್ನೆಗಳು ನಿಮ್ಮದಾಗಿದ್ದರೆ, ಉತ್ತರವಿರುವುದು ನಮ್ಮ ಪ್ರಾಚೀನ ಯೋಗದಲ್ಲಿ. ಮಹಿಳೆ ತಮ್ಮ ನಿತ್ಯದ ಜಂಜಡಗಳ ಜೊತೆಗೆ ಕನಿಷ್ಠ ಒಂದರ್ಧ ತಾಸು ಯೋಗಕ್ಕಾಗಿ ಮೀಸಲಿಟ್ಟರೆ ಮಾನಸಿಕ ಒತ್ತಡವನ್ನು ನಿಭಾಯಿಸುವ ಸಾಮರ್ಥ್ಯ ಹೊಂದಬಹುದು. ಆ ಯೋಗದಲ್ಲಿ ಸೂರ್ಯನಮಸ್ಕಾರ, ಪ್ರಾಣಾಯಾಮ, ಧ್ಯಾನ, ಗಾಯತ್ರೀಮುದ್ರೆಗಳಿರಲಿ. ಸೂರ್ಯನಮಸ್ಕಾರದಿಂದ ದೇಹದ ಎಲ್ಲ ಅಂಗಾಂಗಗಳಿಗೂ ವ್ಯಾಯಾಮ ಸಿಗಲಿದೆ. ಇದರಿಂದ ರಕ್ತಪರಿಚಲನೆ ಸರಾಗಗೊಂಡು ದೈಹಿಕ ಆರೋಗ್ಯವನ್ನು ಕಾಪಾಡಲಿದೆ. ಪ್ರಾಣಾಯಾಮ ನಮ್ಮ ಉಸಿರಾಟವನ್ನು ನಿಗ್ರಹಿಸುತ್ತ ಅಗತ್ಯ ಆಮ್ಲಜನಕವನ್ನು ಪೂರೈಸುತ್ತ ಮನಸ್ಸಿನ ಮೇಲೆ ಹಿಡಿತ ಸಾಧಿಸಲಿದೆ. ಗಾಯತ್ರೀಮುದ್ರೆಗಳು ಕ್ಯಾನ್ಸರ್ ಭಯವನ್ನು ದೂರಗೊಳಿಸಲಿದೆ. ಧ್ಯಾನವು ಮನಸ್ಸನ್ನು ನಿರ್ಮಲಗೊಳಿಸಿ ಸಮಚಿತ್ತ ಕಾಯ್ದುಕೊಳ್ಳುವಲ್ಲಿ ಸಹಕಾರಿಯಾಗಲಿದೆ. ಜೊತೆಗೆ ನಿತ್ಯವೂ ಹತ್ತು ನಿಮಿಷ ಬೆಳಗಿನ ಎಳೆಬಿಸಿಲಿನ ಸಖ್ಯ ಬೆಳೆಸಿ, ನಡಿಗೆ ರೂಢಿಸಿಕೊಳ್ಳಿ. ಇವಿಷ್ಟನ್ನು ನಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಮನಸ್ಸು ಸಹಜವಾಗಿ ಸಕಾರಾತ್ಮಕತೆಯತ್ತ ವಾಲಲಿದೆ. ಮನಸ್ಸು ಯಾವಾಗ ನಕಾರಾತ್ಮಕ ಚಿಂತನೆಗಳಿಂದ ಹೊರಬಂದು ಸಕಾರಾತ್ಮಕ ಚಿಂತನೆಯನ್ನು ಹೊಂದುವುದೋ ಅದರಿಂದ ಆತ್ಮವಿಶ್ವಾಸ ತನ್ನಿಂದತಾನೇ ವೃದ್ಧಿಯಾಗಲಿದೆ. ಆತ್ಮವಿಶ್ವಾಸ ವೃದ್ಧಿಯಾದಲ್ಲಿ ಸಂಕಷ್ಟಗಳನ್ನು ಎದುರಿಸುವ ಸಾಮರ್ಥ್ಯ ನಮ್ಮದಾಗಲಿದೆ.

ಅಧೈರ್ಯವನ್ನು ದೂರಗೊಳಿಸಿ ಸಂಕಷ್ಟವನ್ನು ಒಪ್ಪಿಕೊಂಡು, ಅದರಿಂದ ಸುಲಭವಾಗಿ ಹೊರಬರಲು ಅಂತಸ್ಥೈರ್ಯ ಸಿಗಲಿದೆ. ಕಾಯಿಲೆಗಳಿಗೂ ನಮ್ಮ ಮನಸ್ಸಿಗೂ ನಿಕಟವಾದ ಸಂಬಂಧವಿದೆ. ನಮ್ಮ ಮನಸ್ಸು ಇಂಥ ಸ್ತಿಮಿತ ಹಂತ ತಲುಪಿದಲ್ಲಿ ಕ್ಯಾನ್ಸರ್‌ನಂಥ ರೋಗಗಳಿಂದಲೂ ಹೊರಗುಳಿಯಬಹುದು.

ಇನ್ನಾಕೆ ತಡ. ನಾಳೆಯಿಂದ ಎಂಬ ಮಾತನ್ನು ಬದಿಗೊತ್ತಿ ಇಂದಿನಿಂದಲೇ ಯೋಗ ಜೀವನ ಶುರುಹಚ್ಚಿಕೊಳ್ಳಿ. ನಿಮ್ಮ ಮೈಮನಸ್ಸನ್ನು ಹರಿಯುವ ತಿಳಿನೀರಿನಂತೆ ತಿಳಿಯಾಗಿಸಿಕೊಳ್ಳಿ. ❖

ವೈದ್ಯರ ಮಾತು...

2030ರ ವೇಳೆಗೆ ಸ್ತನ ಕ್ಯಾನ್ಸರ್‌ನಿಂದ ಸಾವಿನ ಪ್ರಮಾಣ ಹೆಚ್ಚಾಗಲಿವೆ. ಸ್ತನ ಕ್ಯಾನ್ಸರ್‌ಅನ್ನು ಆರಂಭಿಕ ಹಂತದಲ್ಲೇ ಪತ್ತೆ ಹಚ್ಚುವುದರಿಂದ ರೋಗವನ್ನು ಗುಣಪಡಿಸಬಹುದು. ದೇಶದಲ್ಲಿ ಸ್ತನಕ್ಯಾನ್ಸರ್ ಪೀಡಿತ ಶೇ. 50ರಷ್ಟು ಮಹಿಳೆಯರು ಮಾತ್ರ ರೋಗ ಉಲ್ಬಣವಾದಾಗ ವೈದ್ಯರನ್ನು ಸಂಪರ್ಕಿಸುತ್ತಾರೆ. ಇದರಿಂದ ಕಾಯಿಲೆಯನ್ನು ಗುಣಪಡಿಸುವ ಪ್ರಮಾಣ ಕಡಿಮೆಯಾಗುತ್ತಿದೆ. ಆದ್ದರಿಂದ ಸ್ತನ ಕ್ಯಾನ್ಸರನ್ನು ಮೊದಲ ಹಂತದಲ್ಲೇ ಪತ್ತೆ ಹಚ್ಚಿ, ಚಿಕಿತ್ಸೆ ಪಡೆಯುವುದು ಅಗತ್ಯ.

ಡಾ. ವಿನಯ ಮುತ್ತಗಿ
ಎಚ್‌ಸಿಜಿ-ಎನ್‌ಎಂಆರ್ ಕ್ಯಾನ್ಸರ್ ಕ್ಯೂರ್ ಸೆಂಟರ್, ಹುಬ್ಬಳ್ಳಿ





❦ ಸುಭಾಷಿತ ❦
ಕತ್ತಲಿನ ನಡುವೆ ಬೆಳಕನ್ನು ಕಾಣುವಾತ ಆಶಾವಾದಿ.
ಹಿಗ್ಗನ್ನು ಅರಸುವವನು ನಿರಾಶಾವಾದಿ.
-ದ.ರಾ.ಬೇಂದ್ರೆ

ಪೊಲೀಸರಿಗೆ ಸಮವಸ್ತ್ರವೇ ಭೂಷಣ ಅನಗತ್ಯ ವಿವಾದಕ್ಕೆ ಆಸ್ಪದ ಬೇಡ

ಉಡುಪಿ ಜಿಲ್ಲೆಯ ಕಾಪು ಪೊಲೀಸ್ ಠಾಣೆ ಮತ್ತು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪೊಲೀಸರೆಲ್ಲರೂ ಕೇಸರಿ ಬಣ್ಣದ ದಿರಿಸು ಧರಿಸಿ ಆಯುಧಪೂಜೆ ನಡೆಸಿರುವುದು ಸಾರ್ವಜನಿಕ ವಲಯದಲ್ಲಿ ಹಲವು ಪ್ರಶ್ನೆಗಳು ಮೂಡುವಂತೆ ಮಾಡಿದೆ. ನಿರ್ದಿಷ್ಟ ಧರ್ಮವನ್ನು ಸಂಕೇತಿಸುವ ಕೇಸರಿ ಬಣ್ಣದ ದಿರಿಸು ಧರಿಸಿ ಠಾಣೆಯಲ್ಲಿ ಪೂಜೆ ನಡೆಸುವ ಮೂಲಕ ಪೊಲೀಸರು ತಮ್ಮ ನಿಷ್ಪಕ್ಷಪಾತ ಕರ್ತವ್ಯ ನಿರ್ವಹಣೆಯ ಕುರಿತು ಸಾರ್ವಜನಿಕರಲ್ಲಿ ಅನುಮಾನ ಹುಟ್ಟುವಂತೆ ಮಾಡಿದ್ದಾರೆ. ರಾಜ್ಯದ ಬೇರೆ ಹಲವು ಪೊಲೀಸ್ ಠಾಣೆಗಳಲ್ಲಿಯೂ ಪೊಲೀಸರು ತಿಳಿಗುಲಾಬಿ, ಹಸಿರು, ಬಿಳಿ ಮುಂತಾದ ಬಣ್ಣಗಳ ಉಡುಪನ್ನು ಧರಿಸಿ ಆಯುಧಪೂಜೆ ಮಾಡಿರುವುದು ಮತ್ತು ಠಾಣೆಗಳ ಮುಂದೆ ನಿಂತು ಫೋಟೊಗಳನ್ನು ಕ್ಲಿಕ್ಕಿಸಿ ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೊಂಡಿರುವುದೂ ಕಂಡುಬಂದಿದೆ. ಖಾಕಿ ಪಡೆಯ ಕೇಸರಿ ದಿರಿಸಿನ ಕುರಿತು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಸಾಮಾಜಿಕ ವಲಯದ ಹಲವು ಗಣ್ಯರು ತೀವ್ರ ಖಂಡನೆ ವ್ಯಕ್ತಪಡಿಸಿದ್ದಾರೆ. ಆಡಳಿತಾರೂಢ ಬಿಜೆಪಿ ನಾಯಕರು 'ಇದರಲ್ಲಿ ತಪ್ಪೇನಿಲ್ಲ' ಎಂದು ಸಮರ್ಥಿಸಿಕೊಂಡಿದ್ದಾರೆ. ಆಯುಧ ಪೂಜೆಯಂದು ಹಲವು ಪೊಲೀಸ್ ಠಾಣೆಗಳಲ್ಲಿ ಶಸ್ತ್ರಾಸ್ತ್ರಗಳಿಗೆ ಪೂಜೆ ನಡೆಸುವ ಪದ್ಧತಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ ಎನ್ನುವ ಮಾತಿನಲ್ಲಿ ನಿಜಾಂಶ ಇದೆ. ಆದರೆ ಆ ಸಂದರ್ಭದಲ್ಲಿ ಸಾಮೂಹಿಕವಾಗಿ ಠಾಣೆಯ ಎಲ್ಲ ಪೊಲೀಸರೂ ಕೇಸರಿ ಉಡುಪು ಧರಿಸುತ್ತಿರಲಿಲ್ಲ, ಅದನ್ನು ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೊಂಡಿದ್ದಾಗಲೇ ವಿವಾದವಾದಂತಿಲ್ಲ. ಹಾಗಾಗಿ, ಈ ಕುರಿತು ಈ ಹಿಂದೆ ವಿವಾದ ಉಂಟಾಗಿರಲಿಲ್ಲ. ಕೇಸರಿ ಬಣ್ಣವನ್ನು ತನ್ನ ಅಸ್ಮಿತೆಯ ರಾಜಕಾರಣಕ್ಕೆ ಬಿಜೆಪಿ ಬಳಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಅದಕ್ಕೆ ರಾಜಕೀಯ ಬಣ್ಣ ಬರುವುದರಲ್ಲಿ ಅನುಮಾನ ಇಲ್ಲ.



ಜನರ ನಂಬಿಕೆ, ವಿಶ್ವಾಸಕ್ಕೆ ಕುಂದುಂಟಾಗುವ ನಡವಳಿಕೆ ಸರ್ವಥಾ ಸಲ್ಲದು

ರಾಜಕೀಯ ಪಕ್ಷಗಳ ಪರ- ವಿರೋಧದ ವಾದಗಳು ಏನೇ ಇರಲಿ, ಪೊಲೀಸ್ ಇಲಾಖೆಯು ಇಂತಹ ಅನಗತ್ಯ ವಿವಾದಗಳನ್ನು ಮೈಮೇಲೆ ಎಳೆದುಕೊಳ್ಳುವುದರಿಂದ ದೂರ ಇರಬೇಕಾದುದು ಅಗತ್ಯ. ಪ್ರತೀ ವಿಷಯದಲ್ಲಿ ಅನಗತ್ಯವಾದ ಧರ್ಮ ಮತ್ತು ರಾಜಕೀಯ ನುಸುಳುತ್ತಿರುವ ಇಂದಿನ ಸಂಕೀರ್ಣ ಸನ್ನಿವೇಶದಲ್ಲಿ ಪೊಲೀಸ್ ಇಲಾಖೆ ತನ್ನ ನಿಷ್ಪಕ್ಷಪಾತ ನಡವಳಿಕೆ ಕುರಿತು ಅನುಮಾನ ಬಾರದಂತೆ ನಡೆದುಕೊಳ್ಳಬೇಕಿದೆ. ರಾಜ್ಯ ಸರ್ಕಾರವೇ ಅಂಗೀಕರಿಸಿರುವ ಪೊಲೀಸ್ ನೀತಿಸಂಹಿತೆಯಲ್ಲಿ ಧಾರ್ಮಿಕ ವಿಚಾರಗಳು ಬಂದಾಗ ಪೊಲೀಸರ ನಡೆ ಹೇಗಿರಬೇಕು ಎನ್ನುವ ವಿವರಗಳಿವೆ. 'ಪೊಲೀಸ್ ಅಧಿಕಾರಿಗಳು ತಮ್ಮ ವೈಯಕ್ತಿಕ ಜೀವನದಲ್ಲಿ ಯಾವುದೇ ಮತವನ್ನು ಅನುಸರಿಸಲು ಸ್ವತಂತ್ರರಾಗಿದ್ದರೂ ಕರ್ತವ್ಯದಲ್ಲಿ ಯಾವುದೇ ಮತದವರ ಪಕ್ಷಪಾತವಾಗಲಿ ಸಹಾಯ ಮಾಡಿದರೆಂಬ ಭಾವನೆ ಬಾರದಂತೆ ವರ್ತಿಸಬೇಕು. ಕರ್ತವ್ಯದಲ್ಲಿರುವ ಪೊಲೀಸ್ ಸಿಬ್ಬಂದಿಯು ಧರ್ಮ, ಜಾತಿ, ಭಾಷೆ ಮುಂತಾದ ವಿಚಾರಗಳಲ್ಲಿ ನಿರ್ಲಿಪ್ತರಾಗಿರಬೇಕು' ಎಂದು ಪೊಲೀಸ್ ನೀತಿಸಂಹಿತೆ ಹೇಳುತ್ತದೆ. ಪೊಲೀಸರು ವೈಯಕ್ತಿಕವಾಗಿ ಮನೆಗಳಲ್ಲಿ ತಮ್ಮ ಧರ್ಮ ಆಚರಿಸುವುದಕ್ಕಾಗಲೀ, ತಮ್ಮ ಧರ್ಮದ ಸಾಮೂಹಿಕ ಶ್ರದ್ಧಾಕೇಂದ್ರಗಳಲ್ಲಿ ಪೂಜೆ ಸಲ್ಲಿಸುವುದಕ್ಕಾಗಲೀ ಯಾರದೂ ಆಕ್ಷೇಪ ಇರಲಾರದು. ಅದಕ್ಕೆ ನಮ್ಮ ಸಂವಿಧಾನದಲ್ಲಿರುವ ಧಾರ್ಮಿಕ ಸ್ವಾತಂತ್ರ್ಯದ ವಿಧಿಯೇ ಅವಕಾಶ ಮಾಡಿಕೊಡುತ್ತದೆ. ಆದರೆ ಕಾನೂನು ಪಾಲನೆಯ ಕೇಂದ್ರವಾದ ಪೊಲೀಸ್ ಠಾಣೆಗಳಲ್ಲಿ ಈ ರೀತಿ ಧಾರ್ಮಿಕ ಆಚರಣೆಗಳನ್ನು ಸಾಮೂಹಿಕವಾಗಿ, ಪ್ರದರ್ಶನಸ್ವರೂಪದೊಂದಿಗೆ ಆಚರಿಸುವುದು ಸಂವಿಧಾನ ವಿರೋಧಿ ನಡೆ. ಇವತ್ತು ಬಣ್ಣಗಳು ಕೂಡಾ ವಿವಿಧ ಧರ್ಮಗಳ, ರಾಜಕೀಯ ಪಕ್ಷಗಳ ಸಂಕೇತವಾಗಿ ಬಿಂಬಿತವಾಗುತ್ತಿವೆ. ಇಂತಹ ಸನ್ನಿವೇಶದಲ್ಲಿ ಪೊಲೀಸ್ ಕಾಯ್ದೆಯ ನಿಯಮಗಳನ್ನು ಯಾವುದೇ ಅನುಮಾನಕ್ಕೆ ಎಡೆಯಿಲ್ಲದಂತೆ ಚಾಚೂ ತಪ್ಪದೆ ಪಾಲಿಸುವತ್ತ ಪೊಲೀಸರು ಗಮನಹರಿಸಬೇಕು. ಸಂವಿಧಾನದ ಮೌಲ್ಯಗಳಿಗೆ ಅಪಚಾರವಾಗದಂತೆ ಎಚ್ಚರ ವಹಿಸಬೇಕು. ಪೊಲೀಸ್ ಠಾಣೆಯಲ್ಲಿ ಧರ್ಮಾತೀತ ಮತ್ತು ಜಾತ್ಯತೀತ ಪರಿಸರ ಇರುವಂತೆ ನೋಡಿಕೊಳ್ಳುವುದು ಹಿರಿಯ ಅಧಿಕಾರಿಗಳ ಕರ್ತವ್ಯವೂ ಹೌದು. ಇಂತಹ ಪರಿಸರ ಇರುವುದು ಮಾತ್ರವಲ್ಲ, ಇದೆ ಎಂಬುದು ಎಲ್ಲರಿಗೆ ಮನವರಿಕೆಯಾಗುವಂತೆ ನೋಡಿಕೊಳ್ಳಬೇಕು. ಪೊಲೀಸ್ ಠಾಣೆಯು ಯಾವುದೋ ಒಂದು ಧರ್ಮಕ್ಕೆ, ಒಂದು ಜಾತಿಗೆ ಅಥವಾ ಒಂದು ಪಕ್ಷಕ್ಕೆ ಸೇರಿದ್ದು ಎಂಬ ಅನುಮಾನ ಕೂಡ ಜನರಿಗೆ ಬಾರದಂತೆ ನೋಡಿಕೊಳ್ಳುವುದು ಪೊಲೀಸರ ಕರ್ತವ್ಯದ ಭಾಗವೇ ಆಗಿದೆ.

ರಾಜಕೀಯ ಪಕ್ಷಗಳ ತಂತ್ರಗಾರಿಕೆಗಳಿಗೆ ಪೊಲೀಸ್ ವ್ಯವಸ್ಥೆಯು ಪರೋಕ್ಷ ದಾಳವಾಗದಂತೆ ನೋಡಿಕೊಳ್ಳುವ ಮತ್ತು ವ್ಯವಸ್ಥೆಯ ಪಾವಿತ್ರ್ಯವನ್ನು ಕಾಪಾಡುವ ಕಡೆಗೆ ಸಮಾಜದಲ್ಲಿರುವ ಎಲ್ಲರೂ ಗಮನ ಹರಿಸಬೇಕು. ಆಯುಧಪೂಜೆ ಒಂದು ಧಾರ್ಮಿಕ ಆಚರಣೆ ಎನ್ನುವ ಹಿನ್ನೆಲೆಯಲ್ಲಿ ಪೊಲೀಸ್ ಠಾಣೆಗಳಲ್ಲಿ ಶಸ್ತ್ರ ಪೂಜೆ ಮಾಡಲೇಬೇಕೆಂದಿದ್ದರೆ ಪೊಲೀಸರು ತಮ್ಮ ಸಮವಸ್ತ್ರದಲ್ಲೇ ಮಾಡಬಹುದಿತ್ತು? ಪೊಲೀಸರಿಗೆ ಅವರ ಸಮವಸ್ತ್ರಕ್ಕಿಂತ ಪವಿತ್ರವಾದದ್ದು ಇನ್ನೊಂದಿಲ್ಲ. ಠಾಣೆಗಳಲ್ಲಿ ಬಣ್ಣ ಬಣ್ಣದ ಬಟ್ಟೆಗಳನ್ನು ಧರಿಸಿ ಫೋಟೊ ತೆಗೆಸಿಕೊಂಡು ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೊಳ್ಳುವುದು ಪೊಲೀಸರ ಕುರಿತು ಸಾರ್ವಜನಿಕರಲ್ಲಿ ಇರುವ ಸದ್ಭಾವನೆಗೂ ಭಂಗ ತರಲಿದೆ ಎನ್ನುವುದು ಆಡಳಿತ ನಡೆಸುವವರಿಗೂ ಅರ್ಥವಾಗಬೇಕು. ಒಂದು ಧರ್ಮಕ್ಕೆ ಅಥವಾ ಪಕ್ಷಕ್ಕೆ ನಿಷ್ಠರಾಗಿದ್ದಾರೆ ಎಂದು ಬಿಂಬಿತವಾಗುವ ಪೊಲೀಸರನ್ನು ಇತರರು ನಂಬುವುದು ಹೇಗೆ ಸಾಧ್ಯ? ಇಂತಹ ಪೊಲೀಸರಿಂದ ನ್ಯಾಯ ಸಿಕ್ಕೀತು ಎಂಬ ಭಾವನೆ ಜನರಿಗೆ ಹೇಗೆ ಬರುತ್ತದೆ? ಪೊಲೀಸರ ಇಂತಹ ನಡವಳಿಕೆಯು ಇಲಾಖೆಯ ನಿಷ್ಪಕ್ಷಪಾತ ಸೇವೆ ಮತ್ತು ಕರ್ತವ್ಯದ ತಳಪಾಯಕ್ಕೆ ಕೊಡಲಿ ಪೆಟ್ಟು ಕೊಡುತ್ತದೆ.

ದಿನದ ಟ್ವೀಟ್




ಯೋಜನೆ ವಿಸ್ತರಿಸಲಿ

ಕೇಂದ್ರ ಪ್ರವಾಸೋದ್ಯಮ ಸಚಿವಾಲಯವು ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ, ಆಂಧ್ರಪ್ರದೇಶ ಹಾಗೂ ಗುಜರಾತ್ ರಾಜ್ಯಗಳ ವ್ಯಾಪ್ತಿಯಲ್ಲಿ ಬೌದ್ಧರ ಪವಿತ್ರ ಸ್ಥಳಗಳನ್ನು ಒಳಗೊಂಡ ಪ್ರವಾಸಿ ವಲಯವನ್ನು ರಚಿಸಿದೆ. ಒಡಿಶಾ, ಪಶ್ಚಿಮ ಬಂಗಾಳ, ತೆಲಂಗಾಣ, ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು ಹಾಗೂ ಕೇರಳ ರಾಜ್ಯಗಳಲ್ಲೂ ಬೌದ್ಧ ಧರ್ಮದ ಶ್ರೀಮಂತ ಪರಂಪರೆಯನ್ನು ಸಾರುವ ಬಹಳಷ್ಟು ಸ್ಥಳಗಳಿವೆ. ಅವು ಕೂಡ ಈ ವಲಯದಲ್ಲಿ ಸೇರಲಿ. ಈ ವಿಷಯದಲ್ಲಿ ಹಿಮಾಚಲ ಪ್ರದೇಶ, ಲಡಾಖ್, ಜಮ್ಮು ಮತ್ತು ಕಾಶ್ಮೀರವನ್ನೂ ಮರೆಯುವಂತಿಲ್ಲ.

ಜೈರಾಮ್ ರಮೇಶ್, ರಾಜ್ಯಸಭಾ ಸದಸ್ಯ, ಕಾಂಗ್ರೆಸ್ ಮುಖಂಡ

ಕಿಡಿನುಡಿ



ಚಾಮುಂಡೇಶ್ವರಿ ಕ್ಷೇತ್ರದ ಜನರು ಸಿದ್ದರಾಮಯ್ಯ ಅವರನ್ನು ಸೋಲಿಸಿ, ಕೆಆರ್‌ಎಸ್ ಡ್ಯಾಂಗೆ ಒಗೆದಿದ್ದಾರೆ ಎಂದು ಹಾನಗಲ್ ಉಪಚುನಾವಣೆಯ ಬಿಜೆಪಿ ಅಭ್ಯರ್ಥಿ ಶಿವರಾಜ ಸಜ್ಜನರ ಹೇಳಿಕೆ ನೀಡಿದ್ದಾರೆ. ದಕ್ಷಿಣ ಭಾರತದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದ ಬಿ.ಎಸ್.ಯಡಿಯೂರಪ್ಪ ಅವರನ್ನು ನೀವು ಯಾವ ಕೆರೆ, ಬಾವಿ, ಸಮುದ್ರಕ್ಕೆ ಹಾಕಿದ್ದೀರಿ ಎಂಬುದನ್ನು ಹೇಳಿ.

ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

25 ವರ್ಷಗಳ ಹಿಂದೆ

ಶನಿವಾರ, 19-10-1996

• ಸುಂದರಿಯರ ಸ್ವಾಗತಕ್ಕೆ ವಿಂಡ್ಸರ್ ತಯಾರಿ

ಬೆಂಗಳೂರು, ಅ. 18– ವಿಶ್ವಸುಂದರಿ ಸ್ಪರ್ಧೆಯ ದಿನಗಳು ಹತ್ತಿರವಾಗುತ್ತಿರುವಂತೆ ಪ್ರತಿಷ್ಠಿತ ಉತ್ಸವಕ್ಕೆ ಇಡೀ ಬೆಂಗಳೂರು ಸಜ್ಜಾಗುತ್ತಿದೆ.

ವಿಶ್ವದ 90 ದೇಶಗಳಿಂದ ಆಗಮಿಸಲಿರುವ ಸುಂದರಿಯರಿಗೆ ಆದರ– ಆತಿಥ್ಯಕ್ಕೆ ನಗರದ ವಿಂಡ್ಸರ್ ಮ್ಯಾನರ್ ಹೋಟೆಲ್ ಸಜ್ಜಾಗುತ್ತಿದೆ.

ವಿಶ್ವಸುಂದರಿಯರು ತಮ್ಮಲ್ಲಿ ತಂಗುವರೆಂದು ಜುಲೈ ತಿಂಗಳಲ್ಲಿ ಸುದ್ದಿ ತಿಳಿಯುತ್ತಿದ್ದಂತೆಯೇ ಎಲ್ಲ ರೀತಿಯಲ್ಲೂ ಸಜ್ಜುಗೊಳಿಸಲು ಹೋಟೆಲ್‌ನ ಆಡಳಿತ ವರ್ಗ ಕ್ರಮ ಕೈಗೊಂಡಿದೆ ಎಂದು ಹೋಟೆಲ್‌ನ ಹಿರಿಯ ಅಧಿಕಾರಿ ಸುರುಚಿ ರಾಯ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಹೋಟೆಲ್‌ನ ವಿಶ್ರಾಂತಿ ಕೋಣೆಗಳನ್ನು ಯುದ್ಧೋಪಾದಿಯಲ್ಲಿ ಸಿದ್ಧಗೊಳಿಸುವ ಕ್ರಿಯೆ ಆರಂಭವಾಗಿದ್ದು, ಅವುಗಳಿಗೆ ಮನಕ್ಕೆ ಆಹ್ಲಾದ ನೀಡುವ ಆಕರ್ಷಕ ಬಣ್ಣ ಬಳಿಯಲಾಗಿದೆ. ಸದಾ ಮಿಂಚುವ ತಾಮ್ರದ ಕಲಾತ್ಮಕ ವಸ್ತುಗಳಿಗೆ ಪಾಲಿಷ್ ಮಾಡಿ ಮತ್ತಷ್ಟು ಮಿಂಚುವಂತೆ ಮಾಡಲಾಗಿದೆ. ಆಕರ್ಷಕ ತೆಳು ಬಣ್ಣದ ಪರದೆಗಳನ್ನು ಜಾರಿಬಿಡಲಾಗಿದೆ. ಹೊಸ ಚಿತ್ರಗಳನ್ನು ತೂಗು ಹಾಕಲಾಗಿದೆ ಎಂದು ಸಿದ್ಧತೆಗಳ ಬಗ್ಗೆ ಅವರು ವಿವರಿಸಿದರು.

ಹೋಟೆಲ್‌ನ ವಿಶಾಲವಾದ ಮುಂಭಾಗದ ಹಜಾರದಲ್ಲಿರುವ ಅಮೃತಶಿಲೆಯ ಗೋಡೆಗಳ ಅಂದವನ್ನು ಮತ್ತಷ್ಟು ಹೆಚ್ಚಿಸಲು ಅಮೃತಶಿಲೆಯನ್ನು ಸ್ವಚ್ಛಗೊಳಿಸಲು ಏಳು ಲಕ್ಷ ರೂಪಾಯಿ ಬೆಲೆಯ ಉಪಕರಣವೊಂದನ್ನು ಖರೀದಿಸಲಾಗಿದೆ ಎಂದು ಅವರು ಹೇಳಿದರು.

• ದೆಹಲಿ ವಿಜ್ಞಾನ ಭವನದಲ್ಲಿ ನರಸಿಂಹ ರಾವ್ ವಿಚಾರಣೆ

ನವದೆಹಲಿ, ಅ. 18 (ಯುಎನ್‌ಐ)– ಮಾಜಿ ಪ್ರಧಾನಿ ಪಿ.ವಿ. ನರಸಿಂಹ ರಾವ್ ಅವರು ಭಾಗಿಯಾಗಿರುವ ಪ್ರಕರಣಗಳ ವಿಚಾರಣೆಯು ವಿಜ್ಞಾನ ಭವನದ ಕಟ್ಟಡದಲ್ಲಿ ನಡೆಯಲಿದೆ ಎಂದು ದೆಹಲಿ ಹೈಕೋರ್ಟ್ ಇಂದು ಪ್ರಕಟಿಸಿದೆ.

ರಾವ್ ವಿಚಾರಣೆ ಸ್ಥಳದ ಬಗ್ಗೆ ಕೋರ್ಟ್ ರಿಜಿಸ್ಟ್ರಾರ್ ಇಂದು ಸಂಜೆ ಅಧಿಸೂಚನೆ ಹೊರಡಿಸಿದ್ದಾರೆ. ಅಕ್ಟೋಬರ್ 11ರಂದು ಸುಪ್ರೀಂ ಕೋರ್ಟ್ ನೀಡಿದ ಆದೇಶದ ಅನ್ವಯ, ರಾವ್ ಅವರ ವಿಚಾರಣೆಯ ಸ್ಥಳವನ್ನು ನಿರ್ಧರಿಸುವುದನ್ನು ದೆಹಲಿ ಪೊಲೀಸ್ ಕಮಿಷನರ್ ಅವರ ಆಯ್ಕೆಗೆ ಬಿಡಲಾಗಿತ್ತು.

ಅರ್ಥಪೂರ್ಣ ಚರ್ಚೆಗೆ ಶಕ್ತಿ ತುಂಬಲು ಕೈಜೋಡಿಸುವುದು ಇಂದಿನ ತುರ್ತು ಅಗತ್ಯ

ಸಾರ್ವಜನಿಕ ಚರ್ಚೆ: ಪ್ರಸ್ತುತತೆ, ಗುಣಲಕ್ಷಣ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಧರ್ಮ, ಜಾತಿ, ರಾಷ್ಟ್ರ ಇವು ಅಲ್ಲಿನ ಧರ್ಮೀಯರು, ಜಾತಿಯವರು, ರಾಷ್ಟ್ರೀಯರು ಸಬಲರಾಗಿದ್ದರೆ ಮಾತ್ರ ಉಳಿಯುತ್ತವೆ. ಸಬಲೀಕರಣ ಎನ್ನುವುದು ಸೈನಿಕ ಸಬಲೀಕರಣ ಮಾತ್ರವೇ ಆಗಿರುವುದಿಲ್ಲ. ಸೈನಿಕ ಸಬಲೀಕರಣ ಕೂಡ ಆರ್ಥಿಕ ಸಬಲೀಕರಣದ ಮೂಲಕವೇ ಸಾಧ್ಯವಾಗುತ್ತದೆ. ಆಧುನಿಕ ಯುದ್ಧಗಳು ಆರ್ಥಿಕ ಯುದ್ಧಗಳ ರೂಪದಲ್ಲಿಯೂ ಇರುತ್ತವೆ.

ಆರ್ಥಿಕ ಸಬಲೀಕರಣವು ಸ್ವತಂತ್ರವಾಗಿರುವುದಿಲ್ಲ. ಸಾಂಸ್ಕೃತಿಕ ಸಬಲೀಕರಣ, ಆರೋಗ್ಯ ಸಬಲೀಕರಣ ಮತ್ತು ಸಾಮಾಜಿಕ ಸಬಲೀಕರಣದ ಫಲವಾಗಿಯೇ ಆರ್ಥಿಕ ಸಬಲೀಕರಣ ಸಾಧ್ಯವಾಗುತ್ತದೆ. ಇವೆಲ್ಲವನ್ನೂ ಸಮಗ್ರವಾಗಿ ಸಾಧಿಸುವುದು ಶಿಕ್ಷಣ. ಶಿಕ್ಷಣವು ವೈಚಾರಿಕವಾಗಿ ಸಶಕ್ತವಾಗಿದ್ದಾಗ ಇವೆಲ್ಲವೂ ಸಾಧ್ಯವಾಗುತ್ತವೆ.

ಕರ್ನಾಟಕದಲ್ಲಿ ಇದೀಗ ಉನ್ನತ ಶಿಕ್ಷಣದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ- 2020 ಜಾರಿಯಾಗಿದೆ. ನಾಲ್ಕು ವರ್ಷಗಳ ಅವಧಿಯ ಆನರ್ಸ್ ಪದವಿ ತರಗತಿಗೆ ಚಾಲನೆ ನೀಡಲಾಗಿದೆ. ಆದರೆ, ಮೊದಲನೆಯ ವರ್ಷದ ಪದವಿ ತರಗತಿಗಳ ಪ್ರಾರಂಭವೇ ಅಸ್ಪಷ್ಟವಾಗಿದೆ. ಪ್ರಥಮ ಪದವಿಯ ಪಠ್ಯಕ್ರಮ, ಪಠ್ಯವಸ್ತು ಏನೆಂಬುದೇ ಇನ್ನೂ ಸ್ಪಷ್ಟವಿಲ್ಲ.

ಇದು, ಕೊರೊನಾದಿಂದಾಗಿ ಆಗಿರುವ ಸಮಸ್ಯೆಯಲ್ಲ. ಸಿದ್ಧತೆ ಇಲ್ಲದ ಕಾರಣಕ್ಕೆ ಆಗಿರುವ ಸಮಸ್ಯೆ. ಎಲ್ಲ ಸಮಸ್ಯೆಗಳಿಗೂ ಪರಿಹಾರವನ್ನು ಒದಗಿಸಬಹುದಾದ ಶಕ್ತಿ ಇರುವುದು ಶಿಕ್ಷಣ ಕ್ಷೇತ್ರಕ್ಕೆ. ಹೊಸ ಶಿಕ್ಷಣ ನೀತಿಯು ನೀತಿಯಾಗಿ ಬಹಳ ಚೆನ್ನಾಗಿದೆ. ಆದರೆ ಅದರ ವಾಸ್ತವಿಕ ಅನುಷ್ಠಾನವೇ ಸಂಕಷ್ಟಕ್ಕೆ ಸಿಲುಕಿದರೆ ಸಮಸ್ಯೆಯನ್ನು ಪರಿಹರಿಸಬೇಕಾದ ಶಿಕ್ಷಣವೇ ದೊಡ್ಡ ಸಮಸ್ಯೆಯಾಗಿ ಕುಳಿತುಕೊಳ್ಳುತ್ತದೆ.

ಶಿಕ್ಷಣ, ಆರ್ಥಿಕ ಬೆಳವಣಿಗೆ, ಬೆಲೆ ಏರಿಕೆ, ನಿರುದ್ಯೋಗ, ಸಾರಿಗೆ ಮತ್ತು ಸಂಪರ್ಕ, ಮೂಲ ಸೌಕರ್ಯ- ಇವೆಲ್ಲ ಚರ್ಚೆ ಆಗಬೇಕಾದ ಮಹತ್ವದ ವಿಷಯಗಳು. ಚರ್ಚೆ ಆಗುತ್ತಲೂ ಇದೆ. ಆದರೆ ಆ ಚರ್ಚೆ ಸಾರ್ವಜನಿಕ ಜೀವನವನ್ನು ಪ್ರಭಾವಿಸಬಲ್ಲಷ್ಟು ಸಮರ್ಥವಾಗಿ ಆಗುತ್ತಿಲ್ಲ.

ಸಾರ್ವಜನಿಕ ಜೀವನವನ್ನು ಪ್ರಭಾವಿಸುತ್ತಿರುವ ಚರ್ಚೆಯು ಅಸಹಿಷ್ಣುತೆಯ ಪ್ರತಿಪಾದನೆಯಾಗಿ ನಡೆಯುತ್ತಿರುವುದು ದುರಂತ. ಪರಸ್ಪರ ವಿರೋಧಿ ಬಣಗಳು ಎರಡು ಸಮುದಾಯಗಳ ಮೇಲೆ ದ್ವೇಷದ ಮಾತುಗಳನ್ನು ಪ್ರಚುರಪಡಿಸುತ್ತಿರುವುದು ಮತ್ತು ಉಳಿದವರೆಲ್ಲರೂ ಬೇಕಾಗಿಯೋ ಬೇಡದೆಯೋ ಅದರಿಂದ ಪ್ರಭಾವಿತರಾಗುತ್ತಿರುವುದು ಒಟ್ಟೂ ರಾಷ್ಟ್ರದ ಹಿತದೃಷ್ಟಿಯಿಂದ ಅಹಿತಕಾರಕ ಬೆಳವಣಿಗೆಯಾಗಿದೆ.

ಸಮುದಾಯ ಅಸಹನೆಗೆ ಬಲಿಯಾಗಿ ಜಗತ್ತಿನ ಕೆಲವು ದೇಶಗಳೇ ನಶಿಸಿವೆ. ಕೆಲವು ನಾಗರಿಕತೆಗಳೇ ಅಳಿದು ಹೋಗಿವೆ. ದೇಶ ವಿಭಜನೆಯಾದ ನಂತರವೂ ಭಾರತದ ಮೇಲೆ ದ್ವೇಷವನ್ನು ಸಾಧಿಸುತ್ತಾ ಹೊರಟ ಪಾಕಿಸ್ತಾನಕ್ಕೆ ಆರ್ಥಿಕ, ಸಾಮಾಜಿಕ, ವೈಜ್ಞಾನಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಭಾರತದ ರೀತಿಯಲ್ಲಿ ಅಭಿವೃದ್ಧಿಯಾಗಲು ಸಾಧ್ಯವಾಗಲಿಲ್ಲ. ಇನ್ನು ಭಾರತವೂ ಇದೇ ಹಾದಿಯನ್ನು ಹಿಡಿದರೆ ಭಾರತಕ್ಕೂ ಅಭಿವೃದ್ಧಿಯ ಬಾಗಿಲುಗಳು ಮುಚ್ಚುತ್ತವೆ. ಯಾವಾಗಲೂ ವಿರೋಧಿ ಸಮುದಾಯವನ್ನು ಹಣಿಯುವುದು ಹೇಗೆ ಎನ್ನುವುದೇ ಚಿಂತನೆಯಾದರೆ ತನ್ನನ್ನು ತಾನು ಅಭಿವೃದ್ಧಿಪಡಿಸಿಕೊಳ್ಳುವುದು ಹೇಗೆ ಎಂಬ ಚಿಂತನೆಯೇ ಹೊರಟು ಹೋಗುತ್ತದೆ.

ಈ ಅಸಹಿಷ್ಣುತಾ ಚಿಂತನೆಗೆ ಇನ್ನೊಂದು ರೂಪವಿದೆ. ರಾಷ್ಟ್ರೀಯ ನಾಯಕರ ಬಗ್ಗೆ ತಪ್ಪನ್ನು ಹುಡುಕಿ ಪ್ರಚುರಪಡಿಸುವುದು ಮತ್ತು ಸುಳ್ಳುಗಳನ್ನು ಪ್ರಚುರಪಡಿಸುವುದು. ಟೀಕೆ ಎರಡು ರೀತಿಯಲ್ಲಿ ಇರುತ್ತದೆ. ವೈಚಾರಿಕ ತಳಹದಿ ಇರುವ ಟೀಕೆಗಳು. ಇಂತಹ ಟೀಕೆಗಳನ್ನು ಸ್ವೀಕರಿಸಬೇಕು. ಎರಡನೆಯದು, ಧನಾತ್ಮಕ ವರ್ಚಸ್ಸನ್ನು ಋಣಾತ್ಮಕ ವರ್ಚಸ್ಸಾಗಿ ಪರಿವರ್ತಿಸುವುದಕ್ಕಾಗಿ ದೋಷವನ್ನು ಕಂಡುಹಿಡಿದು ಮಾಡುವ ಟೀಕೆಗಳು. ಈ ಟೀಕೆಗಳು ಪರಿಗಣನೆಗೆ ಅನರ್ಹ. ಉದಾಹರಣೆಗೆ, ಗಾಂಧೀಜಿಯ ಮೇಲಿನ ಟೀಕೆಗಳು, ಜವಾಹರಲಾಲ್ ನೆಹರೂ ಅವರ ಕುರಿತ ಟೀಕೆಗಳು, ಸಾವರ್ಕರ್ ಅವರ ಮೇಲಿನ ಟೀಕೆಗಳು ಎಲ್ಲ ಈ ಮಾದರಿಯವು.

ಸ್ವತಂತ್ರ ಭಾರತದ ಮೊದಲ ರಾಷ್ಟ್ರೀಯ ಬಜೆಟ್ ₹178 ಕೋಟಿ! ಅಷ್ಟು ಸಣ್ಣ ಬಜೆಟ್‌ನಲ್ಲಿ ಇಡೀ ದೇಶವನ್ನು ನೆಹರೂ ಅವರು ಮುನ್ನಡೆಸಿದ್ದಾರೆ. ಸಾವರ್ಕರ್ ಭಾರತದ ಸ್ವಾತಂತ್ರ್ಯಕ್ಕಾಗಿ ಕಠಿಣ ಕಾರಾಗೃಹ ವಾಸಕ್ಕೆ ಒಳಗಾದವರಾಗಿದ್ದರು. ಗಾಂಧೀಜಿಯ ಮೇಲಂತೂ ಎಡೆಬಿಡದ ಸುಳ್ಳುಗಳು ಪ್ರಚಾರವಾಗುತ್ತಿವೆ. ಇತ್ತೀಚೆಗೆ 'ಚರಕದಿಂದ ನೂಲು ಬರುತ್ತದೆ, ಸ್ವಾತಂತ್ರ್ಯ ಬರುವುದಿಲ್ಲ' ಎಂಬ ವಿಚಾರ ವೇಗವಾಗಿ ಹರಡುತ್ತಿತ್ತು. ಇತಿಹಾಸದ ಅರಿವಿಲ್ಲದವರಿಗೆ ಇದೆಲ್ಲ ಸುಲಭ. ಆದರೆ ಚರಕದ ನೂಲಿನಿಂದಲೇ ಸ್ವಾತಂತ್ರ್ಯವೂ ಬಂತು. ಏಕೆಂದರೆ ಬ್ರಿಟಿಷರಿಗೆ ಅತ್ಯಧಿಕ ಆದಾಯ ಕೊಡುತ್ತಿದ್ದುದು ಜವಳಿ ವ್ಯಾಪಾರ. ಚರಕದಿಂದ ನೂಲು ತೆಗೆದು ಬಟ್ಟೆ ಮಾಡಿ ಧರಿಸುವ ಮೂಲಕ ಬ್ರಿಟಿಷರ ಬಟ್ಟೆ ವ್ಯಾಪಾರ ಬಿದ್ದು ಹೋಗುವ ಹಾಗೆ ಗಾಂಧೀಜಿ ಮಾಡಿದ್ದರು.

ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಲಂಡನ್‌ಗೆ ಗಾಂಧೀಜಿ ಹೋಗಿದ್ದಾಗ ಅಲ್ಲಿನ ಪತ್ರಿಕೆಯೊಂದು, ಮ್ಯಾಂಚೆಸ್ಟರ್‌ನ ಬಟ್ಟೆ ಕಾರ್ಖಾನೆಯ ಕಾರ್ಮಿಕರನ್ನುದ್ದೇಶಿಸಿ 'ನಿಮ್ಮ ಉದ್ಯಮವನ್ನು ನಷ್ಟಪಡಿಸಿ ನಿಮ್ಮ ಉದ್ಯೋಗವನ್ನು ತೆಗೆದವನು ಬಂದಿದ್ದಾನೆ' ಎಂದು ಬರೆಯುತ್ತದೆ. ಆಗ ಕಾರ್ಮಿಕರು ಗಾಂಧೀಜಿಯನ್ನು ತರಾಟೆಗೆ ತೆಗೆದುಕೊಳ್ಳಲು ಹೋದಾಗ ತಾನು ಯಾಕೆ ಸ್ವದೇಶಿ ಬಟ್ಟೆ ತಯಾರಿಸುವಂತೆ ಮಾಡ ಬೇಕಾಯಿತು ಎಂದು ಗಾಂಧೀಜಿ ವಿವರಿಸುತ್ತಾರೆ. ಇದು ಅರ್ಥವಾಗಿ ಮ್ಯಾಂಚೆಸ್ಟರ್‌ನ ಕಾರ್ಮಿಕರು ಆ ಪತ್ರಿಕೆಯ ಕಚೇರಿಗೆ ಹೋಗಿ, 'ಗಾಂಧಿ ಮಾಡಿದ್ದು ಸರಿ ಇದೆ. ಪತ್ರಿಕೆಯನ್ನು ಸರಿಯಾಗಿ ನಡೆಸಿ' ಎಂದು ಬುದ್ಧಿ ಹೇಳುತ್ತಾರೆ.



1944ರ ಸುಮಾರಿನಲ್ಲಿ ವೈಸರಾಯ್ ವವೆಲ್, 'ಭಾರತವನ್ನು ಇನ್ನು ನಿಯಂತ್ರಿಸಬೇಕಾದರೆ ಬ್ರಿಟನ್‌ನಿಂದ ಹಣ ತರಬೇಕಷ್ಟೆ' ಎಂದು ಬ್ರಿಟಿಷ್ ಸರ್ಕಾರಕ್ಕೆ ಬರೆದರು. ಬ್ರಿಟಿಷರ ಆರ್ಥಿಕ ಶಕ್ತಿ ದುರ್ಬಲವಾಯಿತು. ಅವರು ಭಾರತ ಬಿಟ್ಟು ಹೋಗಲು ಇದೂ ಒಂದು ಕಾರಣವಾಯಿತು. ಅವರ ಆರ್ಥಿಕ ಶಕ್ತಿಯನ್ನು ಅತಿ ಹೆಚ್ಚು ದುರ್ಬಲಗೊಳಿಸಿದ ಆಯುಧ ಚರಕವೇ. ಇದರ ಅರಿವಿಲ್ಲದವರು ಮಾಡುವ ಪ್ರಚಾರಗಳು, ಅದಕ್ಕೆ ವಿರುದ್ಧವಾಗಿ ಸಾವರ್ಕರ್ ಬಗ್ಗೆ ಒಂದಷ್ಟು ಅಸಹನೆಯ ಪ್ರಚಾರಗಳು ಆಗುತ್ತಾ ಸಾರ್ವಜನಿಕ ಚಿಂತನೆಯನ್ನು ಪ್ರಭಾವಿಸುತ್ತಿವೆ.

ಸಾರ್ವಜನಿಕ ಚಿಂತನೆಗಳು ಅನಪೇಕ್ಷಿತ ಚರ್ಚೆಯದ್ದಾಗುತ್ತಾ ಹೋದ ಹಾಗೆ ಅಗತ್ಯ ಇರುವ ಚರ್ಚೆಗಳು ನಡೆಯುವುದೇ ಇಲ್ಲ. ಉದಾಹರಣೆಗೆ, 'ಮುದ್ರಾ' ಎಂಬ ಒಳ್ಳೆಯ ಯೋಜನೆ ಇದೆ. ಆದರೆ ಅದರ ಬಗ್ಗೆ ಸಾರ್ವಜನಿಕ ಚರ್ಚೆ ಇಲ್ಲದಿರುವುದರಿಂದ ಯೋಜನೆ ಜನರಿಗೆ ತಲುಪುತ್ತಿಲ್ಲ.

ಈ ಸ್ಥಿತಿ ಬದಲಾಗಬೇಕಾದರೆ ಸಾರ್ವಜನಿಕ ಚಿಂತನೆಯ ವೈಚಾರಿಕ ಗುಣಮಟ್ಟ ಹೆಚ್ಚಾಗಬೇಕು. ಕಳಪೆ ಅಭಿರುಚಿಯ ಜನರು ಹುಟ್ಟುಹಾಕುವ ಚರ್ಚೆಗಳಿಗೆ ಉತ್ತಮ ಅಭಿರುಚಿಯ ಜನರು ಪ್ರತಿಕ್ರಿಯಿಸುತ್ತಲೇ ಇರುವುದರಿಂದ ಒಟ್ಟಾರೆಯಾಗಿ ಇತ್ತಂಡವೂ ಕಳಪೆ ವಿಷಯಗಳನ್ನೇ ಸಾರ್ವಜನಿಕ ಚರ್ಚೆಯಾಗಿ ಕೊಂಡೊಯ್ಯುತ್ತಿವೆ. ಇಲ್ಲಿ ಉತ್ತಮ ಅಭಿರುಚಿಯ ಜನರು ಕಳಪೆ ವಿಷಯಗಳಿಗೇ ಪ್ರತಿಕ್ರಿಯಿಸುವುದು ಕಡಿಮೆಯಾಗಬೇಕು. ಅವರು ಸ್ವತಃ ಚರ್ಚೆಯನ್ನು ಹುಟ್ಟುಹಾಕಲು ಸಮರ್ಥರಾಗಬೇಕು. ಪ್ರತಿಕ್ರಿಯಾತ್ಮಕ ವಲ್ಲದ ಈ ರೀತಿಯ ಚರ್ಚೆಗಳು ನಿಧಾನವಾಗಿಯಾದರೂ ಸಾರ್ವಜನಿಕ ಪರಿಣಾಮವನ್ನು ಉಂಟು ಮಾಡಬಲ್ಲವು. ಆಗ ಅಪೇಕ್ಷಿತ ವಿಷಯಗಳೇ ಚರ್ಚೆಗೆ ಬರುತ್ತವೆ.

ಈ ರೀತಿಯ ಸಂವಾದದ ಸ್ವತಂತ್ರ ಹೊಸ ರೂಪಗಳು ಸಣ್ಣ ಸಣ್ಣ ಗುಂಪುಗಳಲ್ಲಿ ನಡೆಯಬೇಕು. ಸಾಮಾಜಿಕ ಜಾಲತಾಣದ ಚರ್ಚೆಗಳಿಗೆ ಪರಸ್ಪರ ಮನುಷ್ಯ ಸಂಬಂಧಗಳಿರುವುದಿಲ್ಲ. ಮನುಷ್ಯರ ನಡುವೆ ಪರಸ್ಪರ ಸಂಬಂಧ ಇದ್ದಾಗ ಚರ್ಚೆಗಳು ಸಮಗ್ರವಾಗಿ ಒಂದು ಐಡಿಯಾ ಆಗಿ ರೂಪುಗೊಂಡು ಸಮಾನ ಚಿಂತನೆಯ ಸಮುದಾಯವನ್ನು ರೂಪಿಸುತ್ತವೆ. ಅದಕ್ಕಾಗಿ ಉತ್ತಮ ಅಭಿರುಚಿಯ ಸಾಮಾನ್ಯ ಜನರು ಸಣ್ಣ ಸಣ್ಣ ಗುಂಪುಗಳಾಗಿ ಸಾರ್ವಜನಿಕ ವಿಷಯಗಳ ಸಂವಾದವನ್ನು ಪ್ರಾರಂಭಿಸಿ ಅದರ ಪರಿಣಾಮವು ಸಾಮಾಜಿಕ ಜಾಲತಾಣದ ಮೇಲೂ ಮಾಧ್ಯಮಗಳ ಮೇಲೂ ಆಗುವ ಹಾಗೆ ಮಾಡಬೇಕಾಗಿದೆ.

ಇದು ಸಾಧ್ಯ ಇದೆ. ಪತ್ರಿಕೆಯೊಂದು ಸುದ್ದಿ ಮಾಧ್ಯಮ. ಆದರೆ ಸಾಮಾಜಿಕ ಜಾಲತಾಣದ ವೇಗದ ಚರ್ಚೆಗಳನ್ನು ಪತ್ರಿಕೆಗಳೂ ಪ್ರಕಟಿಸುತ್ತವೆ. ಅಂದರೆ ಸಾಮಾಜಿಕ ಜಾಲತಾಣದ ಚರ್ಚೆಯು ಪತ್ರಿಕೆಯನ್ನು ಪ್ರಭಾವಿಸುತ್ತದೆ ಎಂದಾಯಿತು. ಹಾಗಿರುವಾಗ ಸಣ್ಣ ಗುಂಪುಗಳ ಚರ್ಚೆಯೂ ಅಂತಹುದೇ ಪರಿಣಾಮವನ್ನು ಉಂಟು ಮಾಡಬಲ್ಲುದು.

ಚುರುಮುರಿ



ಬಂಗಲೆಯ ಅದೃಷ್ಟ!

• ಚಂದ್ರಕಾಂತ ವಡ್ಡು

ವಾಕಿಂಗ್ ನೆಪದಲ್ಲಿ ಪಾರ್ಕಿಗೆ ಬರುವ ಗೆಳೆಯರಿಗೆ ಇತ್ತೀಚೆಗೆ ಟಾಪಿಕ್‌ಗಳ ಬರ ಕಾಡತೊಡಗಿತ್ತು. ದಿನಂಪ್ರತಿ ಅದದೇ ವಿಷಯಗಳನ್ನು ಮಾತಾಡಿ ನಾಲಗೆ ರುಚಿ ಕಳೆದುಕೊಂಡಿತ್ತು.

ಇಂತಹ ಸಂದರ್ಭದಲ್ಲಿ ಹೊಸ ವಿದ್ಯಮಾನಗಳನ್ನು ತೇಲಿಬಿಟ್ಟು ಸಂಭಾಷಣೆಗೆ ಹೊಸ ತಿರುವು ನೀಡುವುದರಲ್ಲಿ ನಿಪುಣನಾದ ಕೊಟ್ರೇಶಿ 'ನಮ್ಮ ರಾಜ್ಯದ ಮುಂದಿನ ಮುಖ್ಯಮಂತ್ರಿ ಯಾರು?' ಎಂದ. ಗುಂಪಿನಲ್ಲಿದ್ದ ಎಲ್ಲರೂ ತಮ್ಮ ನಿಲುವಿನ ಪಕ್ಷ, ತಮ್ಮ ಒಲವಿನ ನಾಯಕನ ಹೆಸರು ಕೂಗ ತೊಡಗಿದರು. ಒಮ್ಮತ ಮೂಡೀತಾದರೂ ಹೇಗೆ...?!

ತಿಂಗಳೇಶ ಗೊಂದಲಕ್ಕೆ ತೆರೆಯೆಳೆಯಲು ಯತ್ನಿಸಿದ. 'ಮುಖ್ಯಮಂತ್ರಿ ಆಯ್ಕೆ ಮತದಾರರ ಕೈಯಲ್ಲಿರುತ್ತದೆ. ನಮಗೇಕೆ ತಲೆಬಿಸಿ?'

'ಮುಖ್ಯಮಂತ್ರಿ ಆಯ್ಕೆ ಮಾಡೋರು ಮತದಾರರಲ್ಲ, ಶಾಸಕರು' ತಿಮ್ಮಣ್ಣ ತನ್ನ ಸಂವಿಧಾನ ಜ್ಞಾನ ಪ್ರಕಟಿಸಿದ. 'ಇಬ್ಬರೂ ಅಲ್ಲ, ಹೈಕಮಾಂಡ್' ಎಂದು ಸಂವಿಧಾನಕ್ಕೆ ಮೌಖಿಕ ತಿದ್ದುಪಡಿ ಸೂಚಿಸಿದ ಶೇಖರಗೌಡ.

'ನಿಜವಾಗಿ ಮುಖ್ಯಮಂತ್ರಿಯನ್ನು ಆರಿಸೋರು ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವ ಕಾರ್ಪೊರೇಟ್ ಕಂಪನಿ ಮಾಲೀಕರು' ಮತ್ತೊಂದು ಸತ್ಯ ಬಿಚ್ಚಿಟ್ಟ ತಿಪ್ಪೇಶಿ.

'ಅದೇನೇ ಇರಲಿ, ಕರ್ನಾಟಕದಲ್ಲಿ ಮುಂದಿನ ಮುಖ್ಯಮಂತ್ರಿ ಮಾಡೋದು ಶಾಸಕ ಜಮೀರ್ ಅಹ್ಮದ್ ಖಾನ್ ಕೈಯಲ್ಲಿದೆ...' ದುರ್ಗಪ್ಪನ ಈ ಮಾತು ಚರ್ಚೆಯನ್ನು ಕುತೂಹಲದ ಘಟ್ಟ ಮುಟ್ಟಿಸಿತು. 'ಸದಾಶಿವನಗರದಲ್ಲಿರುವ ಜಮೀರ್ ಸಾಬರ ಅದೃಷ್ಟದ ಅತಿಥಿಗೃಹದಲ್ಲಿರುವವರೇ ಮುಂದಿನ ಮುಖ್ಯಮಂತ್ರಿ. ಈಗ ಆ ಕಟ್ಟಡವನ್ನು ಸಿದ್ದರಾಮಣ್ಣನಿಗೆ ಅರ್ಪಿಸಲು ಮಾಲೀಕರು ನಿರ್ಧರಿಸಿದ್ದಾರೆ'.

'ಆದರೆ ಸಿದ್ರಾಮಣ್ಣ ಇಂಥ ಮೂಢನಂಬಿಕೆ ನಂಬೋರಲ್ಲ ಬಿಡು...' ತಿಂಗಳೇಶನ ಅನುಮಾನ.

'ಹೌದು, ಸಿದ್ರಾಮಣ್ಣಗೆ ಕುಟುಂಬ ರಾಜಕಾರಣ, ಜಾತೀಯತೆ, ಮೌಢ್ಯಾಚರಣೆಗಳಲ್ಲಿ ಬಿಲ್ಕುಲ್ ನಂಬಿಕೆಯಿಲ್ಲ. ಆದರೆ ಇಂಥ ವಿಷಯಗಳಲ್ಲಿ ಅವರ ಅಭಿಮಾನಿಗಳ ನಿರ್ಧಾರವೇ ಅಂತಿಮ' ದಿನೇಶನ ಸಮಜಾಯಿಷಿ. ಅಷ್ಟೊತ್ತಿಗೆ ಅಬ್ಬರಿಸಿದ ಮಳೆಯಿಂದ ಗೆಳೆಯರೆಲ್ಲಾ ಚೆಲ್ಲಾಪಿಲ್ಲಿ.

ಸಂಗತ

ಗಾಜು ಒಡೆಯುವ ಮುನ್ನ...

ಖಾಲಿ ಬಾಟಲ್‌ಗಳನ್ನು ಕಡ್ಡಾಯವಾಗಿ ಮರಳಿಸುವಂತಹ ಕಠಿಣ ನಿಯಮ ಅಗತ್ಯ

• ಡಾ. ಮುರಳೀಧರ ಕಿರಣಕೆರೆ

ಆ ಹಳ್ಳಿಗನ ಸಾಕುಪ್ರಾಣಿಯ ಚಿಕಿತ್ಸೆ ಮುಗಿಸಿ, ಅಲ್ಲೇ ಮನೆಯಂಗಳದಲ್ಲಿ ನಿಲ್ಲಿಸಿದ್ದ ಕೈಗಾಡಿಯನ್ನು ನೋಡುತ್ತಿದ್ದಂತೆ ತುಸು ಅಚ್ಚರಿಯ ಜೊತೆಗೆ ಕುತೂಹಲ. ಗಾಡಿಯ ತುಂಬಾ ವಿವಿಧ ನಮೂನೆಯ ನೂರಾರು ಖಾಲಿ ಮದ್ಯದ ಬಾಟಲ್‌ಗಳು! ಹೆಚ್ಚಿನವು ಒಡೆದು ಹೋಳಾಗಿದ್ದವು. ಕೃಷಿ ಕಾರ್ಮಿಕನಾಗಿರುವ ಈ ಯುವಕ ಗುಜರಿ ವ್ಯಾಪಾರಕ್ಕೆ ಕೈಹಾಕಿರಬಹುದು ಎಂದು ಆ ಕ್ಷಣಕ್ಕೆ ಅನಿಸುತ್ತಿದ್ದಂತೆ ನನ್ನ ಊಹೆ ಸುಳ್ಳಾಗಿಸಿತ್ತು ಅವನ ವಿವರಣೆ.

'ಇದೆಲ್ಲಾ ನಮ್ಮ ಹುಡುಗರ ಮೋಜು ಮಸ್ತಿಯ ಫಲ ಸಾರ್. ಮೊನ್ನೆ ಗಾಂಧಿ ಜಯಂತಿ ದಿನ ಇಲ್ಲೇ ಶಾಲೆಯ ಸುತ್ತಮುತ್ತ ಕುಡುಕ್ರು ಎಸೆದ ಬಾಟ್ಲುಗಳನ್ನು ನನ್ನ ಸಣ್ ಮಗ್ನು ಜೊತೆಗೆ ಹೆರ್ಕಿ ಗಾಡಿಗೆ ತುಂಬಿಸಿದೆ. ಒಂದು ನಾನೂರು ಅಡಿ ಜಾಗದಲ್ಲೇ ಇಷ್ಟು ಬಾಟ್ಲು ಸಿಕ್ವು ನೋಡಿ' ಒಡೆದ ಶೀಷೆಗಳನ್ನು ಎತ್ತಿ ತೋರಿಸುತ್ತಿದ್ದಂತೆ ನಾನು ದಿಗ್ಭ್ರಮೆಗೊಂಡಿದ್ದೆ!

ಇದು ಹೇಳಿ ಕೇಳಿ ಸಣ್ಣ ಹಳ್ಳಿ. ತೀರ್ಥಹಳ್ಳಿ ಪಟ್ಟಣದಿಂದ ಹತ್ತು ಮೈಲು ದೂರದಲ್ಲಿದೆ. ಇಂಥ ಕಡೆಯೇ ದುರಾಚಾರದ ಚಹರೆಗಳು ಈ ಬಗೆಯಲ್ಲಿ ಎದ್ದು ಕಾಣುವಾಗ ಇನ್ನು ಪಟ್ಟಣಗಳ ಅಜುಬಾಜಿನ ಪರಿಸರ ಹೇಗಿರಬಹುದು? ಯೋಚಿಸುತ್ತಿದ್ದಂತೆ ಮನದೊಳಗೆ ಅವ್ಯಕ್ತ ತಳಮಳ!

'ಖಾಲಿ ಬಾಟ್ಲುಗಳನ್ನು ಎತ್ತಿಕೊಂಡು ಹೋಗದಿದ್ದರೆ ಹೋಗಲಿ, ಕುಡಿದ ನಶೇಲಿ ಅಲ್ಲೇ ಒಡೆದು ಚೂರು ಮಾಡಿ ಖುಷಿಪಡ್ತಾರೆ. ಶಾಲೆಯ ಮಕ್ಕಳು ಇಲ್ಲೇ ಓಡಾಡೋದು, ಅವರ ಕಾಲಿಗೆ ಚುಚ್ಚಿದ್ರೆ? ಸುತ್ತ ಹುಲ್ಲು ಬೆಳೆದು ದನಕರುಗಳು ಮೇಯುವಾಗ ಸೊಡ್ಡಿಗೋ ಕಾಲಿಗೋ ಚುಚ್ಚಿ ಯಮಯಾತನೆ ಪಡ್ತವೆ. ನಮ್ಮನೆ ದನಕ್ಕೇ ಹೀಗೆ ಹುಣ್ಣಾಗಿ ಒಂದು ತಿಂಗ್ಳು ಒದ್ದಾಡಿತ್ತು...'

ಆತನ ಮಾತಲ್ಲಿ ನೋವು, ಸಂಕಟ, ಅಸಹಾಯಕತೆ. ಕಾಲಿಗೆ ಸೀಸದೋಡು ಹೊಕ್ಕಿ ಹುಣ್ಣಾದ ಹಲವು ಜಾನುವಾರುಗಳಿಗೆ ಚಿಕಿತ್ಸೆ ನೀಡಿರುವುದರಿಂದ ಪರಿಣಾಮದ ತೀವ್ರತೆಯನ್ನು ಕಣ್ಣಾರೆ ಕಂಡಿದ್ದೇನೆ. ಹಾಗಾಗಿಯೇ ಅವನ ಈ ಕಾರ್ಯ ಹಿರಿದಾಗಿ ಕಂಡಿದ್ದು ಜೊತೆಗೆ ಅಭಿಮಾನವೂ ಉಕ್ಕಿ ಬಂದಿದ್ದು.

ಗಾಂಧಿ ಜಯಂತಿಯನ್ನು ಸ್ವಚ್ಛತೆ, ಶ್ರಮದಾನದಂತಹ ಕಾರ್ಯಗಳ ಮೂಲಕ ಆಚರಿಸುವುದು ಎಲ್ಲೆಡೆಯ ವಾಡಿಕೆ. ಅದರಲ್ಲೂ ಕೇವಲ ಪ್ರಚಾರಕ್ಕಾಗಿ ಅಂದು ಪೊರಕೆ ಹಿಡಿಯುವವರೇ ಹೆಚ್ಚು! ಆದರೆ ಯಾವುದೇ ಗುರುತಿಸುವಿಕೆ, ಪ್ರತಿಫಲದ ಅಪೇಕ್ಷೆಯಿಲ್ಲದೆ, ಯಾರಲ್ಲೂ ಹೇಳಿಕೊಳ್ಳದೆ ತನ್ನಷ್ಟಕ್ಕೇ ತಾನು ನಿಸರ್ಗದಲ್ಲಿನ ಅಪಾಯಕಾರಿ ಕಸವನ್ನು ಕಡಿಮೆ ಮಾಡಲು ಸಂಕಲ್ಪ ತೊಟ್ಟಿರುವ ಹೆರಬೈಲು ಮಹೇಶನಂತಹ ವ್ಯಕ್ತಿಗಳು ತೀರಾ ಅಪರೂಪ. ಬರೀ ಗಾಂಧಿ ಜಯಂತಿಯಂದು ಅಲ್ಲ, ಸಮಯ ಆದಾಗಲೆಲ್ಲಾ ಮದ್ಯದ ಶೀಷೆ, ಪ್ಲಾಸ್ಟಿಕ್ ಕಸ ಆಯುವ ಹವ್ಯಾಸ ರೂಢಿಸಿಕೊಂಡಿರುವ ಈ ಯುವಕ ನಿಜ ಅರ್ಥದಲ್ಲಿ ಸ್ವಚ್ಛತೆಯ ರಾಯಭಾರಿ. ಪ್ರತೀ ಹಳ್ಳಿಯಲ್ಲೂ ಇಂತಹ ಒಬ್ಬೊಬ್ಬರಿದ್ದರೂ ಸಾಕು ಸ್ವಚ್ಛ ಭಾರತದ ಕನಸು ನಿಧಾನವಾಗಿಯಾದರೂ ಕೈಗೂಡೀತು.

ಸಿಲಿಕ ಎಂಬ ನೈಸರ್ಗಿಕ ವಸ್ತುವಿನಿಂದ ತಯಾರಾಗುವ ಗಾಜಿನ ಬಳಕೆ ಎಲ್ಲ ರಂಗಗಳಲ್ಲೂ ಇದೆ. ಸಿದ್ಧ ಆಹಾರ, ಪಾನೀಯ, ಔಷಧ ಸಂಗ್ರಾಹಕಗಳು, ರೋಗಪತ್ತೆ ಪರಿಕರಗಳು, ವಾಹನೋದ್ಯಮ, ಕೈಗಾರಿಕೆಗಳು, ಸಂಪರ್ಕ ಸಾಧನಗಳು, ಗೃಹಬಳಕೆಯ ವಸ್ತುಗಳು ಎಂದೆಲ್ಲಾ ಗಾಜು ಸರ್ವವ್ಯಾಪಿ. ಸುರಕ್ಷತೆ ಮತ್ತು ಕಡಿಮೆ ವೆಚ್ಚ ಈ ಜನಪ್ರಿಯತೆಗೆ ಪ್ರಮುಖ ಕಾರಣ. ಪ್ರಕೃತಿಯಲ್ಲಿ ಸಾವಿರಾರು ವರ್ಷಗಳು ಹಾಗೆಯೇ ಉಳಿದರೂ ಪ್ಲಾಸ್ಟಿಕ್ ರೀತಿಯಲ್ಲಿ ಅಪಾಯಕಾರಿ ರಾಸಾಯನಿಕಗಳನ್ನು ವಿಸರ್ಜಿಸದು. ಆದರೆ ತುಂಬಾ ನಾಜೂಕಾದ ಕಾರಣ ಬಳಕೆಯಲ್ಲಿ ಜಾಗರೂಕತೆ ಬೇಕು. ಎಚ್ಚರ ತಪ್ಪಿದರೆ ಒಡೆದು ಚೂರಾಗುವುದು ಗಾಜಿನ ಗುಣ.



ನಿರ್ಜನ ಜಾಗಗಳು, ಪ್ರವಾಸಿ ತಾಣಗಳು, ಶಾಲಾ ವಠಾರಗಳು, ಕಾಡಂಚು, ಹಳ್ಳಿಯ ಪರಿಸರದಲ್ಲಿ ಮೋಜು ಮಸ್ತಿ ಮಾಡುವ ಚಾಳಿ ಹೆಚ್ಚುತ್ತಿದೆ. ಕುಡಿದು ಮತ್ತೇರಿಸಿಕೊಂಡು ಬಾಟಲ್‌ಗಳನ್ನು ಪುಡಿ ಮಾಡಿ ವಿಕೃತಾನಂದ ಪಡೆಯುವ ಪ್ರವೃತ್ತಿ ಸಾಂಕ್ರಾಮಿಕದಂತೆ ಹಳ್ಳಿಗಳಿಗೂ ವ್ಯಾಪಿಸಿರುವುದು ಆತಂಕಕಾರಿ. ಸೊಪ್ಪು, ದರಗು, ಕಟ್ಟಿಗೆಗೆಂದು ಕಾಡಿಗೆ ಹೋಗುವ ಕೃಷಿಕರು, ಜಾನುವಾರುಗಳು, ವನ್ಯಜೀವಿಗಳು, ಶಾಲೆಗೆ ಹೋಗುವ ಪುಟ್ಟ ಮಕ್ಕಳಿಗೆ ಗಾಜಿನ ತ್ಯಾಜ್ಯ ಕಂಟಕಕಾರಿ.

ಸರ್ಕಾರದ ಪ್ರಮುಖ ಆದಾಯ ಮೂಲಗಳಲ್ಲೊಂದಾದ ಮದ್ಯಕ್ಕಂತೂ ಕಡಿವಾಣ ಹಾಕಲಾಗದು. ಆದರೆ ಕುಡಿದ ನಂತರ ಬಾಟಲ್‌ಗಳನ್ನು ಎಲ್ಲೆಂದರಲ್ಲಿ ಎಸೆಯುವ, ಒಡೆದು ಚೂರಾಗಿಸುವ ವಿಕೃತಿಗೆ ಬ್ರೇಕ್ ಹಾಕದಿದ್ದರೆ ಎಲ್ಲೆಡೆಯೂ ಈ ಅಪಾಯಕಾರಿ ಕಸವೇ ತುಂಬಿಕೊಂಡೀತು.

ಖಾಲಿ ಬಾಟಲ್‌ಗಳನ್ನು ಕಡ್ಡಾಯವಾಗಿ ಮರಳಿಸುವಂತಹ ಕಠಿಣ ನಿಯಮದ ಅಗತ್ಯ ಖಂಡಿತಾ ಇದೆ. ಇಲ್ಲವೇ ಮದ್ಯವನ್ನು ಗಾಜಿನ ಬಾಟಲ್‌ಗಳ ಬದಲಾಗಿ ಟಿನ್‌ಗಳಲ್ಲಿ ಮಾರುವಂತಹ ನೀತಿ ರೂಪಿಸಿದರೆ ಪರಿಸರದಲ್ಲಿ ಶೀಷೆಗಳ ತ್ಯಾಜ್ಯ ತುಸು ಕಡಿಮೆಯಾದೀತು. ಜನ, ಜಾನುವಾರುಗಳು, ನಿಸರ್ಗದ ಸ್ವಾಸ್ಥ್ಯದ ದೃಷ್ಟಿಯಿಂದ ಸರ್ಕಾರ ಗಂಭೀರವಾಗಿ ಚಿಂತಿಸಿ ಕಾರ್ಯತತ್ಪರವಾಗುವುದು ಒಳಿತು.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ
ಸರ್ಕಾರಿ ಪಶು ಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ಸರಿದಾರಿ ಆಯ್ಕೆಯೇ ಪರಿಹಾರ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ (ಕೆಎಸ್‌ಆರ್‌ಟಿಸಿ) ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿ 500ಕ್ಕೂ ಹೆಚ್ಚು ಅಭ್ಯರ್ಥಿಗಳಿಂದ ₹ 18 ಕೋಟಿ ಪಡೆದು ವಂಚಿಸಿರುವ ಜಾಲವನ್ನು ಪೊಲೀಸರು ಭೇದಿಸಿದ್ದಾರೆ (ಪ್ರ.ವಾ., ಅ. 18). ಸರ್ಕಾರಿ ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳ ನೇಮಕಾತಿಗೆ ಎಷ್ಟೇ ಪಾರದರ್ಶಕತೆ, ತಂತ್ರಜ್ಞಾನ ಹಾಗೂ ನೇರ ನೇಮಕಾತಿ ಪ್ರಕ್ರಿಯೆಯನ್ನು ಜಾರಿಗೆ ತರುವ ಪ್ರಯತ್ನಗಳಾಗಿದ್ದರೂ ಮತ್ತೆ ಮತ್ತೆ ವಂಚನೆಯ ಪ್ರಕರಣಗಳು ಬೆಳಕಿಗೆ ಬರುತ್ತಲೇ ಇವೆ. ಕೆಲಸದ ಆಮಿಷ ಒಡ್ಡುವ ವಂಚಕರನ್ನು ಪಕ್ಕಕ್ಕಿಟ್ಟರೂ, ಅಡ್ಡದಾರಿಯಿಂದ ಆಯ್ಕೆಯಾಗ ಬಯಸುವ ಅಭ್ಯರ್ಥಿಗಳಿಗೇನೂ ಕೊರತೆಯಿಲ್ಲ. ಇದು ಕೇವಲ ಕೆಎಸ್‌ಆರ್‌ಟಿಸಿಗೆ ಸೀಮಿತವಾಗಿಲ್ಲ. ಅನೇಕ ರೀತಿಯ ಸರ್ಕಾರಿ ನೌಕರಿಗಳನ್ನು ಗಿಟ್ಟಿಸಿಕೊಳ್ಳಲು ಸಾಲ ಮಾಡಿಯೋ ಜಮೀನು, ಒಡವೆ, ಆಸ್ತಿ ಮಾರಿಯೋ ಲಂಚ ನೀಡಲು ಮುಂದಾಗುವ ಅಭ್ಯರ್ಥಿಗಳಿದ್ದಾರೆ.

ಇನ್ನು, ಇಂತಹ ಪ್ರಕರಣಗಳಲ್ಲಿ ತಾವು ರಾಜಕಾರಣಿಗಳು ಹಾಗೂ ಅಧಿಕಾರಿಗಳಿಗೆ ಹಣ ನೀಡುವುದಾಗಿ ವಂಚಕರು ಹೇಳುತ್ತಾರೆ. ಅಂದರೆ ಒಂದಂತೂ ಸ್ಪಷ್ಟ. ಕಳ್ಳರು ಮನೆಯಲ್ಲಿಯೇ ಇರುತ್ತಾರೆ. ಒಳಗಿನವರ ಸಹಾಯವಿಲ್ಲದೆ ಒಳಗಿನಿಂದ ದಿಡ್ಡಿ ಬಾಗಿಲನ್ನು ತೆರೆಯಲು ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ ಕಳ್ಳರನ್ನು ಹಿಡಿಯುವುದೂ ಕಷ್ಟ. ಅಭ್ಯರ್ಥಿಗಳೇ ಎಚ್ಚೆತ್ತುಕೊಂಡು ಸರಿಯಾದ ಮಾರ್ಗದಲ್ಲಿ ನೌಕರಿಗೆ ಪ್ರಯತ್ನಿಸುವುದೇ ಇದಕ್ಕೆಲ್ಲ ಪರಿಹಾರ.

ಸುಘೋಷ ಸ. ನಿಗಳೆ, ಬೆಂಗಳೂರು

ಸಮರ್ಥನೆ ಸಲ್ಲ, ವಾಸ್ತವ ಮನದಟ್ಟಾಗಲಿ

ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತದ ಸ್ಥಾನದ ಬಗೆಗೆ ನಮ್ಮ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿದೆ. ನೆರೆಹೊರೆಯ ದೇಶಗಳ (ಅದರಲ್ಲೂ ಪಾಕಿಸ್ತಾನದ) ಸ್ಥಿತಿಗಿಂತ ತನ್ನ ದೇಶದ ಸ್ಥಿತಿ ಕೀಳಾಗಿಲ್ಲ ಎಂದೂ ವಾದಿಸಿದೆ. ನ್ಯೂನ ಪೋಷಿತರು ಶೇ 15.3ರಷ್ಟು ಇರುವುದು ವಾಸ್ತವದಿಂದ ದೂರವೇನಲ್ಲ. ಐಎಂಎಫ್, ವಿಶ್ವಬ್ಯಾಂಕ್, ರೇಟಿಂಗ್ ಏಜೆನ್ಸಿಗಳು, ಅಮೆರಿಕ ಮೂಲದ ಕೆಲವು ಮಾಧ್ಯಮಗಳು ಕೊಡುವ ಅಂಕಿಅಂಶಗಳನ್ನು ತನ್ನ ಪ್ರಚಾರಕ್ಕಾಗಿ ಬಳಸಿಕೊಳ್ಳುವುದು, ದೇಶೀಯ ಸಂಸ್ಥೆಗಳು ಅನನುಕೂಲಕರ ಫಲಿತಾಂಶ ಸಿದ್ಧಪಡಿಸಿದಾಗ ಅದನ್ನು ತಡೆಹಿಡಿಯುವುದು, ಐಸಿಎಂಆರ್‌ನಂತಹ ಸ್ವಯಮಾಧಿಕಾರದ ಸಂಸ್ಥೆಗಳು ತನ್ನ ಇಂಗಿತಾನುಸಾರ ಹೇಳಿಕೆಗಳನ್ನು ನೀಡುವಂತೆ ಮಾಡುವುದು- ಇದನ್ನೆಲ್ಲ ನೋಡಿದ್ದೇವೆ. ಕೊರೊನಾ ಕಾಲದಲ್ಲಿ ಉಚಿತ ಧಾನ್ಯ ನೀಡಿರುವುದು ನಿಜ. ಆದರೆ ಅದರಿಂದ ಸಿಕ್ಕ ಭದ್ರತೆ ತಾತ್ಕಾಲಿಕ. ಭಾರತದ ಬಡತನ, ಹಸಿವುಗಳಿಗೂ ಸೊಮಾಲಿಯಾ, ಇಥಿಯೋಪಿಯದ ಸ್ಥಿತಿಗತಿಗಳಿಗೂ ವ್ಯತ್ಯಾಸ ಇದೆ. ಆಹಾರ ಧಾನ್ಯಗಳ ಉತ್ಪಾದನೆ ಅಗತ್ಯಕ್ಕಿಂತ ಹೆಚ್ಚು ಇರುವಾಗಲೂ ಕುಪೋಷಣೆ ಇದೆ. ಉತ್ತಮ ಗುಣಮಟ್ಟದ ಆಹಾರ ಪಡೆಯಲು ಉದ್ಯೋಗ, ಆದಾಯದ ಅವಕಾಶಗಳು ಇರಬೇಕಲ್ಲವೇ? 2020ರ ಮಾರ್ಚ್‌ನಿಂದೀಚೆಗೆ ಇದು ಹಲವರಿಗೆ ಪ್ರಶ್ನಾರ್ಥಕ ಚಿಹ್ನೆಯಾಗಿರುವುದು ಸುಳ್ಳೇ?

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಪ್ರಸ್ತುತ ಸ್ಥಾನಮಾನದ ಬಗ್ಗೆ ಗಾಬರಿ ವ್ಯಕ್ತಪಡಿಸಿ, ವಿಧಾನವನ್ನು ಪ್ರಶ್ನಿಸುವುದರ ಬದಲಿಗೆ ನ್ಯೂನತೆ ಶೋಧಿಸಲಿ, ಸರಿಪಡಿಸಲು ಗಮನಹರಿಸಲಿ. ಅಂತೆಯೇ, ಉದ್ಯೋಗ ಸೃಷ್ಟಿಗೆ ಅನುವು ಮಾಡಿಕೊಡಬಲ್ಲ ಬೇರೆ ಇಲಾಖೆಗಳು ತಮ್ಮ ಕೆಲಸವನ್ನು ಇನ್ನಷ್ಟು ತೀವ್ರಗೊಳಿಸಲಿ. ಪರಿಣಾಮಕಾರಿಯಾಗಿ ಮಾಡಲಿ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಪೊಲೀಸರು ಜನಸ್ನೇಹಿ ಆಗುವುದೆಂದು?

ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಕುಂದೂರಿನಲ್ಲಿ ಗ್ರಾಮವಾಸ್ತವ್ಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದ ಮುಖ್ಯಮಂತ್ರಿಯನ್ನು ನೋಡಲು ಬಂದ ಬಾಲಕನ ತಲೆಗೆ ಪೊಲೀಸ್ ಸಿಬ್ಬಂದಿಯೊಬ್ಬರು ಟೋಪಿಯಿಂದ (ಟೋಪಿಯಲ್ಲಿರುವ ಲೋಹ) ಹೊಡೆದಿದ್ದು ಬಾಲಕನ ತಲೆಗೆ ಗಾಯವಾಗಿದೆ. ಕರ್ತವ್ಯದ ಹೆಸರಲ್ಲಿ ಸಾರ್ವಜನಿಕರ ಮೇಲೆ ಪೊಲೀಸರ ದೌರ್ಜನ್ಯ ಇಂದು-ನಿನ್ನೆಯದಲ್ಲ. ಆಗಾಗ್ಗೆ ಇಂತಹ ದುರ್ಘಟನೆಗಳಿಗೆ ಸಾಕ್ಷಿಯಾಗುತ್ತಿರುವ ಪೊಲೀಸ್ ಇಲಾಖೆ ಹೇಗೆ ತಾನೆ ಸಾರ್ವಜನಿಕರ ವಿಶ್ವಾಸ ಗಳಿಸಲು ಸಾಧ್ಯ? ಅಧಿಕಾರ, ಸಮವಸ್ತ್ರ, ಕೈಯಲ್ಲಿ ಲಾಠಿ ಇದೆ ಎಂದು ಏನು ಬೇಕಾದರೂ ಮಾಡಬಹುದೇ?

ತಮ್ಮ ಮಕ್ಕಳು ತಪ್ಪು ಮಾಡಿದಾಗ ಅವರಿಗೂ ಇದೇ ರೀತಿ ರಕ್ತ ಸುರಿಯುವಂತೆ ಹೊಡೆಯುವರೇ? ಮುಗ್ಧ ನಾಗರಿಕರ ಮೇಲೆ ಲಾಠಿ ಪ್ರಯೋಗವೊಂದೇ ಪರಿಹಾರವಲ್ಲ ಎಂಬುದನ್ನು ಮೊದಲು ಅರಿಯಬೇಕು. ಸಾರ್ವಜನಿಕರ ಸಹಕಾರವಿಲ್ಲದೆ ಪೊಲೀಸ್ ಇಲಾಖೆ ಏನೂ ಮಾಡಲು ಸಾಧ್ಯವಿಲ್ಲ. ಸಾರ್ವಜನಿಕರಲ್ಲಿ ಪೊಲೀಸರೆಂದರೆ ಭಯ, ಲಾಠಿ ಏಟು ಎನ್ನುವ ಮನೋಭಾವವನ್ನು ಹೋಗಲಾಡಿಸಬೇಕೇ ಹೊರತು, ಇನ್ನಷ್ಟು ಭಯಭೀತಗೊಳಿಸಬಾರದು. ಸರ್ಕಾರ ಪೊಲೀಸ್ ಇಲಾಖೆಯನ್ನು ಎಷ್ಟೇ ಜನಸ್ನೇಹಿ ಮಾಡಲು ಹೊರಟರೂ ಇಂತಹ ಘಟನೆಗಳಿಂದ ಜನರು ಇಲಾಖೆಯಿಂದ ಇನ್ನಷ್ಟು ದೂರವಾಗುವುದರಲ್ಲಿ ಅನುಮಾನವೇ ಇಲ್ಲ.

ಮುರುಗೇಶ ಡಿ., ದಾವಣಗೆರೆ

ಸ್ಕ್ಯಾನಿಂಗ್ ಘಟಕಕ್ಕೆ ಸಿಗಲಿ ಆದ್ಯತೆ

ಮಹಿಳೆಯರ ಆರೋಗ್ಯ ಸಮಸ್ಯೆಯ ನಿವಾರಣೆಗಾಗಿ ಸರ್ಕಾರಗಳು ಆಯವ್ಯಯದಲ್ಲಿ ಹಣವನ್ನು ಮೀಸಲಿಟ್ಟು, ಕಾಳಜಿ ವಹಿಸುತ್ತವೆ. ಆದರೂ ಜಿಲ್ಲಾ ಆಸ್ಪತ್ರೆ, ಕೆಲವು ತಾಲ್ಲೂಕು ಕೇಂದ್ರಗಳನ್ನು ಹೊರತುಪಡಿಸಿ ಉಳಿದೆಡೆ ಮಹಿಳೆಯರ ಆರೋಗ್ಯ ಚಿಕಿತ್ಸೆಗೆ ಅನಿವಾರ್ಯವಾದ ಸ್ಕ್ಯಾನಿಂಗ್ ಯಂತ್ರಗಳು ಲಭ್ಯವಿಲ್ಲದಿರುವುದು ಮಹಿಳೆಯರನ್ನು ತೊಂದರೆಗೆ ಈಡು ಮಾಡುತ್ತಿದೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಬರುವವರು ಅದರಲ್ಲೂ ಗರ್ಭಿಣಿಯರು ಸ್ಕ್ಯಾನಿಂಗ್ ಮಾಡಿಸಲು ಖಾಸಗಿ ಸೆಂಟರ್‌ಗಳಿಗೆ ತೆರಳಬೇಕಾಗುತ್ತದೆ. ಅದು ಸರ್ಕಾರಿ ಆಸ್ಪತ್ರೆಗೆ ಅನತಿ ದೂರದಲ್ಲಿದ್ದರೆ ಸರಿ, ಇಲ್ಲವಾದರೆ ಹತ್ತಾರು ಕಿಲೊಮೀಟರ್‌ಗಟ್ಟಲೆ ಪ್ರಯಾಣಿಸಿ ಸ್ಕ್ಯಾನಿಂಗ್ ಮಾಡಿಸಿಕೊಂಡು ಬರುವ ವೇಳೆಗೆ ವೈದ್ಯರ ಆ ದಿನದ ಕಾರ್ಯಾವಧಿ ಮುಗಿದು ಹೋಗಿರುತ್ತದೆ. ವರದಿ ತೋರಿಸಲು ಮತ್ತೆ ಇನ್ನೊಂದು ದಿನ ಅನಿವಾರ್ಯವಾಗಿ ಆಸ್ಪತ್ರೆಗೆ ಬರಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಚಿಕಿತ್ಸೆ ವಿಳಂಬವಾದರೆ ವೈದ್ಯರನ್ನು ದೂಷಿಸುವ ಸಾಧ್ಯತೆಯೂ ಇಲ್ಲದಿಲ್ಲ. ಜಿಲ್ಲಾಸ್ಪತ್ರೆ ಹೊರತುಪಡಿಸಿ ನಗರಗಳು, ಪಟ್ಟಣಗಳು, ಹೋಬಳಿಗಳಲ್ಲಿ ಇರುವ ಎಲ್ಲ ಸಮುದಾಯ ಆಸ್ಪತ್ರೆಗಳಲ್ಲಿಯೂ ಸ್ಕ್ಯಾನಿಂಗ್ ಸೆಂಟರ್‌ಗಳನ್ನು ತೆರೆಯಬೇಕು. ಇದರಿಂದ ಮಹಿಳೆಯರ ಚಿಕಿತ್ಸೆಗೆ ಅನಗತ್ಯ ವಿಳಂಬ ತಪ್ಪುವುದಲ್ಲದೆ ಅವರು ದುಬಾರಿ ಹಣ ತೆರುವುದೂ ತಪ್ಪುತ್ತದೆ.

ಮಹದೇವಪ್ಪ ಪಿ., ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಅಕ್ಟೋಬರ್ ಮಳೆಗೆ ನಡುಗಿದ ಭಾರತ

ಮುಂಗಾರು ವಿದಾಯಕ್ಕೆ ಮುನ್ನ ಆಕಾಶಕ್ಕೆ ಕನ್ನ

ದೇಶದ ಬಹುತೇಕ ಪ್ರದೇಶಗಳಲ್ಲಿ ಅಕ್ಟೋಬರ್ ತಿಂಗಳಿನಲ್ಲಿ ಭಾರಿ ಮಳೆಯಾಗಿದೆ. 20ಕ್ಕೂ ಹೆಚ್ಚು ರಾಜ್ಯಗಳಲ್ಲಿ ವಾಡಿಕೆಗಿಂತ ಹಲವು ಪಟ್ಟು ಹೆಚ್ಚು ಮಳೆಯಾಗಿದೆ. ಹೆಚ್ಚು ಮಳೆಯ ಕಾರಣ ಹಲವೆಡೆ ಪ್ರವಾಹ ಸ್ಥಿತಿ ತಲೆದೋರಿದೆ. ಕೇರಳದಲ್ಲಿ ಒಂದು ವಾರದಲ್ಲಿ ಭಾರಿ ಪ್ರಮಾಣದ ಮಳೆಯಾಗಿದ್ದು, ಹಲವೆಡೆ ಭೂಕುಸಿತ ಸಂಭವಿಸಿದೆ. ಸಾವು ನೋವೂ ಸಂಭವಿಸಿದೆ. ದೇಶದಾದ್ಯಂತ ಅಕ್ಟೋಬರ್ ತಿಂಗಳ ಮೊದಲ 18 ದಿನಗಳಲ್ಲಿ ವಾಡಿಕೆಗಿಂತ ಶೇ 21ರಷ್ಟು ಹೆಚ್ಚು ಮಳೆಯಾಗಿದೆ.


ಈ ಬಾರಿ ಮುಂಗಾರು ದೇಶದ ಬಹುತೇಕ ಎಲ್ಲಾ ರಾಜ್ಯಗಳಲ್ಲಿ ವಾಡಿಕೆಯಷ್ಟೇ ಇತ್ತು. ಸಾಮಾನ್ಯವಾಗಿ ಅಕ್ಟೋಬರ್ 10ರ ವೇಳೆಗೆ ಮುಂಗಾರು ಕೊನೆಯಾಗುತ್ತದೆ. ಆದರೆ ಈ ಬಾರಿ ಮುಂಗಾರು ಅಕ್ಟೋಬರ್ 18ರವರೆಗೂ ವಿಸ್ತರಿಸಿದೆ. ಅಕ್ಟೋಬರ್ ಎರಡನೇ ವಾರದಲ್ಲಿ ಬಂಗಾಳ ಕೊಲ್ಲಿ ಮತ್ತು ಅರಬ್ಬಿ ಸಮುದ್ರ, ಎರಡೂ ಕಡೆ ವಾಯುಭಾರ ಕುಸಿತ ಉಂಟಾದ ಕಾರಣ ಮಳೆ ತೀವ್ರತೆ ಪಡೆದಿತ್ತು. ಈಶಾನ್ಯ ರಾಜ್ಯಗಳನ್ನು ಹೊರತುಪಡಿಸಿ, ಬೇರೆಲ್ಲಾ ರಾಜ್ಯಗಳಲ್ಲಿ ಭಾರಿ ಮಳೆಯಾಗಿದೆ. ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕ, ಕೇರಳ, ಮಹಾರಾಷ್ಟ್ರ, ಗೋವಾ, ಗುಜರಾತ್, ಮಧ್ಯಪ್ರದೇಶ, ರಾಜಸ್ಥಾನ, ದೆಹಲಿ, ಪಂಜಾಬ್‌ನಲ್ಲಿ ವಿಪರೀತ ಪ್ರಮಾಣದ ಮಳೆಯಾಗಿದೆ.

ಮಹಾರಾಷ್ಟ್ರ ಮತ್ತು ಕೇರಳದಲ್ಲಿ ಮಳೆ ಸಂಬಂಧಿ ಅವಘಡಗಳಲ್ಲಿ 30ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಗುಜರಾತ್‌ನಲ್ಲಿ ಅಕ್ಟೋಬರ್ ಮೊದಲ ವಾರದಲ್ಲಿ ಭಾರಿ ಮಳೆಯಾಗಿತ್ತು. ಅಕ್ಟೋಬರ್ ಎರಡನೇ ವಾರದಲ್ಲಿ ಮಹಾರಾಷ್ಟ್ರದಲ್ಲಿ ಮತ್ತು ಈಗ ಮೂರನೇ ವಾರದಲ್ಲಿ ಕೇರಳ ಮತ್ತು ಕರ್ನಾಟಕದಲ್ಲಿ ಭಾರಿ ಮಳೆಯಾಗುತ್ತಿದೆ.

ಹವಾಮಾನ ವೈಪರೀತ್ಯವೂ ಇದಕ್ಕೆ ಒಂದು ಕಾರಣ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ಸಾಮಾನ್ಯವಾಗಿ ಅಕ್ಟೋಬರ್ ತಿಂಗಳಲ್ಲಿ ತೀವ್ರ ಸ್ವರೂಪದ ಮಳೆಯಾಗುವುದಿಲ್ಲ. ಆದರೆ 2016, 2017, 2019, 2020ರಲ್ಲಿ ಈ ಅವಧಿಯಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿತ್ತು. 2021ರಲ್ಲೂ ಇದು ಮುಂದುವರಿದಿದೆ. ಇದಕ್ಕೂ ಮುನ್ನ 2005 ಮತ್ತು 1997ರಲ್ಲಿ ಮಾತ್ರ ಅಕ್ಟೋಬರ್‌ನಲ್ಲಿ ಭಾರಿ ಮಳೆಯಾಗಿತ್ತು. ಹವಾಮಾನ ವೈಪರೀತ್ಯದ ಕಾರಣ ಮಳೆ ಮಾರುತಗಳ ವೇಗ, ದಿಕ್ಕು ಬದಲಾಗುತ್ತಿದೆ. ಈ ಕಾರಣದಿಂದಲೂ ಅಕ್ಟೋಬರ್‌ನಲ್ಲಿ ಹೆಚ್ಚು ಮಳೆಯಾಗಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ದಕ್ಷಿಣದಲ್ಲಿ ಮಳೆ ರಭಸ

ದಕ್ಷಿಣ ಭಾರತದ ಬಹುತೇಕ ರಾಜ್ಯಗಳಲ್ಲಿ ಅಕ್ಟೋಬರ್ ತಿಂಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಕೇರಳದಲ್ಲಿ ಒಂದೂವರೆ ಪಟ್ಟು ಹೆಚ್ಚು ಮಳೆಯಾಗಿದ್ದರೆ, ಬೇರೆ ರಾಜ್ಯಗಳಲ್ಲಿ ವಾಡಿಕೆಗಿಂತ ಶೇಕಡ 50ಕ್ಕೂ ಹೆಚ್ಚು ಮಳೆಯಾಗಿದೆ. ಹಿಂಗಾರು ಮಳೆಯಲ್ಲಷ್ಟೇ ಹೆಚ್ಚು ಮಳೆ ಪಡೆಯುವ ತಮಿಳುನಾಡಿನಲ್ಲೂ ಈ ತಿಂಗಳಿನಲ್ಲಿ ಭಾರಿ ಪ್ರಮಾಣದ ಮಳೆಯಾಗಿದೆ. ಈ ಎಲ್ಲಾ ರಾಜ್ಯಗಳಲ್ಲಿ ಒಂದು ತಿಂಗಳಲ್ಲಿ ಆಗುತ್ತಿದ್ದ ಮಳೆಯ ಪ್ರಮಾಣಕ್ಕಿಂತ ಹೆಚ್ಚು ಮಳೆಯು ತಿಂಗಳ ಮೊದಲ 18 ದಿನಗಳಲ್ಲೇ ಆಗಿದೆ. ಆಂಧ್ರಪ್ರದೇಶದಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ತೆಲಂಗಾಣದಲ್ಲಿ ವಾಡಿಕೆಗಿಂತ ಸ್ವಲ್ಪ ಕಡಿಮೆ ಮಳೆಯಾಗಿದೆ.



ಪ್ರಜಾವಾಣಿ ಗ್ರಾಫಿಕ್ಸ್
ಆಧಾರ: ಹವಾಮಾನ ಇಲಾಖೆ

ರಾಜ್ಯದಲ್ಲಿ ಮಳೆ ಏಕೆ?

ಬೆಂಗಳೂರು: 'ಅರಬ್ಬಿ ಸಮುದ್ರ ಹಾಗೂ ಬಂಗಾಳಕೊಲ್ಲಿಯಲ್ಲಿ ಏಕಕಾಲಕ್ಕೆ ಸಂಭವಿಸಿದ ವಾಯುಭಾರ ಕುಸಿತದಿಂದ ದಕ್ಷಿಣ ಭಾರತದ ರಾಜ್ಯಗಳಲ್ಲಿ ಭಾರಿ ಮಳೆಯಾಯಿತು. ಇದರ ಪರಿಣಾಮ ರಾಜ್ಯದಲ್ಲೂ ಮಳೆ ನಿರಂತರವಾಗಿ ಸುರಿಯಿತು' ಎಂದು ಹವಾಮಾನ ಇಲಾಖೆಯ ಹವಾಮಾನ ತಜ್ಞ ಸದಾನಂದ ಅಡಿಗ 'ಪ್ರಜಾವಾಣಿ'ಗೆ ತಿಳಿಸಿದರು.



'ಎರಡೂ ದಿಕ್ಕಿನಲ್ಲಿ ಸಂಭವಿಸಿದ ಹವಾಮಾನ ವೈಪರೀತ್ಯದಿಂದ ನೀರಾವಿ ಹೆಚ್ಚಾಗಿ, ರಾಜ್ಯದ ಕರಾವಳಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಮಳೆಗೆ ಪೂರಕವಾದ ವಾತಾವರಣ ಸೃಷ್ಟಿಯಾಗಿತ್ತು. ಈ ವಾರದಲ್ಲಿ ವಾಯುಭಾರ ಕುಸಿತಗಳ ಚಲನೆ ನಿಧಾನಗತಿಯಲ್ಲಿ ಸಾಗಿದ್ದರಿಂದ ಸತತವಾಗಿ ಮಳೆಯಾಯಿತು. ರಾಜ್ಯದಲ್ಲಿ ಸದ್ಯಕ್ಕೆ ಮಳೆ ತಗ್ಗಿದ್ದು, ಮುಂದಿನ ಎರಡು ದಿನಗಳವರೆಗೆ ಮಳೆಯಾಗುವ ಸೂಚನೆಗಳಿಲ್ಲ' ಎಂದು ಮಾಹಿತಿ ನೀಡಿದರು.

ಗಾಡ್ಗೀಲ್ ವರದಿ ಚರ್ಚೆ ಮುನ್ನೆಲೆಗೆ

ಕೇರಳದಲ್ಲಿ 2018ರಲ್ಲಿ ಸಂಭವಿಸಿದ್ದಂಥ ಪ್ರವಾಹವು ಮರುಕಳಿಸಬಹುದು ಎಂಬ ಭೀತಿಯಲ್ಲಿ ಕೇರಳದ ಜನರಿದ್ದಾರೆ. ಪರಿಸರ ತಜ್ಞ ಮಾಧವ್ ಗಾಡ್ಗೀಲ್ ನೇತೃತ್ವದ ಸಮಿತಿಯು 2011ರಲ್ಲಿ ನೀಡಿದ್ದ ವರದಿ ಅನುಷ್ಠಾನ ಮಾಡಿದ್ದಿದ್ದರೆ, ಈ ಮಟ್ಟದ ಪ್ರಾಕೃತಿಕ ವಿಕೋಪವನ್ನು ಕೇರಳ ಎದುರಿಸಬೇಕಿರಲಿಲ್ಲ ಎಂಬ ಮಾತುಗಳು ಮತ್ತೆ ಮುನ್ನೆಲೆಗೆ ಬಂದಿವೆ. ಈಗ ಸಂಭವಿಸುತ್ತಿರುವ ವಿಪತ್ತುಗಳನ್ನು ಜನರೇ 'ಆಮಂತ್ರಿಸಿದ ವಿಪತ್ತು' ಎಂದು ಪರಿಸರ ತಜ್ಞರು ಕರೆದಿದ್ದಾರೆ.

ದೇಶದ ಪಶ್ಚಿಮ ಘಟ್ಟಗಳನ್ನು ಮೂರು ವಲಯಗಳನ್ನಾಗಿ ಮಾಧವ್ ಗಾಡ್ಗೀಲ್ ನೇತೃತ್ವದ ಸಮಿತಿ ವಿಂಗಡಿಸಿತ್ತು. ಅದರಲ್ಲಿ ಶೇ 67ರಷ್ಟು ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ ಎಂದು ಗುರುತಿಸಿತ್ತು. ವರದಿಯ ಅನ್ವಯ ಕೇರಳದ ಶೇ 70ರಷ್ಟು ಭಾಗ ವಿವಿಧ ಪರಿಸರ ಸೂಕ್ಷ್ಮ ವಲಯಗಳ ಅಡಿ ಬರುತ್ತದೆ. ಈ ಹಿನ್ನೆಲೆಯಲ್ಲಿ, ಗಣಿಗಾರಿಕೆ, ಅರಣ್ಯ ನಾಶ, ಭೂಕಬಳಿಕೆ, ಅವೈಜ್ಞಾನಿಕವಾಗಿ ನಡೆಯುತ್ತಿರುವ ಪ್ರವಾಸೋದ್ಯಮ ಚಟುವಟಿಕೆಗಳು, ಖಾಸಗಿ ಜನರಿಂದ ಅರಣ್ಯ ಖರೀದಿಯಂಥ ಚಟುವಟಿಕೆಗಳನ್ನು ಕೇರಳದಲ್ಲಿ ನಿಷೇಧಿಸುವಂತೆ ವರದಿಯಲ್ಲಿ ಹೇಳಲಾಗಿತ್ತು.

ಗಾಡ್ಗೀಲ್ ವರದಿಯಲ್ಲಿ ಪಟ್ಟಿಮಾಡಲಾಗಿದ್ದ ಪರಿಸರ ಸೂಕ್ಷ್ಮ ಪ್ರದೇಶಗಳ ವಲಯ–1ರಲ್ಲಿ ಇಡುಕ್ಕಿ ಮತ್ತು ವಯನಾಡು ಸ್ಥಾನ ಪಡೆದಿದ್ದವು. ಈ ತಾಲ್ಲೂಕುಗಳಲ್ಲೇ 2018ರ ಪ್ರವಾಹದಲ್ಲಿ ಅತಿ ಹೆಚ್ಚು ದುರಂತಗಳು ಸಂಭವಿಸಿದ್ದವು.

ಕೇರಳದಲ್ಲಿ ಸಂಭವಿಸುತ್ತಿರುವ ಶೇ 67ರಷ್ಟು ಭೂಕುಸಿತಗಳು ಭೂಮಿಯ ಬಳಕೆಯ ಮಾದರಿಗಳಿಂದ ಎಂದು ಪರಿಸರ ತಜ್ಞ ಕೆ. ಸಹದೇವನ್ ಕೂಡಾ ಹೇಳಿದ್ದಾರೆ. ರಾಜ್ಯ ಸರ್ಕಾರವು 10 ವರ್ಷಗಳಷ್ಟು ಹಳೆಯದಾದ ಅಪಾಯ ವಲಯ ನಕ್ಷೆಯನ್ನು ಬಳಸುತ್ತಿದೆ. ಅತಿ ಸೂಕ್ಷ್ಮ ಅಪಾಯ ವಲಯಗಳನ್ನು ಈ ನಕ್ಷೆ ಗುರುತಿಸುವುದಿಲ್ಲ. ಪಶ್ಚಿಮ ಘಟ್ಟಗಳ ದುರ್ಬಳಕೆ ನಿರಂತರವಾಗಿ ನಡೆಯುತ್ತಿರುವುದರಿಂದ ಸದ್ಯದಲ್ಲೇ ಕೇರಳ ಪ್ರಾಕೃತಿಕ ವಿಕೋಪವನ್ನು ಎದುರಿಸಲಿದೆ ಎಂದು 2013ರಲ್ಲಿ ಗಾಡ್ಗೀಲ್ ಅವರು ಪುನರುಚ್ಚರಿದ್ದರು.



ಕೇರಳದ ಕೋಟಯಂ ಜಿಲ್ಲೆಯ ಕೂಟಿಕಲ್ ಎಂಬ ಪ್ರದೇಶದಲ್ಲಿ ಪ್ರವಾಹ —ಪಿಟಿಐ ಚಿತ್ರ

ಅಕ್ಟೋಬರ್ ತಿಂಗಳಲ್ಲಿ ಭಾರಿ ಮಳೆ

ಭಾರಿ ಪ್ರಮಾಣದಲ್ಲಿ ಸುರಿಯುವ ಮಳೆಗೆ ಮುಖ್ಯವಾಗಿ ಎರಡು ಕಾರಣಗಳನ್ನು ಗುರುತಿಸಲಾಗಿದೆ. ಮೊದಲನೆಯದ್ದು ಮೆಡಿಟರೇನಿಯನ್ ಪ್ರಾಂತ್ಯದಲ್ಲಿ ಉದ್ಭವಿಸುವ ಚಂಡಮಾರುತದ ಪ್ರಭಾವ. ಇದು ಭಾರತ ಉಪಖಂಡದ ಉತ್ತರ ಭಾಗಗಳಿಗೆ ಹಠಾತ್ ಮಳೆಯನ್ನು ತರುತ್ತದೆ.

ಎರಡನೆಯದು ವಾಯುಭಾರ ಕುಸಿತ. ಅರಬ್ಬಿ ಸಮುದ್ರ ಮತ್ತು ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ವರದಿಯಾಗಿದ್ದು, ಹೆಚ್ಚಿನ ಮಳೆಗೆ ಕಾರಣವಾಗಿದೆ. ಈ ಮಳೆ ಇದೇ 21ರವರೆಗೂ ಮುಂದುವರಿಯುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಅಕ್ಟೋಬರ್ 14ರಂದು ಅರಬ್ಬಿ ಸಮುದ್ರದಲ್ಲಿ ಶುರುವಾದ ವಾಯುಭಾರ ಕುಸಿತ ಕೇಂದ್ರವು ಕೇರಳ ಕರಾವಳಿಗೆ ಹತ್ತಿರವಿದೆ. ಹೀಗಾಗಿ ರಾಜ್ಯದ ದಕ್ಷಿಣದ ಭಾಗದ ಆರು ಜಿಲ್ಲೆಗಳು ಗುರುವಾರ 24 ಗಂಟೆಗಳಲ್ಲಿ 204 ಮಿಲಿಮೀಟರ್ ಮಳೆ ಎದುರಿಸುವಂತಾಯಿತು.

ಈ ಎರಡು ವಾಯುಭಾರ ಕುಸಿತ ಕೇಂದ್ರಗಳ ನಡುವೆ ಒಂದು ರೀತಿಯ ಸಂವಹನವಿದೆ ಎಂದು ಇಲಾಖೆ ಮಹಾನಿರ್ದೇಶಕ ಎಂ. ಮಹಾಪಾತ್ರಾ ಹೇಳಿದ್ದಾರೆ. ಈ ಪರಸ್ಪರ ಸಂವಹನ ಮತ್ತು ಭಾರಿ ಪ್ರಮಾಣದ ಗಾಳಿ ಬೀಸುವಿಕೆಗಳು ಕೇರಳದಲ್ಲಿ ಧಾರಾಕಾರ ಮಳೆ ಸುರಿಯಲು ಪ್ರಾಥಮಿಕ ಕಾರಣಗಳು ಎಂದು ಅವರು ವಿಶ್ಲೇಷಿಸಿದ್ದಾರೆ.

ಮುಂಗಾರು ಹಿಂದೆ ಸರಿವ ಪ್ರಕ್ರಿಯೆ ತಡ

ಈ ವರ್ಷ ನೈರುತ್ಯ ಮುಂಗಾರು ಮಾರುತಗಳು ಹಿಂದೆ ಸರಿಯುವ ಪ್ರಕ್ರಿಯೆ ಗಮನಾರ್ಹವಾಗಿ ವಿಳಂಬವಾಗಿದೆ. ಪಶ್ಚಿಮ, ಉತ್ತರ, ಮಧ್ಯ ಮತ್ತು ಪೂರ್ವ ಭಾರತದಲ್ಲಿ ಈ ಪ್ರಕ್ರಿಯೆ ಈಗಾಗಲೇ ಮುಗಿದಿದ್ದರೆ, ದಕ್ಷಿಣ ಭಾಗದಲ್ಲಿ ಸಕ್ರಿಯವಾಗಿದೆ. ಹೀಗಾಗಿ ಕೇರಳ ಸೇರದಿಂತೆ ದಕ್ಷಿಣ ರಾಜ್ಯಗಳಲ್ಲಿ ಒಂದು ವಾರದಿಂದ ಗುಡುಗು ಸಹಿತ ಬಿರುಗಾಳಿ ಮಳೆ ಆಗುತ್ತಿದೆ.

ವಾಡಿಕೆಯಂತೆ ಪ್ರತೀ ವರ್ಷದ ಸೆಪ್ಟೆಂಬರ್ 17ಕ್ಕೆ ಮುಂಗಾರು ಹಿಂದೆ ಸರಿಯುವ ಪ್ರಕ್ರಿಯೆ ಶುರುವಾಗಬೇಕು. ಆದರೆ ಈ ವರ್ಷ, ಅಕ್ಟೋಬರ್ 6ರಂದು ಆರಂಭವಾಗಿದೆ. ಹೀಗಾಗುತ್ತಿರುವುದು ಇದು ಸತತ 11ನೇ ವರ್ಷ. ಬದಲಾಗುತ್ತಿರುವ ಹವಾಮಾನದಿಂದಾಗಿ ದೇಶದಲ್ಲಿ ಮುಂಗಾರು ಹಿಂದೆ ಸರಿಯುವ ವೇಳಾಪಟ್ಟಿಯೂ ಬದಲಾಗುತ್ತಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಹಿಂದಿನ ಕೆಲವು ವರ್ಷಗಳ ದಾಖಲೆಗಳನ್ನು ಗಮನಿಸಿದರೆ, ಭಾರತದಲ್ಲಿ ಮುಂಗಾರು ಆರಂಭ ಮತ್ತು ವಾಪಸಾತಿಯು ನಿಗದಿತ ಅವಧಿಯಲ್ಲಿ ಆಗಿಲ್ಲ. 2017ರಲ್ಲಿ ವಾಡಿಕೆಗಿಂತ 22 ದಿನ ತಡವಾಗಿ ಮುಂಗಾರು ವಾಪಸಾಗಿತ್ತು.

ಪೆಸಿಫಿಕ್ ಮಹಾಸಾಗರದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಎಲ್‌ನಿನೊ ವಿದ್ಯಮಾನ, ಹಿಂದೂ ಮಹಾಸಾಗರದ ದ್ವಿಧ್ರುವಿ (ಐಒಡಿ) ಮತ್ತು ಮ್ಯಾಡೆನ್ ಜೂಲಿಯನ್ ಆಸಿಲೇಷನ್ ಪರಿಸ್ಥಿತಿಗಳು ಅಕ್ಟೋಬರ್ ಮಳೆ ಮುಂದುವರಿಯಲು ಹಾಗೂ ಮುಂಗಾರು ತಡವಾಗಿ ವಾಪಸಾಗಲು ಕಾರಣವಿರಬಹುದು ಎಂದು ಅಂದಾಜಿಸಲಾಗಿದೆ.

ವಿವಾದ ಸೃಷ್ಟಿಸಿದ ಜಾಹೀರಾತು

'ಅಧ್ಯಾಪಕ ಹುದ್ದೆ ಹಿಂದೂಗಳಿಗೆ ಮಾತ್ರ'

• ಇ.ಟಿ.ಬಿ. ಶಿವಪ್ರಿಯನ್

ಚೆನ್ನೈ: ತಮಿಳುನಾಡು ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆ ಹೊಸದಾಗಿ ಕೊಳತ್ತೂರ್‌ನಲ್ಲಿ ಆರಂಭಿಸುತ್ತಿರುವ ಕಾಲೇಜಿನ ಅಧ್ಯಾಪಕ ಹುದ್ದೆ ನೇಮಕಾತಿಯು ವಿವಾದಕ್ಕೆ ಕಾರಣವಾಗಿದೆ. ನೇಮಕಾತಿಗೆ ಅರ್ಜಿ ಆಹ್ವಾನ ಜಾಹೀರಾತಿನಲ್ಲಿ 'ಹಿಂದೂಗಳು ಮಾತ್ರ ಅರ್ಜಿ ಸಲ್ಲಿಸಬಹುದು' ಎಂಬ ಉಲ್ಲೇಖವು ವಿವಾದಕ್ಕೆ ಕಾರಣವಾಗಿರುವ ಅಂಶ. ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ವಿಧಾನಸಭೆಯಲ್ಲಿ ಕೊಳತ್ತೂರ್ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ.

ಅರುಳ್ಮಿಗು ಕಪಾಲೀಶ್ವರರ್ ಕಲೆ ಮತ್ತು ವಿಜ್ಞಾನ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ನೇರ ಸಂದರ್ಶನವು ಅಕ್ಟೋಬರ್ 18ರಂದು ನಡೆಯಲಿದೆ. ಹಿಂದೂಗಳು ಮಾತ್ರ ಅರ್ಜಿ ಸಲ್ಲಿಸಬಹುದು ಎಂಬ ಜಾಹೀರಾತು ತಮಿಳುನಾಡಿನ ಎಲ್ಲ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು.

ಈ ಜಾಹೀರಾತನ್ನು ಹಲವರು ವಿರೋಧಿಸಿದ್ದಾರೆ. ಡಿಎಂಕೆಯ ಬೆಂಬಲಿಗರೂ ಈ ಕ್ರಮವನ್ನು ಖಂಡಿಸಿದ್ದಾರೆ. ಅಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸುವವರು ಹಿಂದೂಗಳು ಮಾತ್ರವೇ ಏಕೆ ಆಗಿರಬೇಕು ಎಂದು ಪ್ರಶ್ನಿಸಿದ್ದಾರೆ.

ಮುಂದಿನ ವರ್ಷದ ವೇಳೆಗೆ 10 ಕಾಲೇಜುಗಳನ್ನು ಆರಂಭಿಸುವುದಾಗಿ ಧಾರ್ಮಿಕ ದತ್ತಿ ಇಲಾಖೆ ಹೇಳಿತ್ತು. ಆ ಕಾಲೇಜುಗಳ ಪೈಕಿ ಇದೂ ಒಂದು.

ಡಿಎಂಕೆ ಮತ್ತು ಸ್ಟಾಲಿನ್ ಜೊತೆ ಉತ್ತಮ ಬಾಂಧವ್ಯ ಹೊಂದಿರುವ ದ್ರಾವಿಡರ್ ಕಳಗಂ ಅಧ್ಯಕ್ಷ ಕೆ. ವೀರಮಣಿ ಅವರು ಕಾಲೇಜು ತೆರೆಯುವ ಧಾರ್ಮಿಕ ದತ್ತಿ ಇಲಾಖೆಯ ಯೋಜನೆಯನ್ನು ಮೆಚ್ಚಿಕೊಂಡಿದ್ದಾರೆ. ಆದರೆ ಈ ಜಾಹೀರಾತನ್ನು 'ಅಸಾಂವಿಧಾನಿಕ' ಎಂದು ಕರೆದಿದ್ದಾರೆ. ಒಂದು ಶಿಕ್ಷಣ ಸಂಸ್ಥೆಯ ಸಿಬ್ಬಂದಿ ನೇಮಕಕ್ಕಾಗಿ ಜಾಹೀರಾತು ನೀಡಿರುವ ಕಾರಣ, ಅರ್ಜಿ ಹಾಕಲು ಅರ್ಹತೆ ಇರುವ ಎಲ್ಲರಿಗೂ ಅವಕಾಶ ನೀಡಬೇಕು. ಅರ್ಚಕ ಹುದ್ದೆ ಮತ್ತು ದೇವಸ್ಥಾನದ ಇತರ ಹುದ್ದೆಗಳಿಗೆ ಮಾತ್ರ ಹಿಂದೂಗಳ ಅರ್ಜಿಯನ್ನಷ್ಟೇ ಆಹ್ವಾನಿಸಬಹುದು. ಆದರೆ ಈ ನಿಯಮ ಶಿಕ್ಷಕರ ನೇಮಕಾತಿಗೆ ಅನ್ವಯ ಆಗುವುದಿಲ್ಲ. ಈ ಅರ್ಜಿಗೆ ಸಂಬಂಧಿಸಿದಂತೆ ನಾಳೆ ಯಾರಾದರೂ ಕೋರ್ಟ್ ಮೆಟ್ಟಿಲೇರಿದರೆ, ಕೋರ್ಟ್‌ನಲ್ಲಿ ಈ ಇಲಾಖೆಗೆ ಸೋಲುಂಟಾಗುವುದು ಖಚಿತ ಎಂದಿದ್ದಾರೆ.

'ಕಾಯ್ದೆ ಮೀರಿಲ್ಲ'

ತಮಿಳುನಾಡು ಹಿಂದೂ ಧಾರ್ಮಿಕ ಮತ್ತು ದತ್ತಿ ಕಾಯ್ದೆ –1959ರ ಸೆಕ್ಷನ್ 10ರ ಪ್ರಕಾರ ಈ ಜಾಹೀರಾತು ನ್ಯಾಯ ಸಮ್ಮತವಾಗಿಯೇ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ. 'ಈ ಕಾಯ್ದೆ ಅಡಿ ನೇಮಕವಾಗುವ ಆಯುಕ್ತರು, ಎಲ್ಲಾ ಉಪ ಮತ್ತು ಸಹಾಯಕ ಆಯುಕ್ತರು, ಇತರ ಎಲ್ಲಾ ಅಧಿಕಾರಿಗಳು ಅಥವಾ ಈ ಕಾಯ್ದೆಯ ಉದ್ದೇಶಗಳನ್ನು ನಿರ್ವಹಿಸುವ ಸಲುವಾಗಿ ನೇಮಕಗೊಳ್ಳುವ ಸೇವಕರು ಕಡ್ಡಾಯವಾಗಿ ಹಿಂದೂ ಧರ್ಮ ಅನುಸರಿಸುವವರು ಆಗಿರಬೇಕು. ಹಿಂದೂ ಧರ್ಮವನ್ನು ಅನುಸರಿಸುವುದನ್ನು ನಿಲ್ಲಿಸಿದ ಕ್ಷಣದಿಂದಲೇ ಅವರು ಈ ಹುದ್ದೆಯಲ್ಲಿ ಮುಂದುವರಿಯುವ ಅವಕಾಶ ಕಳೆದುಕೊಳ್ಳುತ್ತಾರೆ' ಎಂದು ಕಾಯ್ದೆಯಲ್ಲಿ ಹೇಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

'ಜಾಹೀರಾತು ನ್ಯಾಯಬದ್ಧ'

ಧಾರ್ಮಿಕ ದತ್ತಿ ಇಲಾಖೆಯ ಮಾಜಿ ಅಧಿಕಾರಿಯೊಬ್ಬರು ಇಲಾಖೆಯ ನಡೆಯನ್ನು ಸಮರ್ಥಿಸಿಕೊಂಡಿದ್ದಾರೆ. ಹಿಂದೂಗಳು ಮಾತ್ರ ಅರ್ಜಿ ಸಲ್ಲಿಸಬೇಕು ಎಂದು ಇಲಾಖೆ ನೀಡಿರುವ ಜಾಹೀರಾತಿನಲ್ಲಿ ಯಾವ ತಪ್ಪೂ ಇಲ್ಲ. ಧಾರ್ಮಿಕ ದತ್ತಿ ಕಾಯ್ದೆ ಪ್ರಕಾರ ದೇವಸ್ಥಾನಗಳಿಗೆ ಬರುವ ಆದಾಯವನ್ನು ಹಿಂದೂಗಳಿಗಾಗಿ ಮಾತ್ರ ವ್ಯಯಿಸಬೇಕು. ಕಾಲೇಜನ್ನು ದೇವಸ್ಥಾನ ನಿರ್ವಹಿಸುತ್ತಿದೆ ಮತ್ತು ಇಲ್ಲಿಯ ಉದ್ಯೋಗಿಗಳಿಗೆ ವೇತನವನ್ನು ದೇವಸ್ಥಾನ ಮಂಡಳಿಯಿಂದಲೇ ನೀಡುವುದರಿಂದ ಉದ್ಯೋಗವನ್ನು ಹಿಂದೂಗಳಿಗೆ ಮಾತ್ರ ನೀಡಬೇಕಾಗುತ್ತದೆ. ಹಾಗಾಗಿ ಹಿಂದೂಗಳು ಮಾತ್ರ ಅರ್ಜಿ ಸಲ್ಲಿಸಬಹುದು ಎಂಬ ನಿಲುವನ್ನು ಟೀಕಿಸಲು ಸಾಧ್ಯವಿಲ್ಲ. ಆದರೆ ಈ ನೀತಿ ವಿದ್ಯಾರ್ಥಿಗಳಿಗೆ ಅನ್ವಯವಾಗುವುದಿಲ್ಲ. ಏಕೆಂದರೆ ಅವರಿಗೆ ದೇವಸ್ಥಾನದಿಂದ ಯಾವ ವೇತನವೂ ಸಂದಾಯ ಆಗುವುದಿಲ್ಲ ಎಂದಿದ್ದಾರೆ.

ಡಿಎಂಕೆಯ ಮಿತ್ರ ಪಕ್ಷವಾದ ವಿದುತಲೈ ಚಿರುತಾಯಿಗಳ್ ಕಚ್ಚಿಯ ಪ್ರಧಾನ ಕಾರ್ಯದರ್ಶಿ ಡಿ. ರವಿಕುಮಾರ್ ಕೂಡಾ ಧಾರ್ಮಿಕ ಮತ್ತು ದತ್ತಿ ಇಲಾಖೆಯ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ. ಸರ್ಕಾರವು ಈ ಇಲಾಖೆಯ ಅಡಿ ಮತ್ತಷ್ಟು ಇಂಥ ಕಾಲೇಜುಗಳನ್ನು ತೆರೆಯಬೇಕು. ಆದಷ್ಟು ಬೇಗ ಬಡವರಿಗಾಗಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳನ್ನೂ ತೆಗೆಯಬೇಕು. ಆದರೆ ನೇಮಕಾತಿಗಳು ಕಾನೂನಿನ ಅನ್ವಯವೇ ನಡೆಯಬೇಕು ಎಂದಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ನಗರವೊಂದರ ರಸ್ತೆಯಲ್ಲಿ ನಿಲ್ಲಿಸಿರುವ ವಾಹನಗಳನ್ನು ಗುಂಪೊಂದು ಹಾನಿಗೀಡು ಮಾಡುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ವಿಡಿಯೊದಲ್ಲಿ ಜೈ ಶ್ರೀರಾಮ್ ಎಂದು ಘೋಷಣೆ ಕೂಗುತ್ತಿರುವುದು ಕೇಳುತ್ತದೆ. 'ಉತ್ತರ ಪ್ರದೇಶದ ಪ್ರತಾಪ್‌ಗಡದ ಲಾಲ್‌ಗಂಜ್ ನಗರದಲ್ಲಿ ಮುಸ್ಲಿಮರು ದುರ್ಗಾ ಪೂಜೆ ಪೆಂಡಾಲ್‌ಗಳನ್ನು ಧ್ವಂಸಗೊಳಿಸಿದರು. ಅದಕ್ಕೆ ಪ್ರತ್ಯುತ್ತರವಾಗಿ ಹಿಂದೂಗಳ ಗುಂಪು ಮುಸ್ಲಿಮರನ್ನು ಥಳಿಸಿತು. ಜೊತೆಗೆ, ಮಸೀದಿಗಳ ಮೇಲೆ ಹಾರಿಸಿದ್ದ ಮುಸ್ಲಿಮರ ಧಾರ್ಮಿಕ ಧ್ವಜಗಳನ್ನು ತೆಗೆದುಹಾಕಿತು' ಎಂದು ಅಡಿಬರಹವನ್ನೂ ನೀಡಲಾಗಿದೆ.



ಈ ಮಾಹಿತಿ ಸುಳ್ಳು ಎಂಬುದನ್ನು ಉತ್ತರ ಪ್ರದೇಶ ಪೊಲೀಸರು ದೃಢಪಡಿಸಿದ್ದಾರೆ. ಈ ಘಟನೆ 2021ರ ಅ.5ರಂದು ಛತ್ತೀಸಗಡದ ಕವರ್ಧಾದಲ್ಲಿ ನಡೆದಿದೆ. ಈ ಘಟನೆಗೂ ಪ್ರತಾಪಗಡಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ಟ್ವೀಟ್ ಮಾಡಿದೆ. ಜೊತೆಗೆ, 'ನಯಾ ಭಾರತ್' ಎಂಬ ಸುದ್ದಿ ಪೋರ್ಟಲ್‌ನಲ್ಲಿ ಆ ಘಟನೆಗೆ ಸಂಬಂಧಿಸಿದಂತೆ ಪ್ರಕಟವಾಗಿದ್ದ ಸುದ್ದಿಯನ್ನೂ ಪೋಸ್ಟ್ ಮಾಡಿದೆ. ಧ್ವಜ ಹಾರಿಸುವ ಕುರಿತು ನಡೆದಿದ್ದ ಸಂಘರ್ಷ ಕುರಿತ ವಿಡಿಯೊ ಇದು ಎಂದು ಟ್ವೀಟ್‌ನಲ್ಲಿ ಹೇಳಲಾಗಿದೆ. ಈ ವರದಿಯನ್ನು ಆಲ್ಟ್ ನ್ಯೂಸ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಸಾರ್ಥಕ ಕ್ಷಣಗಳು

ಅಗೆದು ಗೊಬ್ಬರವಿಕ್ಕಿ ನೀರೆರೆದು ತೋಟಿಗನು |
ಜಗಿವ ಮುಳ್ಳಿರಿತಗಳ ಸೈರಿಸೆ ಗುಲಾಬಿ ||
ನಗುವುದೊಂದರೆನಿಮಿಷ; ನಗಲು ಬಾಳ್ಮುಗಿಯುವುದು |
ಮುಗುಳು ದುಡಿತಕೆ ತಣಿಸು – ಮಂಕುತಿಮ್ಮ
|| 478 ||

ಪದ-ಅರ್ಥ: ತೋಟಿಗ = ತೋಟಗಾರ, ಮಾಲಿ, ಜಗಿವ = ಚುಚ್ಚುವ, ಮುಳ್ಳಿರಿತ = ಮುಳ್ಳು + ಇರಿತ, ಸೈರಿಸೆ = ತಾಳಿಕೊಂಡಾಗ, ನಗುವುದೊಂದರೆನಿಮಿಷ = ನಗುವುದು + ಒಂದು + ಅರೆ(ಅರ್ಧ) + - ನಿಮಿಷ, ಮುಗುಳು = ಮೊಗ್ಗು, ಮುಗುಳ್ನಗೆ, ತಣಿಸು = ತೃಪ್ತಿ.

ವಾಚ್ಯಾರ್ಥ: ನೆಲವನ್ನು ಅಗಿದು, ಗೊಬ್ಬರ ಹಾಕಿ, ನೀರೆರೆದು, ಮುಳ್ಳುಗಳ ಚುಚ್ಚುವಿಕೆಯನ್ನು ತೋಟಗಾರ ಸಹಿಸಿಕೊಂಡಾಗ ಗುಲಾಬಿ ಹೂವು ಕೆಲಕಾಲ ಅರಳಿ ನಗುತ್ತದೆ. ಮುಂದೆ ಕೆಲವೇ ಕ್ಷಣಗಳಲ್ಲಿ ಅದರ ಬಾಳು ಮುಗಿಯುತ್ತದೆ. ಆ ಕ್ಷಣದ ಅರಳುವಿಕೆಯೆ ದುಡಿತದ ತೃಪ್ತಿ.

ವಿವರಣೆ: ಈಶಾನ್ಯ ನೇಪಾಳದಲ್ಲಿ ಖುಂಬು ಎಂಬ ಪ್ರದೇಶದಲ್ಲಿ ತೆಂಗ್ಬೋಚೆ ಎಂಬ ಹಳ್ಳಿ. ಅಲ್ಲಿ ಒಂದು ಶೆರ್ಪಾ ಕುಟುಂಬ. ಅವರಿಗೆ ಬಡತನದ ಜೊತೆಗೆ ಮಕ್ಕಳ ಭಾಗ್ಯ. ಹುಟ್ಟಿದ ಹದಿಮೂರು ಮಕ್ಕಳಲ್ಲಿ ಬಹುತೇಕರು ಬಾಲ್ಯದಲೇ ತೀರಿಹೋದರು. ಹನ್ನೊಂದನೆಯ ಮಗು ತೇನ್ಸಿಂಗ್. ಪರ್ವತದ ಬುಡದಲ್ಲೆ ಹುಟ್ಟಿ ಬೆಳೆದ ಹುಡುಗನಿಗೆ ಕಷ್ಟದ ಬದುಕು ಅಭ್ಯಾಸ. ದೇಹ ತುಂಬ ಗಟ್ಟಿ. ಮುಖದ ತುಂಬ ಹರಡುತ್ತಿದ್ದ ಅವನ ಮಂದಹಾಸ ಎಲ್ಲರಿಗೆ ಪ್ರಿಯ. ಅವನು ಬೆಳೆದದ್ದು ಪರ್ವತದ ಶೃಂಗ ಚೋಮೋಲುಂಗ್ಮಾವನ್ನು ನೋಡುತ್ತಲೇ. ಅದು ಮೌಂಟ್ ಎವರೆಸ್ಟ್‌ಗೆ ಟಿಬೆಟಿಯನ್ನರು ಕರೆದ ಹೆಸರು. ಹಾಗೆಂದರೆ 'ಭೂಮಿಯ ಮೇಲಿನ ದೇವತೆ' ಎಂದರ್ಥ. ನೇಪಾಳಿಗಳು ಅದನ್ನು ಸಾಗರಮಾತಾ ಎನ್ನುತ್ತಾರೆ. ಶೆರ್ಪಾ ಆದ ತೇನ್ಸಿಂಗ್‌ನಿಗೆ ಪರ್ವತವನ್ನು ಹತ್ತುವುದು ಅನಿವಾರ್ಯ ಕರ್ಮ. ಪರ್ವತಾರೋಹಿಗಳಿಗೆ ಮಾರ್ಗದರ್ಶನ ಮಾಡುವ ಇವರು ದೇವತೆಗಳೇ. ಪರ್ವತಾರೋಹಿಗಳ ಸಾಮಗ್ರಿಗಳನ್ನು ಹೊತ್ತು, ಹಗ್ಗವನ್ನು ಹಾಕಿ, ಹಿಮದ ಹಾದಿಯನ್ನು ಪಿಕಾಸಿಯಿಂದ ಅಗೆದು, ದಾರಿ ತೋರುವವರು ಇವರೇ. ತೇನ್ಸಿಂಗ್ ಸುಮಾರು ಎಂಭತ್ತು ಕಿಲೋಗ್ರಾಮಿನಷ್ಟು ಭಾರವನ್ನು ಹೊತ್ತು ಸಲೀಸಾಗಿ ಮೇಲೇರುತ್ತಿದ್ದನಂತೆ ಆತನಿಗೆ ಕನಸು ಒಂದೇ. ಎವರೆಸ್ಟ್ ಪರ್ವತ ಏರುವುದು.

ಅದೆಷ್ಟು ಬಾರಿ ವಿಫಲ ಯತ್ನಗಳು! ಆತ ತೀರ್ಮಾನ ಮಾಡುವವನಲ್ಲ, ಪರ್ವತಾರೋಹಿಗಳು ಹೇಳಿದಂತೆ ನಡೆಯಬೇಕು; ಆದರೆ ಅವರಿಗೆ ಮಾರ್ಗದರ್ಶನ ಮಾಡಬೇಕು. ಅದೆಷ್ಟು ಜನ ಸಹಚರರಾದ ಶೆರ್ಪಾಗಳು ಹಿಮದಲ್ಲಿ ಮುಚ್ಚಿ ಮರೆಯಾಗಿ ಹೋದದ್ದನ್ನ ಕಂಡಿದ್ದನೋ? ಮೂವತ್ತು ವರ್ಷಗಳ ಸತತವಾದ ಪರಿಶ್ರಮ. ಸೋಲು, ಗಾಯ, ನೋವುಗಳ ಸರಮಾಲೆ. ಆದರೆ ವಿಧಿಯ ಪರೀಕ್ಷೆಗೂ ಮಿತಿ ಇದೆ. ಎವರೆಸ್ಟ್ ಶಿಖರಕ್ಕೆ ಹತ್ತಿರ ಬಂದಾಗ ಬೇರೆಯವರು ಏರುವುದು ತೀರ್ಮಾನವಾಗಿತ್ತು. ಆಮ್ಲಜನಕದ ಕೊರತೆಯಿಂದ, ಕೊನೆಯ ಕ್ಷಣದಲ್ಲಿ ಹಿಲರಿ ಮತ್ತು ತೇನ್ಸಿಂಗ್‌ಗೆ ಪ್ರಯತ್ನಿಸಲು ಅವಕಾಶ. ಮೇ 29, 1953 ರಂದು ಬೆಳಿಗ್ಗೆ 11.40 ನಿಮಿಷಕ್ಕೆ ಎವರೆಸ್ಟ್ ಮೇಲೇರಿ ನಿಂತಿದ್ದಾಯಿತು. ಅದೆಷ್ಟು ನಿಮಿಷ? ಕೇವಲ ಹದಿನೈದು ನಿಮಿಷಗಳು! ಮೂವತ್ತು ವರ್ಷಗಳ ಕಠಿಣ ಪರಿಶ್ರಮದ ಫಲ, ಎವರೆಸ್ಟಿನ ಮೇಲಿನ ಹದಿನೈದು ನಿಮಿಷ. ಬದುಕು ಸಾರ್ಥಕವಾಯಿತು, ಶಾಶ್ವತವಾಯಿತು.

ಇದನ್ನೇ ಕಾವ್ಯಮಯವಾಗಿ ಕಗ್ಗ ಹೇಳುತ್ತದೆ. ತೋಟದ ಮಾಲಿ ಕಷ್ಟಪಟ್ಟು, ನೆಲಸಿದ್ಧಗೊಳಿಸಿ, ಗೊಬ್ಬರ, ನೀರು ಹಾಕಿ ಗುಲಾಬಿ ಸಸಿಯನ್ನು ಬೆಳೆಸುತ್ತಾನೆ, ಮುಳ್ಳುಗಳಿಂದ ಚುಚ್ಚಿಸಿಕೊಳ್ಳುತ್ತಾನೆ. ತಿಂಗಳುಗಳ ಪ್ರಯತ್ನದ ಫಲವಾಗಿ ಗುಲಾಬಿ ಮೊಗ್ಗು ಕಾಣುತ್ತದೆ. ಅದು ಅರಳಿ ಬದುಕುವುದು ಕೆಲಕ್ಷಣಗಳು ಮಾತ್ರ. ಅದರೆ ಆ ಕ್ಷಣಗಳ ಸಂತೋಷ, ತೃಪ್ತಿ, ತಿಂಗಳುಗಳ ಪರಿಶ್ರಮವನ್ನು ಸಾರ್ಥಕಗೊಳಿಸುತ್ತದೆ.

ದಿನ ಭವಿಷ್ಯ

ಮಂಗಳವಾರ ಅಕ್ಟೋಬರ್ 19, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಚಿತ್ತಾ ಚತುರ್ದಶೀ ಗಂ. 29-55 (ಸಾ. 6-15) ಮಂಗಳವಾರ ನಿತ್ಯ ನಕ್ಷತ್ರ ಉತ್ತರಭಾದ್ರ ಗಂ. 15-54 (ಹ. 12-38) ವ್ಯಾಘಾ ನಾಮ ಯೋಗ ಗಂ. 39-2 ವಣಿಜ ಕರಣ ಗಂ. 29-55 ವಿಷ ಗಂ. 47-27 ಅಮೃತ ಗಂ. 4-29 ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 : ಸೂರ್ಯೋದಯ: 6-13 ಸೂರ್ಯಾಸ್ತ: 5-57 ಅದೃಷ್ಟ ಸಂಖ್ಯೆ 17

ಮೇಷ: ಹದಗೆಟ್ಟ ಆರೋಗ್ಯ ಸ್ಥಿತಿ ಸುಧಾರಿಸಿ ನೆಮ್ಮದಿಯ ಬದುಕನ್ನು ಕಾಣುವಿರಿ. ಮನಸ್ಸಿಗೆ ಬೇಸರ ಮಾಡಿಕೊಳ್ಳದೆ ಮಾಡುತ್ತಿರುವ ಕೆಲಸದಲ್ಲಿ ಮುಂದುವರಿಯಿರಿ. ಕೈಗಾರಿಕೋದ್ಯಮಿಗಳಿಗೆ ಬೇಡಿಕೆಗಳು ಹೆಚ್ಚಿ ಆರ್ಥಿಕ ಪ್ರಗತಿ.

ವೃಷಭ: ನಿಮಗೆ ವಿಶೇಷ ಮಮಕಾರವಿದ್ದ ಕೆಲವರಿಂದ ಅಧಿಕವಾದ ಸಹಾಯ ದೊರೆಯಲಿದೆ. ನಿಸರ್ಗ ಪ್ರೇಮಿಗಳಿಗೆ ಸರ್ಕಾರದ ಮನ್ನಣೆ. ಸಾಮಾಜಿಕ ಸುಧಾರಕರಿಗೆ ಗೌರವಾದರಗಳು ಹರಿದುಬರಲಿದೆ.

ಮಿಥುನ: ದುಃಖ ದುಮ್ಮಾನಗಳು ದೂರವಾಗಿ ಆರ್ಥಿಕ ರಂಗದಲ್ಲಿ ಚೇತರಿಕೆ ಕಂಡುಬರಲಿದೆ. ವಿಪರೀತ ಕಾಲು ನೋವಿನ ಸಮಸ್ಯೆ ತಲೆದೋರುವ ಸಾಧ್ಯತೆ. ಮನೆಯಲ್ಲಿನ ನೆಮ್ಮದಿಗೆ ಭಂಗವಿಲ್ಲ. ಅದಿರು ವ್ಯವಹಾರಸ್ಥರಿಗೆ ಸಂತಸ.

ಕರ್ಕಾಟಕ: ಹಿರಿಯರ ಆರೋಗ್ಯದಲ್ಲಿ ಎಚ್ಚರಿಕೆ ಅಗತ್ಯ. ಭಾಗ್ಯದ ಬಗ್ಗೆ ಚಿಂತೆ ಬೇಡ. ತೈಲವ್ಯಾಪಾರಿಗಳಿಗೆ ಸಮೃದ್ಧಿ. ವರ್ತಕರಿಗೆ ಅನುಕೂಲ. ವೈದ್ಯರಿಗೆ ಹರ್ಷ. ದೇವತಾರಾಧನೆ ಮಾಡಿ.

ಸಿಂಹ: ವಿದ್ಯಾರ್ಥಿಗಳು ಮನಸ್ಸನ್ನು ಹರಿಬಿಡದೆ ಏಕಾಗ್ರತೆಯಿಂದ ಅಭ್ಯಾಸದಲ್ಲಿ ತೊಡಗುವುದು ಅತ್ಯಗತ್ಯ. ದುಷ್ಟರ ಸಹವಾಸದಿಂದ ದೂರವಿರಿ. ಮನಸ್ಸಿಗೆ ನೋವಾಗದಂತೆ ವ್ಯವಹರಿಸಿ.

ಕನ್ಯಾ: ಬ್ಯಾಂಕ್ ನೌಕರರಿಗೆ ಮುಂಬಡ್ತಿಯ ಜೊತೆಗೆ ಸ್ನೇಹಿತರ ಸಹಕಾರ ಅತಿಯಾಗಿ ಬರಲಿದೆ. ಸಂತೋಷದಾಯಕ ಬದುಕಿಗಾಗಿ ಈಶ್ವರಾರಾಧನೆ ಮಾಡಿ. ವ್ಯವಹಾರಗಳಲ್ಲಿ ಎಚ್ಚರಿಕೆ ಅತ್ಯಗತ್ಯ. ಸಾಹಸ ಪ್ರಿಯರಿಗೆ ಸಕಾಲ.

ತುಲಾ: ಇಂದು ಭಿನ್ನವಾಗಿ ಆಲೋಚಿಸುವ ಮೂಲಕ ಪ್ರಶಂಸೆಗೆ ಪಾತ್ರರಾಗುತ್ತೀರಿ. ಅನಿರೀಕ್ಷಿತ ಫಲಾಫಲಗಳು ನಿಮ್ಮ ಪಾಲಿಗೆ ಬರಲಿದೆ. ಹಳೆಯ ಮಿತ್ರರ ಸಹಕಾರದಿಂದ ಕಾರ್ಯದಲ್ಲಿ ಹೊಸತನ ಕಾಣುವಿರಿ. ವ್ಯಾಪಾರಕ್ಷೇತ್ರದಲ್ಲಿ ವೃದ್ಧಿ.

ವೃಶ್ಚಿಕ: ಕಲಾವಿದರಿಗೆ ವಿಪುಲ ಅವಕಾಶಗಳು ಹರಿದುಬರಲಿದೆ. ಚಿಂತನಾತ್ಮಕ ಬೆಳವಣಿಗೆಯಿಂದ ಜೀವನಕ್ಕೆ ಆಧಾರವಾಗಲಿದೆ. ಮನಸ್ಸಿನ ನೋವನ್ನು ಬೇರೆಯವರಲ್ಲಿ ಹಂಚಿಕೊಳ್ಳುವುದರಿಂದ ಸಮಸ್ಯೆಗಳು ಪರಿಹಾರ ಕಾಣಲಿವೆ.

ಧನು: ನಾಸ್ತಿಕ ಸ್ವಭಾವವನ್ನು ಬದಿಗೊತ್ತಿ ಆಸ್ತಿಕಸ್ವಭಾವದತ್ತ ನಿಮ್ಮ ಒಲುಮೆ. ಧಾರ್ಮಿಕ ಮುಖಂಡರಿಂದ ಸಮ್ಮಾನ ಸಾಧ್ಯತೆ. ತಂತ್ರಜ್ಞರಿಗೆ ಯಶಸ್ಸಿನ ದಿನ. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಯಶಸ್ಸು ದೊರೆತು ನಿಮ್ಮ ಪಾಲಿಗೆ ಜಯ.

ಮಕರ: ಸರ್ಕಾರಿ ನೌಕರರಿಗೆ ಬೆಂಬಲಕರ ವಾತಾವರಣ. ಅನಿರೀಕ್ಷಿತವಾದ ಕಾರ್ಯಗಳಲ್ಲಿ ತೊಡಗುವ ಸಾಧ್ಯತೆ. ಮನೋಪೇಕ್ಷೆಗೆ ಒಳಗಾಗಿ ದುಡುಕಿನ ನಿರ್ಧಾರ ಸಲ್ಲದು. ಕಾರ್ಯದ ಬಗ್ಗೆ ಅವಲೋಕನ ಅಗತ್ಯ.

ಕುಂಭ: ಹೋಟಲ್ ಮತ್ತು ಆಹಾರೋದ್ಯಮಿಗಳಿಗೆ ಸಂತೋಷದಾಯಕ ಬದುಕು. ಅಹಿತಕರ ವಾತಾವರಣ ದೂರವಾಗಿ ಸಂತೋಷದ ಸುದ್ದಿ ಬರಲಿದೆ. ವಸ್ತ್ರ ವ್ಯಾಪಾರಿಗಳ ಮನೆಯಲ್ಲಿ ಶುಭಕಾರ್ಯ ನಿಶ್ಚಯ.


ಮೀನ: ಮನಸ್ಸಿನ ಸಮಸ್ಯೆಗಳು ನಿವಾರಣೆಯಾಗಿ ಆರೋಗ್ಯಪೂರ್ಣವಾದ ಬದುಕನ್ನು ಕಾಣುವಿರಿ. ಹಿತ ಶತ್ರುಗಳ ಬಗ್ಗೆ ಎಚ್ಚರವಿರಲಿ. ಇರುಸುಮುರುಸಿನಿಂದ ಮುಕ್ತಿ ದೊರಕಲಿದೆ. ಆರ್ಥಿಕ ಮುಗ್ಗಟ್ಟು ನಿವಾರಣೆ.

ನಿಮ್ಮ ಜನ್ಮದಿನ 19-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ನೀವು ಅನೇಕ ರೀತಿಯಾದ ಹೊಸ ಆಯಾಮಗಳಿಗೆ ಕಾರಣರಾಗಲಿದ್ದೀರಿ. ಬದುಕಿನಲ್ಲಿ ಹೊಸ ದಾರಿಯನ್ನು ತುಳಿಯಲಿದ್ದೀರಿ. ತ್ವರಿತಗತಿಯ ನಿರ್ಧಾರ ಬೇಡವೇ ಬೇಡ. ಬಂಧುಗಳ ಆಗಮನದೊಂದಿಗೆ ಸಂತೋಷ ಕೂಟದಲ್ಲಿ ಭಾಗಿಯಾಗುವ ಸಾಧ್ಯತೆ ಇದೆ.

ಪದಬಂಧ 4752 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮೈನಾ ಹಕ್ಕಿಯನ್ನು ಹೀಗೂ ಕರೆವರು (4)
3.ಅದೇ ತಾನೆ ಮೂಡುತ್ತಿರುವ ಸೂರ್ಯ (4)
5.ಕೊನೆಗೆ ಫಲವಿಟ್ಟರೆ ಇದು ಸೋಲು! (3)
6.ಮಣ್ಣು ಕಲೆಸಿದ ನೀರು (3)
8.ಸಾಮರ್ಥ್ಯ ಇಲ್ಲಿ ಕಾಣುತ್ತಿದೆ (3)
9.ಅರ್ಚನೆ ಮಾಡುತ್ತಿರುವ ಪೂಜಾರಿ (3)
10.ರೀತಿಯೊಡಗೂಡುವ ಜೋಡು ನುಡಿ (3)
12.ಜಗಳಕ್ಕೊಂದು ಪರ್ಯಾಯ ಪದ (3)
14.ಕಣದಲ್ಲಿರುವ ಲಗಾಮು (4)
15.ಖೈದಿಗಳನ್ನು ಕೂಡಿಹಾಕುವ ಜಾಗ (4)

ಮೇಲಿಂದ ಕೆಳಕ್ಕೆ
1.ನಿದ್ರಿಸುವಾಗ ಉಸಿರಾಟದಿಂದಾಗುವ ಶಬ್ದ (3)
2.ಈತ ಕವಿತೆ ಬರೆಯುವವನು (2)
3.ಬಾಲಕನಿಗೆ ಮೂಡಿರುವ ಲಾಂಗೂಲ (2)
4.ತೊಂದರೆ ಹೀಗೆ ಬಂದಿದೆ (3)
7.ದುಃಖಾಂತವಾದ ಪ್ರಹಸನ (5)
8.ಅನುಪಸ್ಥಿತಿಯನ್ನು ಹೀಗನ್ನಿ (5)
9.ಎಂಟು ಭಾಗಗಳುಳ್ಳದ್ದು (3)
11.ತಪ್ಪಿಗಾಗಿ ತೆರಬೇಕಾದ ದಂಡ (3)
12.ಕಬ್ಬಿಣದಲ್ಲಿರುವ ಚಿಕ್ಕಚೂರು (2)
13.ಹಾವಸೆಯಿರುವ ಜಾಗದಲ್ಲಿನ ರಂಗೋಲಿ (2)



4751ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಂಕಲನ 2.ಪ್ರಗತಿ 4.ಕಣಕ 6.ಉದರ 7.ನಾಮಕರಣ 10.ಕಲ್ಯಾಣ 11.ಶರಧಿ 13.ಗರುಡ 14.ತಪರಾಕು

ಮೇಲಿಂದ ಕೆಳಕ್ಕೆ: 1.ಸಂದೂಕ 2.ಪ್ರಚಾರ 3.ತಿಕ್ಕಲು 5.ಕವಿನಾ 6.ಉಪಕರಣ 8.ಣರಶ 9.ಉರಗ 10.ಕನ್ನಡ 12.ಧಿಮಾಕು

ಸುಡೊಕು 5138

8		2		4		1		5
			8		9			
9		6			7	2		4
			1	6				
					3	8		6
				8				
	4	8		9	2			
1		5	7				4	
2		3		5	1	9		8

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5137 ಸುಡೊಕು

2	8	3	5	7	9	1	4	6
5	1	4	6	2	8	7	3	9
7	6	9	4	1	3	8	5	2
3	2	8	1	9	4	6	7	5
6	5	1	7	3	2	9	8	4
4	9	7	8	5	6	3	2	1
9	4	2	3	6	7	5	1	8
1	3	6	2	8	5	4	9	7
8	7	5	9	4	1	2	6	3

ವಲಸಿಗರೇ ಗುರಿ; ದಿಕ್ಕೆಟ್ಟ ಕಾರ್ಮಿಕರು

ಒಂದನೇ ಪುಟದಿಂದ...

ವಲಸಿಗ ಕಾರ್ಮಿಕರಲ್ಲಿ ಇಂತಹ ಭೀತಿಯನ್ನು ಎಂದೂ ನೋಡಿಲ್ಲ ಎಂದು ಇಲ್ಲಿ 15 ವರ್ಷಗಳಿಂದ ಪಾನಿಪುರಿ ಮಾರುವ ಬಿಹಾರದ ರಾಜೇಶ್ ಕುಮಾರ್ ಹೇಳುತ್ತಾರೆ. '2009, 2010, 2016ರ ಸಂಘರ್ಷಮಯ ಸ್ಥಿತಿ, 2019ರ ಆಗಸ್ಟ್‌ನಲ್ಲಿ ವಿಶೇಷ ಸ್ಥಾನಮಾನ ರದ್ದತಿಯ ಸಂದರ್ಭಗಳಲ್ಲಿಯೂ ಯಾವುದೇ ಸಮಸ್ಯೆ ಇಲ್ಲದೆ ಶ್ರೀನಗರದಲ್ಲಿ ಉಳಿದಿದ್ದೆ. ಆದರೆ, ಕಳೆದ 10 ದಿನಗಳಲ್ಲಿ ಪ್ರತಿ ಕ್ಷಣದಲ್ಲಿಯೂ ಸಾವು ನನ್ನನ್ನು ಅಟ್ಟಿಸಿಕೊಂಡು ಬರುವಂತೆ ಕಾಣಿಸುತ್ತಿದೆ' ಎಂದಿದ್ದಾರೆ. ಭಯವು ಅವರ ಧ್ವನಿಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿತ್ತು.

ತವರು ರಾಜ್ಯಗಳಲ್ಲಿ ಇರುವ ಇರುವ ವಲಸಿಗರ ಕುಟುಂಬಗಳಲ್ಲಿ ಆತಂಕ ಹೆಚ್ಚಿದೆ. ವಾಪಸ್ ಬರುವಂತೆ ಅವರು ಒತ್ತಡ ಹೇರುತ್ತಿದ್ದಾರೆ. 'ನಾವು ನೂರಾರು ಕಿಲೋಮೀಟರ್ ಸಂಚರಿಸಿ ಇಲ್ಲಿಗೆ ಬರುವುದು ಜೀವನೋಪಾಯಕ್ಕಾಗಿ. ನಾವು ಇಲ್ಲಿ ದುಡಿದರೆ ಊರಲ್ಲಿ ನಮ್ಮ ಕುಟುಂಬಗಳ ಹೊಟ್ಟೆ ತುಂಬುತ್ತದೆ. ಮಕ್ಕಳಿಗೆ ಶಿಕ್ಷಣ ಕೊಡಲು ಸಾಧ್ಯವಾಗುತ್ತದೆ. ಆದರೆ, ಅದಕ್ಕಾಗಿ ನಮ್ಮ ಜೀವವನ್ನೇ ಬಲಿ ಕೊಡಲು ಸಾಧ್ಯವೇ' ಎಂದು ಉತ್ತರ ಪ್ರದೇಶದ ಗಾರೆ ಕೆಲಸಗಾರ ಜಮೀಲ್ ಪ್ರಶ್ನಿಸುತ್ತಾರೆ.

ವಲಸಿಗ ಕಾರ್ಮಿಕರು ಭಾರಿ ಸಂಖ್ಯೆಯಲ್ಲಿ ಜಮ್ಮುವಿನತ್ತ ಸಾಗುತ್ತಿದ್ದಾರೆ ಎಂದು ಶ್ರೀನಗರ ಟ್ಯಾಕ್ಸಿ ನಿಲ್ದಾಣ ಸಂಘದ ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ. ಈ ತಿಂಗಳ ಆರಂಭದಲ್ಲಿ ತಿಂಗಳಿಗೆ 10–12 ಟ್ಯಾಕ್ಸಿಗಳು ಜಮ್ಮುವಿಗೆ ಹೋದರೆ ಹೆಚ್ಚು ಎಂಬಂತಿತ್ತು. ಈಗ, ಎಲ್ಲ ಟ್ಯಾಕ್ಸಿಗಳೂ ಜಮ್ಮುವಿನತ್ತ ಹೋಗುತ್ತಿವೆ ಮತ್ತು ಬೇಡಿಕೆ ಇನ್ನೂ ಹೆಚ್ಚೇ ಇದೆ' ಎಂದು ಅವರು ವಿವರಿಸುತ್ತಾರೆ.

ಸುರಕ್ಷಿತ ಸ್ಥಳಕ್ಕೆ ವಲಸಿಗರು?

ಸಾವಿರಾರು ವಲಸೆ ಕಾರ್ಮಿಕರನ್ನು ಸುರಕ್ಷಿತ ಸ್ಥಳಗಳಿಗೆ ಸಾಗಿಸಲಾಗಿದೆ ಎಂದು ರಾಯಿಟರ್ಸ್ ಸುದ್ದಿ ಸಂಸ್ಥೆಯು ವರದಿ ಮಾಡಿದೆ.

'ಸುರಕ್ಷಿತ ಸ್ಥಳ ತಲುಪಿರುವ ಸಾವಿರಾರು ಜನರನ್ನು ಅವರವರ ಊರುಗಳಿಗೆ ಕಳುಹಿಸಲು ಏರ್ಪಾಡು ಮಾಡಲಾಗುತ್ತಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆದರೆ, ಸರ್ಕಾರದ ವಕ್ತಾರರು ಇದನ್ನು ದೃಢಪಡಿಸಿಲ್ಲ.

'ಇದಕ್ಕಿಂತ ಕೆಟ್ಟ ಸಮಯವನ್ನು ನಾವು ಕಂಡಿದ್ದೇವೆ. ಆದರೆ, ಈ ಬಾರಿ ನಮಗೆ ಭಯವಾಗುತ್ತಿದೆ' ಎಂದು ಬಿಹಾರದ ಕಾರ್ಮಿಕ ಮೊಹಮ್ಮದ್ ಸಲಾಂ ಹೇಳಿದ್ದಾರೆ. ಆರು ವರ್ಷಗಳಿಂದ ಅವರು ಕಾಶ್ಮೀರದಲ್ಲಿ ಇದ್ದಾರೆ. ಪೊಲೀಸರು ತಮ್ಮನ್ನು ಬಾಡಿಗೆ ಕೊಠಡಿಗಳಿಂದ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಸಮತ್ವದ ಸಂದೇಶ ಸಾರಿದ ಪ್ರವಾದಿ

• ಚಾಂದ್ ಬಾಷ ಅರಸೀಕೆರೆ



ಇಂದು ಈದ್ ಮಿಲಾದ್

ಈದ್ ಎಂದರೆ 'ಉತ್ಸವ', ಮಿಲಾದ್ ಎಂದರೆ 'ಜನ್ಮತಾಳಿದ'. ಆದ್ದರಿಂದ ಇಸ್ಲಾಮ್ ಧರ್ಮದ ಮಹತ್ವದ ಉತ್ಸವ ಎಂದರೆ ಈದ್ ಮಿಲಾದ್. ಈ ಪವಿತ್ರ ದಿನವನ್ನು ಪ್ರವಾದಿ ಮುಹಮ್ಮದ್ (ಸ.ಅ.) ಅವರ ಜನ್ಮದಿನವೆಂದು ಆಚರಿಸಲಾಗುತ್ತದೆ.

ಮುಹಮ್ಮದ್ ಅವರು ಇಸ್ಲಾಮ್ ಕಾಲಮಾನದ ಪ್ರಕಾರ ಕ್ರಿ.ಶ. 570ರ ರಬ್ಬಿವುಲ್ ಅವ್ವಲ್ ತಿಂಗಳ 12ನೇ ತಾರೀಖು ಅರಬ್‌ನ ಮಕ್ಕಾನಗರದಲ್ಲಿ ಜನಿಸಿದರು. ಇವರು ಹುಟ್ಟುವ ಮೊದಲೆ ಇವರ ತಂದೆ ಅಬ್ದುಲ್ಲಾರವರು ಮರಣ ಹೊಂದಿದರು; ಇವರು ಆರು ವರ್ಷದ ಬಾಲಕನಾಗಿದ್ದಾಗ ತಾಯಿ ಅಮೀನರವರು ಮರಣ ಹೊಂದಿದರು.

ಮುಹಮ್ಮದ್ ಅವರು ತಮ್ಮ 40ನೇ ವಯಸ್ಸಿಗೆ ಪ್ರವಾದಿತ್ವವನ್ನು ಗಳಿಸಿಕೊಂಡರು. ಆನಂತರ ಮೂವತ್ತು ಅಧ್ಯಾಯಗಳುಳ್ಳ ಕುರ್ ಆನ್ ಅವತರಿಸುತ್ತದೆ. ಕುರ್ ಆನ್ ಎಂದರೆ ಕೊನೆಯ ಅಥವಾ ಅಂತಿಮ ದೇವಪದ ಅಥವಾ ದೈವವಾಣಿ ಎಂದರ್ಥ.

ದೈವವಾಣಿಯ ಪ್ರಮುಖಾಂಶಗಳು:

- ಮೊದಲ ದೇವವಾಣಿಯೇ 'ಇಲ್ಮ್', ಎಂದರೆ 'ಜ್ಞಾನ'ವನ್ನು ಗಳಿಸುವುದು.
- ತಾಯಿಯ ಪಾದದಡಿ ಸ್ವರ್ಗವಿದೆ.
- ವಯಸ್ಸಾದ ತಂದೆ–ತಾಯಿಗಳ ಮನಸ್ಸು ನೋಯಿಸದಿರುವುದು.
- ಭಗವಂತ ಏಕಮಾತ್ರನೆಂದು ನಂಬುವುದು.
- ಎಲ್ಲಾ ಮಾನವಜನಾಂಗವು ಸಮಾನವೆಂದು ತಿಳಿಯುವುದು.
- ಮೋಸ, ವಂಚನೆ, ವ್ಯಭಿಚಾರಗಳಿಂದ ದೂರವಿರುವುದು.
- ನೆರೆಹೊರೆಯವರನ್ನು, ಸುತ್ತ–ಮುತ್ತಲಿನವರನ್ನು ಬೆಳಕು–ನೆರಳಿನಂತೆ ರಕ್ಷಿಸುವುದು.
- ಮಹಿಳೆಯರಿಗೆ ಗೌರವವನ್ನು ತೋರುವುದು
- ಸರ್ವ ಮಾನವಜನಾಂಗಕ್ಕೆ ಕರುಣೆಯ ತೋರಿ, ಕೃತಜ್ಞರಾಗಿರುವುದು.
- ಭಗವಂತ ಕೊಟ್ಟದ್ದನ್ನು ತಾವು ತಿಂದು, ಇತರ ಹಸಿದವರಿಗೂ ತಿನ್ನಿಸುವುದು.
- ಅನಾಥರ, ತಬ್ಬಲಿಗಳ ಆಸ್ತಿ ಕಬಳಿಸಿ ಮೋಸ ಮಾಡದಿರುವುದು.
- ಕೋಪ ಗೆದ್ದು ಬಲಶಾಲಿಯಾಗುವುದು.
- ಯುದ್ಧ, ರಕ್ತಪಾತದ ಅಲ್ಪ ಗೆಲುವಿವ ದುರಾಸೆ ಬಿಟ್ಟು ಶಾಂತಿ–ಸಹನೆಯ ಶಾಶ್ವತ ಗೆಲುವಿಗೆ ಶ್ರಮಿಸುವುದು.
- ಪರರ ದೈಹಿಕ ಹಾಗೂ ಮಾನಸಿಕ ನಿಂದನೆ ಮಹಾಪಾಪವೆಂದು ನಂಬುವುದು.
- ಸದಾ ಮುಖದಲ್ಲಿ ಮುಗುಳ್ನಗೆಯನ್ನು ತುಂಬಿಕೊಂಡಿರುವುದು.

ಇಸ್ಲಾಮ್ ಧರ್ಮದ ಅಸ್ತಿತ್ವ ಉಳಿದಿರುವುದು ಪ್ರವಾದಿಗಳ ಸರಳತೆ, ನಿಃಸ್ವಾರ್ಥ ವಿನಮ್ರತೆ ಹಾಗೂ ಪ್ರತಿಜ್ಞೆಗಳ ಬಗ್ಗೆ ಅವರಿಗಿದ್ದ ಪ್ರಜ್ಞೆಯಲ್ಲಿ. ಸ್ವಾಮಿ ವಿವೇಕಾನಂದರು ಇಸ್ಲಾಮ್‌ನ ಕುರಿತು 'ಸಮತ್ವವನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಿದ ಧರ್ಮವೆಂದರೆ ಅದು ಇಸ್ಲಾಮ್ ಧರ್ಮ' ಎಂದಿದ್ದಾರೆ.

ಪ್ರವಾದಿ ಮುಹಮ್ಮದ್ ಅವರು ಸಮರ್ಥ ಆಡಳಿತಗಾರರು, ವ್ಯಾಪಾರಿಗಳು, ಯೋಧರು, ತತ್ವಜ್ಞಾನಿಗಳು, ರಾಜಕಾರಣಿಗಳು, ಸಮಾಜ ಸುಧಾರಕರು, ಅನಾಥರ ಆಶ್ರಯದಾತರು, ಗುಲಾಮರ ರಕ್ಷಕರು, ಮಹಿಳಾ ವಿಮೋಚಕರು, ನ್ಯಾಯವಿಧಾಯಕ ನ್ಯಾಯಾಧೀಶರು ಹಾಗೂ ಸಂತರು. ಇಂತಹ ಮಹಾನ್ ಮಾನವೀಯ ಮೌಲ್ಯಗಳನ್ನು ತುಂಬಿಕೊಂಡಿದ್ದ ಪ್ರವಾದಿ ಮುಹಮ್ಮದ್ ಅವರು ಎಂದೂ ಆಡಂಬರದ ಜೀವನವಾಗಲಿ ಯಾವುದೇ ತೋರ್ಪಡಿಕೆಯ ಆಚರಣೆಗಳಾಗಲಿ ಇಷ್ಟಪಡುತ್ತಿರಲಿಲ್ಲ. ಬದಲಾಗಿ ಅವರಿಗೆ ವಿದ್ಯಾದಾನ; ಬಡವ, ಅನಾಥ ಹಸಿದವರಿಗೆ ಅನ್ನದಾನ ಹಾಗೂ ರೋಗಿಗಳ ಆರೈಕೆಗಳೇ ಆದ್ಯತೆಯ ಸೇವಾಕ್ಷೇತ್ರಗಳಾಗಿದ್ದವು.

ನಿಜಾರ್ಥದಲ್ಲಿ ಪ್ರವಾದಿಗಳ ಜನ್ಮದಿನೋತ್ಸವ ಎಂದರೆ ವಿಶ್ವದಲ್ಲಿ ಶಾಂತಿಸ್ಥಾಪನೆಯೇ ಹೊರತು ಮೆರವಣಿಗೆ ಮಾಡಿ, ಜೋರಾದ ಘೋಷಣೆ ಕೂಗುವುದಲ್ಲ, ಬೀಗಿ ನಡೆಯುದಲ್ಲ; ಬಾಗಿ ನಡೆಯುವುದು, ಬೆರೆತು ಬದುಕುವುದು, ಸಹಬಾಳ್ವೆ ನಡೆಸುವುದು.

ಪ್ರಜಾವಾಣಿ DH
ಡಿಎಚ್–ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಬಿ.ಎಸ್.ನೂಲಾ**, 225ಎ, 54ನೇ ಕ್ರಾಸ್, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು.	30,000
2	**ವೇಣುಗೋಪಾಲ್ ಎಂ.ಎಸ್.**, ಗಾಯತ್ರಿ ನಿಲಯ, 182, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು.	25,000
3	**ಎಂ.ವಿ.ಛಾಯಾಕುಮಾರಿ**, 149, 4ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಶ್ರೀನಿವಾಸನಗರ, ಬನಶಂಕರಿ 1ನೇ ಹಂತ, ಬೆಂಗಳೂರು.	25,000
4	**ಮಾಲಿನಿ ಪ್ರಸಾದ್**, #452, 39ನೇ ಎ ಅಡ್ಡರಸ್ತೆ, ಜಯನಗರ 5ನೇ ಬ್ಲಾಕ್, ಬೆಂಗಳೂರು.	20,000
5	**ಟಿ.ವಿ.ವೇಣುಗೋಪಾಲ**, ಮಂದಾರ, ನಂ. 4, 1ನೇ ಅಡ್ಡರಸ್ತೆ, ನಂಜಮ್ಮ ಲೇಔಟ್, ಮನೋರಾಯನಪಾಳ್ಯ, ಆರ್.ಟಿ.ನಗರ, ಬೆಂಗಳೂರು.	10,001
6	**ಮಂಜುಳಾದೇವಿ ಜಿ.**, 1ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ, ಬಿಡಿಎ ಲೇಔಟ್, ಬೆಂಗಳೂರು.	10,000
7	**ಭಾಸ್ಕರ್ ಎಂ.ವಿ.**, #73, 3ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಶ್ರೇಯಸ್ ಕಾಲೊನಿ, ಜೆ.ಪಿ ನಗರ 7ನೇ ಹಂತ, ಬೆಂಗಳೂರು.	10,000
8	**ವಸುಮತಿ ಪಿ.ವಿ.**, ಮೈಸೂರು.	10,000
9	**ಮಮತಾ ಎಸ್.ಕೊರಿ**, ಉದಯ್ ಹೌಸಿಂಗ್ ಕಾಲೊನಿ, ವಿದ್ಯಾನಗರ, ಹಾವೇರಿ.	5,766
10	**ಸಿ.ರಜನಿಕಾಂತ್**, 665, 12ನೇ ಮುಖ್ಯರಸ್ತೆ, 46ನೇ ಅಡ್ಡರಸ್ತೆ, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು.	5,001
11	**ಸಂಧ್ಯಾ**, ಕಲ್ಕೆರೆ, ಬೆಂಗಳೂರು.	5,000
12	**ಡಿ.ಸಿ.ಸಹನಾ**, 28, ವಿ.ಆರ್.ಎಲೆಗನ್ಸಿ, 5ನೇ ಬ್ಲಾಕ್, 7ನೇ ಮುಖ್ಯರಸ್ತೆ, ಕಾಮಾಕ್ಯ ಲೇಔಟ್, ಬನಶಂಕರಿ 3ನೇ ಹಂತ, ಬೆಂಗಳೂರು.	5,000
13	**ಜಯಶಂಕರ್ ಆರ್.**, ಕಲ್ಪತರು, ಚೌತ್ರಿ ಹನುಮಂತಪುರ, ತುಮಕೂರು.	5,000
14	**ನಂಜೇಗೌಡ ಎಚ್.ಎಸ್.**, 517, 4ನೇ ಎ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಹಂಪಿನಗರ, ಬೆಂಗಳೂರು.	5,000
15	**ಶಾರದಾಂಬಾ ಬಿ.ಎಸ್.**, 1047/26, 7ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, ವಿದ್ಯಾರಣ್ಯಪುರಂ, ಮೈಸೂರು.	5,000
16	**ಹೇಮಲತಾ**, 487, ಚಿರಂತನ,ತುರಹಳ್ಳಿ ಮುಖ್ಯರಸ್ತೆ, ಜಯನಗರ ಹೌಸಿಂಗ್ ಸೊಸೈಟಿ, ಬೆಂಗಳೂರು.	5,000
17	**ಬಸವರಾಜು ಎಚ್.ಆರ್.**, ಪರಿವಾರ್ ಪೆಂಡಂಟ್ ಅಪಾರ್ಟ್‌ಮೆಂಟ್, ಕೋಡಿಚಿಕ್ಕನಹಳ್ಳಿ, ಬೆಂಗಳೂರು.	4,466
18	**ಸಿದ್ದಣ್ಣ ಎಸ್.ಯದ್ದಲಾಪುರ**, ದಿಗ್ಗಾಂವ್, ಪ್ಲಾಟ್ 252, ರಕ್ಷತಾ ನಿಲಯ, ಗೋದುತಾಯಿ ಕಾಲೊನಿ, ಕಲಬುರಗಿ.	3,100
19	**ಎಸ್.ಸೂರ್ಯನಾರಾಯಣ**, 370/ಬಿ, 12ನೇ ಎ ಅಡ್ಡರಸ್ತೆ, ಪಶ್ಚಿಮ ಕಾರ್ಡ್ ರಸ್ತೆ, 2ನೇ ಹಂತ, ಬೆಂಗಳೂರು.	3,000
20	**ಉಜ್ವಲ್**, ಮೈಸೂರು	2,000
21	**ರಂಗನಾಥ್ ಕೆ.ಜಿ.**, 423, 41ನೇ ಅಡ್ಡರಸ್ತೆ, 5ನೇ ಬ್ಲಾಕ್, ಜಯನಗರ, ಬೆಂಗಳೂರು.	2,000
22	**ಪ್ರಕಾಶ್ ಎಸ್.**, ಅಕ್ಷಯ ನಿಲಯ, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಶಾಂತಿನಗರ, ಹಾಸನ.	2,000
23	**ರೇವಣಸಿದ್ದಪ್ಪ ಜಿ.ಕುಚನೂರು**, 15/39, ಬಸವೇಶ್ವರ ನಿಲಯ, 13 ಬಿ ಅಡ್ಡರಸ್ತೆ, ಇಟ್ಟಮಡು ಲೇಔಟ್, ಬನಶಂಕರಿ 3ನೇ ಹಂತ, ಬೆಂಗಳೂರು.	2,000
24	**ಕೋಟಿ ಮುರಿಗೆಪ್ಪ ಚನ್ನಪ್ಪ**, #142, ರಾಣಿ ಚನವಳಿ ನಗರ, ಧಾರವಾಡ.	1,010
25	**ಕುಸುಮಾ ಎಂ.ಎಸ್.**, 104, ಪ್ರೊಮೆನಾಡೆ ಅಪಾರ್ಟ್‌ಮೆಂಟ್ ದಾಸರಹಳ್ಳಿ ಮುಖ್ಯರಸ್ತೆ, ದಾಸರಹಳ್ಳಿ, ಹೆಬ್ಬಾಳ ಪೋಸ್ಟ್, ಬೆಂಗಳೂರು.	1,001
26	**ಟಿ.ಮುದ್ಲೆಗೌಡ**, 4ನೇ ಕ್ರಾಸ್, ಗೋಕುಲ, ಕೆಂದಾವರೆ ರಸ್ತೆ, ತುಮಕೂರು.	1,001
27	**ಶಿವಾನಂದ ಸ್ವಾಮಿ ಎನ್.ಎಂ.**, 156, 'ಕನಸು ನನಸು', ಸಿದ್ಧಲಿಂಗೇಶ್ವರ 3ನೇ ಅಡ್ಡರಸ್ತೆ, ಬೋಗಾದಿ 2ನೇ ಹಂತ, ಮೈಸೂರು.	1001
28	**ದೊರೆಸ್ವಾಮಿ ಎಚ್.ಆರ್.**, #7, 7ನೇ ಹಂತ, 9ನೇ ತಿರುವು, ವಿವೇಕಾನಂದ ನಗರ, ಮೈಸೂರು.	1,000
	ಒಟ್ಟು ಮೊತ್ತ	8,10,726

ಸಿಬಿಎಸ್‌ಇ: ಪರೀಕ್ಷಾ ವೇಳಾಪಟ್ಟಿ ಪ್ರಕಟ

ನವದೆಹಲಿ (ಪಿಟಿಐ): 10ನೇ ತರಗತಿಯ ಪ್ರಥಮಾವಧಿಯ ಪರೀಕ್ಷೆಗಳು ನವೆಂಬರ್ 30 ಹಾಗೂ 12ನೇ ತರಗತಿ ಪರೀಕ್ಷೆಗಳು ಡಿಸೆಂಬರ್ 1ರಿಂದ ನಡೆಸಲಾಗುವುದು ಎಂದು ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) ಸೋಮವಾರ ತಿಳಿಸಿದೆ.

'ವಿಷಯವಾರು ವೇಳಾಪಟ್ಟಿಯನ್ನು ಶಾಲೆಗಳಿಗೆ ರವಾನಿಸಲಾಗುವುದು' ಎಂದು ಪರೀಕ್ಷಾ ನಿಯಂತ್ರಕ ಸಂಯಮ್ ಭಾರದ್ವಾಜ್ ಅವರು ತಿಳಿಸಿದ್ದಾರೆ.

ಕೋವಿಡ್–19 ಪಿಡುಗಿನ ಕಾರಣ 10 ಹಾಗೂ 12ನೇ ತರಗತಿ ಪರೀಕ್ಷೆಗಳಿಗೆ ಸಂಬಂಧಿಸಿ ವಿಶೇಷ ಮೌಲ್ಯಮಾಪನ ಯೋಜನೆಯನ್ನು ಸಿಬಿಎಸ್‌ಇ ಕಳೆದ ಜುಲೈನಲ್ಲಿ ಘೋಷಿಸಿತ್ತು. ಈ ಯೋಜನೆ ಅನುಸಾರ ಈಗ ಪರೀಕ್ಷಾ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ.

ಸಾಮಾಜಿಕ ತಾಣದಲ್ಲಿ ವಿಡಿಯೊ ವೈರಲ್

ಠಾಣೆ ಎದುರು ಡಿಸಿಪಿಗೆ ನಿಂದನೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡಲು ಪ್ರಚೋದಿಸಿದ ವ್ಯಕ್ತಿಯನ್ನು ಬಂಧಿಸುವಂತೆ ಆಗ್ರಹಿಸಿ ಹಿಂದೂಪರ ಸಂಘಟನೆಯವರು ಭಾನುವಾರ ರಾತ್ರಿ ನವನಗರ ಪೊಲೀಸ್ ಠಾಣೆ ಎದುರು ಪ್ರತಿಭಟಿಸುವಾಗ ವ್ಯಕ್ತಿಯೊಬ್ಬರು ಡಿಸಿಪಿಯನ್ನು ಬಹಿರಂಗವಾಗಿಯೇ ಅವಾಚ್ಯ ಪದಗಳಿಂದ ನಿಂದಿಸಿದ ವಿಡಿಯೊ ವೈರಲ್ ಆಗಿದೆ.

'ಗಡುವು ಮುಗಿದರೂ ಪೊಲೀಸರು ಆರೋಪಿಯನ್ನು ಬಂಧಿಸಿಲ್ಲ. ಏನಂತ ತಿಳಿದುಕೊಂಡಿಲೇ ಡಿಸಿಪಿ; ಹಿಂದೂ ಸಮಾಜವನ್ನು ಏನೂ ಬೇಕಾದರೂ ಮಾಡಿದರೆ ನಡೆಯುತ್ತದೆ ಎಂದುಕೊಂಡಿದ್ದೀಯಾ? ಹಿಂದೆ ಹುಬ್ಬಳ್ಳಿಯಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದ ಆರೋಪಿಗಳನ್ನು ಠಾಣೆಗೆ ಕರೆದುಕೊಂಡು ಬಂದಿದ್ದರೂ ಆಗಿನ ಕಮಿಷನರ್ ಆರ್.ದಿಲೀಪ್ ವಾಪಸ್ ಕಳುಹಿಸಿದ್ದರು. ಆಗ ವಕೀಲರು ಹಾಗೂ ಸಮಾಜ ಒಂದಾಗಿ ಹೋರಾಟ ಮಾಡಿ ದೇಶದ್ರೋಹಿಗಳನ್ನು ಜೈಲಿಗೆ ಹಾಕಿದಂತೆ, ಮತಾಂತರ ಮಾಡುವವರನ್ನೂ ಒಳಗೆ ಹಾಕಿಸ್ತೇವಿ' ಎನ್ನುವ ಮಾತುಗಳು ವಿಡಿಯೊದಲ್ಲಿವೆ.

'ಇದುವರೆಗೆ ಆರೋಪಿಯನ್ನು ಬಂಧಿಸಿ ಎನ್ನುವುದಷ್ಟೇ ನಮ್ಮ ಬೇಡಿಕೆಯಾಗಿತ್ತು. ಇನ್ನೂ ವಿಳಂಬವಾದರೆ ಡಿಸಿಪಿಯನ್ನು ಬಂಧಿಸಬೇಕು ಎಂದು ಹೋರಾಟ ಮಾಡಬೇಕಾಗುತ್ತದೆ. ಪೊಲೀಸ್ ಇಲಾಖೆಯಲ್ಲಿ ಶೇ 99ರಷ್ಟು ಜನ ಸಿಬ್ಬಂದಿ ಹಿಂದೂಗಳೇ ಇದ್ದು, ಅವರೆಲ್ಲ ಕಾನೂನು ಪಾಲನೆ ಮಾಡುತ್ತಿದ್ದಾರೆ. ಆದರೆ ಮತಾಂತರಿ, ದೇಶದ್ರೋಹಿ ಹಾಗೂ ಸೋನಿಯಾ ಗಾಂಧಿಯ ಚಮಚಾ ಡಿಸಿಪಿ, ಠಾಣೆಗೆ ಸಂಘಟನೆಯ ಕಾರ್ಯಕರ್ತರು ಕರೆದುಕೊಂಡು ಬಂದ ಆರೋಪಿಯನ್ನೇ ವಾಪಸ್ ಕಳುಹಿಸಿದ್ದಾನೆ' ಎಂದು ಏಕವಚನದಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭಾನುವಾರದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಬಿಜೆಪಿ ಮುಖಂಡ ಜಯತೀರ್ಥ ಕಟ್ಟಿ ವಿಡಿಯೊ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿ, 'ವಿಡಿಯೊದಲ್ಲಿ ಮಾತನಾಡಿದ ವ್ಯಕ್ತಿಯ ಆಕ್ರೋಶದ ಭಾವನೆಗಳು ಅರ್ಥವಾಗುತ್ತವೆ. ಆದರೆ ಆ ವ್ಯಕ್ತಿ ಬಳಸಿದ ಅವಾಚ್ಯ ಪದಗಳಿಗೆ ನಮ್ಮ ಸಹಮತವಿಲ್ಲ' ಎಂದರು.

ಹುಬ್ಬಳ್ಳಿ–ಧಾರವಾಡ ಪೊಲೀಸ್ ಕಮಿಷನರ್ ಲಾಬೂರಾಮ್ ಪ್ರತಿಕ್ರಿಯಿಸಿ, 'ವಿಡಿಯೊ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು' ಎಂದರು.

ಧರ್ಮದ ಅವಹೇಳನ; ಲೇಖಕರ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಹೊಸಪೇಟೆ(ವಿಜಯನಗರ): ಬಿ.ಇಡಿ ಮೂರನೇ ಸೆಮಿಸ್ಟರ್‌ನ 'ಮೌಲ್ಯಾಧಾರಿತ ಶಿಕ್ಷಣ' ಪಠ್ಯಪುಸ್ತಕದಲ್ಲಿ ಇಸ್ಲಾಂ ಧರ್ಮ ಮತ್ತು ಪ್ರವಾದಿ ಮುಹಮ್ಮದ್‌ರ ಕುರಿತು ಅವಹೇಳನಕಾರಿ ಅಂಶಗಳಿದ್ದು, ಅದರ ಲೇಖಕ ಬಿ.ಆರ್. ರಾಮಚಂದ್ರಯ್ಯ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ (ಸಿಎಫ್‌ಐ) ಆಗ್ರಹಿಸಿದೆ.

ಈ ಸಂಬಂಧ ಸಿಎಫ್‌ಐ ಮುಖಂಡರು ಸೋಮವಾರ ಇಲ್ಲಿನ ಪಟ್ಟಣ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದಾರೆ.

'ರಾಜ್ಯದ ಎಲ್ಲ ವಿ.ವಿಗಳಿಗೆ ಈ ಪಠ್ಯ ಇದೆ. ತುಮಕೂರು ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಬಿ.ಆರ್.ರಾಮಚಂದ್ರಯ್ಯನವರ 'ಮೌಲ್ಯ ದರ್ಶನ ದಿ ಎಸೆನ್ಸ್ ಆಫ್ ವ್ಯಾಲ್ಯೂ ಎಜುಕೇಶನ್' ಎಂಬ ಆಂಗ್ಲ ಕೃತಿಯ ವಿಷಯವನ್ನು ಪಠ್ಯಕ್ಕೆ ಸೇರಿಸಲಾಗಿದೆ. ಕೃತಿಯಲ್ಲಿ ಉದ್ದೇಶಪೂರ್ವಕವಾಗಿ ಕೋಮುಭಾವನೆಕೆರಳಿಸಿ, ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಯತ್ನಿಸಲಾಗಿದೆ' ಎಂದು ದೂರಿನಲ್ಲಿ ಆಗ್ರಹಿಸಿದ್ದಾರೆ.

ಸಿಎಫ್‌ಐ ಜಿಲ್ಲಾ ಸಮಿತಿ ಸದಸ್ಯರಾದ ಶೆಕ್ಷಾವಲಿ, ಫರ್ದೀನ್ ಮತ್ತು ಫಯಾಜ್ ದೂರು ದಾಖಲಿಸಿದ್ದಾರೆ.



ಅ.25 ರಿಂದ ಶಾಲೆ ಆರಂಭ

ಒಂದನೇ ಪುಟದಿಂದ

'20 ತಿಂಗಳಿಗೂ ಹೆಚ್ಚು ಅವಧಿಯಿಂದ ಮಕ್ಕಳು ಭೌತಿಕ ತರಗತಿಗಳಿಂದ ದೂರ ಉಳಿದಿದ್ದಾರೆ. ಅವರಿಗೆ ರೂಢಿಯಾಗಲೆಂದು ಮೊದಲ ಒಂದು ವಾರ ಮಧ್ಯಾಹ್ನದವರೆಗೆ ಮಾತ್ರ ತರಗತಿಗಳನ್ನು ನಡೆಸಲಾಗುವುದು. ನಂತರ ಪೂರ್ಣ ಪ್ರಮಾಣದಲ್ಲಿ ಆರಂಭಿಸಲಾಗುವುದು. ಕೋವಿಡ್ ಸುರಕ್ಷತಾ ಕ್ರಮಗಳನ್ನು ಮಕ್ಕಳು ಪಾಲಿಸುವಂತೆ ನೋಡಿಕೊಳ್ಳಲು ಡಿಡಿಪಿಐಗಳು, ಬಿಇಒಗಳು, ಶಿಕ್ಷಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಮಕ್ಕಳಲ್ಲಿ ಕೋವಿಡ್ ಕುರಿತು ಜಾಗೃತಿ ಮೂಡಿಸಲು ಕೋವಿಡ್ ಸೋಂಕಿನ ಕುರಿತು ತರಗತಿ ಅವಧಿಯಲ್ಲಿ ಮಾಹಿತಿ ನೀಡುವಂತೆ ಸೂಚನೆ ನೀಡಲಾಗಿದೆ' ಎಂದು ತಿಳಿಸಿದರು.

'ಅಂತರ ಕಾಪಾಡಿಕೊಳ್ಳುವ ದೃಷ್ಟಿಯಿಂದ ತರಗತಿಗಳಲ್ಲಿ ಶೇ 50 ರಷ್ಟು ಹಾಜರಾತಿಗೆ ತಾಂತ್ರಿಕ ಸಲಹಾ ಸಮಿತಿ ಸೂಚಿಸಿದೆ. ಕೊಠಡಿಯಲ್ಲಿ ಅಂತರ ಕಾಪಾಡಿಕೊಳ್ಳಲು ಸಾಕಷ್ಟು ಜಾಗ, ಮೂಲಸೌಕರ್ಯ ಇರುವ ಶಾಲೆಗಳಲ್ಲಿ ಶೇ 50ಕ್ಕಿಂತ ಹೆಚ್ಚು ಮಕ್ಕಳು ಹಾಜರಾಗಲು ಯಾವುದೇ ಸಮಸ್ಯೆ ಇಲ್ಲ. ತರಗತಿಗಳನ್ನು ಆರಂಭಿಸುವ ಮೊದಲು ಶಾಲೆಗಳು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಎರಡು ದಿನಗಳಲ್ಲಿ ಮಾರ್ಗಸೂಚಿಯನ್ನು ಬಿಡುಗಡೆ ಮಾಡಲಾಗುವುದು' ಎಂದರು.

'ಇದೇ 21 ರಿಂದ 6 ರಿಂದ 10ನೇ ತರಗತಿಗಳ ವಿದ್ಯಾರ್ಥಿಗಳಿಗೆ, ನ. 2ರಿಂದ ಎಲ್ಲ ತರಗತಿಗಳ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಆರಂಭಿಸಲಾಗುವುದು' ಎಂದರು.

'ಪಠ್ಯಕ್ರಮವನ್ನು ಕಡಿತಗೊಳಿಸುವ ಪ್ರಸ್ತಾಪ ಇಲ್ಲ. ನಿಗದಿತ ಅವಧಿಯಲ್ಲಿ ಪಠ್ಯವನ್ನು ಯಾವ ರೀತಿ ಪೂರ್ಣಗೊಳಿಸಬೇಕು ಎಂಬ ಕುರಿತು ಶಿಕ್ಷಕರು, ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿ ಮುಂದಿನ ದಿನಗಳಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುವುದು. ಆನ್‌ಲೈನ್ ತರಗತಿಗಳಿಂದ ವಿದ್ಯಾರ್ಥಿಗಳ ಕಲಿಕೆಯಲ್ಲಿ ಹಿನ್ನಡೆಯಾಗಿರುವ ಕಾರಣ, ಅಂಥ ಮಕ್ಕಳಿಗೆ 'ಸೇತು ಬಂಧ' ವಿಶೇಷ ತರಗತಿಗಳ ಮೂಲಕ ಪಾಠ ಹೇಳಿಕೊಡಲಾಗುವುದು' ಎಂದು ಸಚಿವರು ವಿವರಿಸಿದರು.

'ನ. 2 ರಿಂದ ಶನಿವಾರ ಕೂಡ ತರಗತಿಗಳನ್ನು ನಡೆಸಲಾಗುವುದು. ತರಗತಿಗಳಿಗೆ ವಿದ್ಯಾರ್ಥಿಗಳ ಭೌತಿಕ ಹಾಜರಾತಿ ಕಡ್ಡಾಯ ಇಲ್ಲ. ಆನ್‌ಲೈನ್ ತರಗತಿಗಳನ್ನು ಮುಂದುವರೆಸಬಹುದು. ಆದರೆ, ಬಹುತೇಕ ಶಾಲೆಗಳಲ್ಲಿ ಭೌತಿಕ ಹಾಜರಾತಿಗೆ ಮಕ್ಕಳು ಮತ್ತು ಪಾಲಕರು ಆಸಕ್ತಿ ತೋರಿಸುತ್ತಿದ್ದಾರೆ' ಎಂದೂ ಅವರು ಹೇಳಿದರು.

'ಪಠ್ಯ ಕಡಿತ ಮಾಡಬೇಕು'

'20 ತಿಂಗಳುಗಳಿಂದ ಭೌತಿಕ ತರಗತಿಗಳು ನಡೆಯದೆ ಮಕ್ಕಳು ಮಾನಸಿಕ ಖಿನ್ನತೆಗೆ ಒಳಗಾಗಿದ್ದರು. ಪೋಷಕರೂ ಆತಂಕಕ್ಕೀಡಾಗಿದ್ದರು. ಹೀಗಾಗಿ, ಶಾಲೆ ಆರಂಭಿಸುವ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಆದರೆ, ಈವರೆಗೆ ನಷ್ಟವಾದ ಕಲಿಕೆಯನ್ನು ತುಂಬಲು ಪುನರಾವರ್ತಿತ ತರಗತಿಗಳನ್ನು ನಡೆಸಬೇಕಿದೆ. ಆ ತರಗತಿಗಳಿಗೆ ದಿನಗಳನ್ನು ಮೀಸಲಿಟ್ಟರೆ ಪಠ್ಯವನ್ನು ಪೂರ್ಣಗೊಳಿಸಲು ಸಾಧ್ಯವಿಲ್ಲ. ಹೀಗಾಗಿ, ಪಠ್ಯ ಕಡಿತಗೊಳಿಸುವುದು ಸೂಕ್ತ' ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ (ರುಪ್ಸಾ) ಒಕ್ಕೂಟದ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಹೇಳಿದರು.

ಷರತ್ತುಗೇಳೇನು ?

- ಪೋಷಕರ ಅನುಮತಿ ಪತ್ರ ಕಡ್ಡಾಯ
- ಶಾಲಾ ಪ್ರವೇಶ ಬಳಿ ಕೋವಿಡ್ ಲಕ್ಷಣ ಪರಿಶೀಲನೆ ಅಗತ್ಯ
- ಕೊಠಡಿಯಲ್ಲಿ ಶೇ 50ರಷ್ಟು ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ
- ಶಿಕ್ಷಕರು, ಸಿಬ್ಬಂದಿ ಎರಡೂ ಡೋಸ್ ಲಸಿಕೆ ಪಡೆದಿರಬೇಕು
- 50 ವರ್ಷ ದಾಟಿದ ಶಿಕ್ಷಕರು ಹೆಚ್ಚುವರಿ ಫೇಸ್ ಶೀಲ್ಡ್ ಬಳಸಬೇಕು
- ಸ್ಯಾನಿಟೈಸರ್, ಪರಸ್ಪರ ಕನಿಷ್ಠ 1 ಮೀಟರ್ ಅಂತರ ಪಾಲಿಸಬೇಕು
- ವಿದ್ಯಾರ್ಥಿಗಳು ಗುಂಪುಗೂಡಲು ಅವಕಾಶ ಇಲ್ಲ
- ಕೊಠಡಿಗಳನ್ನು ನಿತ್ಯ ಸ್ವಚ್ಛಗೊಳಿಸಬೇಕು

ಅಮೆರಿಕ: ಕಾಲಿನ್ ಪೊವೆಲ್ ನಿಧನ



ವಾಷಿಂಗ್ಟನ್(ಎಪಿ): ಅಮೆರಿಕ ಮಿಲಿಟರಿಯ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದ ಮೊದಲ ಕಪ್ಪುವರ್ಣೀಯ ಅಧಿಕಾರಿ ಎಂಬ ಖ್ಯಾತಿ ಹೊಂದಿದ್ದ ಕಾಲಿನ್ ಪೊವೆಲ್ (84) ಕೋವಿಡ್–19 ಸಂಬಂಧಿತ ಸಮಸ್ಯೆಗಳಿಂದಾಗಿ ಸೋಮವಾರ ನಿಧನರಾದರು.

ಅವರಿಗೆ ಮೇರಿಲ್ಯಾಂಡ್‌ನ ವಾಲ್ಟರ್ ರೀಡ್ ನ್ಯಾಷನಲ್ ಮೆಡಿಕಲ್ ಸೆಂಟರ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು.

'ಅವರಿಗೆ ಕೋವಿಡ್ ಲಸಿಕೆಯ ಪೂರ್ಣ ಡೋಸ್ ನೀಡಲಾಗಿತ್ತು. ನಾವು ಪ್ರೀತಿಯ ತಂದೆ, ಪತಿ ಹಾಗೂ ತಾತನನ್ನು, ಮಿಗಿಲಾಗಿ ಶ್ರೇಷ್ಠ ಅಮೆರಿಕನ್‌ನನ್ನು ಕಳೆದುಕೊಂಡಿದ್ದೇವೆ' ಎಂದು ಪೊವೆಲ್ ಅವರ ಕುಟುಂಬ ಸಾಮಾಜಿಕ ಮಾಧ್ಯಮಗಳಲ್ಲಿ ದುಃಖ ಹಂಚಿಕೊಂಡಿದೆ.

ಸೇನಾ ಜನರಲ್ ಆಗಿ, ಮಿಲಿಟರಿಯ ಜಂಟಿ ಮುಖ್ಯಸ್ಥರಾಗಿ ಅವರು ಕಾರ್ಯನಿರ್ವಹಿಸಿದ್ದರು. ಈ ಹುದ್ದೆಗೇರಿದ ಮೊದಲ ಕಪ್ಪುವರ್ಣೀಯ ಎಂಬ ಖ್ಯಾತಿಗೆ ಪಾತ್ರರಾಗಿದ್ದರು. 1991ರ ಕೊಲ್ಲಿ ಯುದ್ಧದ ಸಮಯದಲ್ಲಿ ಅಮೆರಿಕ ನೇತೃತ್ವದ ಭದ್ರತಾ ಪಡೆಗಳು ಕುವೈತ್ ನಿಂದ ಇರಾಕ್ ಸೈನ್ಯವನ್ನು ಹೊರದಬ್ಬಿತ್ತು. ಈ ಯುದ್ಧದ ವೀರ ಎಂದು ಪೊವೆಲ್ ಅವರನ್ನು ಕರೆಯಲಾಗುತ್ತದೆ.

ಕೋವ್ಯಾಕ್ಸಿನ್: ತುರ್ತು ಬಳಕೆಗೆ ಡಬ್ಲ್ಯುಎಚ್‌ಒ ಒಪ್ಪಿಗೆ ನೀಡುವ ಸಾಧ್ಯತೆ

ವಿಶ್ವಸಂಸ್ಥೆ/ಜಿನೀವಾ (ಪಿಟಿಐ): ಭಾರತದ ಕೋವ್ಯಾಕ್ಸಿನ್ ಲಸಿಕೆಯನ್ನು ತುರ್ತು ಬಳಕೆಯ ಪಟ್ಟಿಯಲ್ಲಿ ಪರಿಗಣಿಸಲು ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ತಾಂತ್ರಿಕ ಸಲಹಾ ಗುಂಪು ಅಕ್ಟೋಬರ್ 26 ರಂದು ಸಭೆ ಸೇರಲಿದೆ ಎಂದು ಜಾಗತಿಕ ಆರೋಗ್ಯ ಸಂಸ್ಥೆಯ ಮುಖ್ಯ ವಿಜ್ಞಾನಿ ಸೌಮ್ಯಾ ಸ್ವಾಮಿನಾಥನ್ ಹೇಳಿದ್ದಾರೆ. ಕೋವ್ಯಾಕ್ಸಿನ್ ಅನ್ನು ಭಾರತದಲ್ಲಿ ಕೋವಿಡ್ ಲಸಿಕಾ ಕಾರ್ಯಕ್ರಮದಡಿ ಬಳಸಲಾಗುತ್ತಿದೆ.

ಕೋವ್ಯಾಕ್ಸಿನ್ ಅಭಿವೃದ್ಧಿಪಡಿಸಿರುವ ಭಾರತ ಬಯೋಟೆಕ್ ಸಂಸ್ಥೆಯು ಲಸಿಕೆಯ ಬಳಕೆಗಾಗಿ ಕಳೆದ ಏಪ್ರಿಲ್ 19 ರಂದು ಪ್ರಸ್ತಾವನೆ ಸಲ್ಲಿಸಿತ್ತು.

ಅಭ್ಯಾಸ ಪಂದ್ಯ: ಇಶಾನ್ ಕಿಶನ್, ಕೆ.ಎಲ್.ರಾಹುಲ್ ಭರ್ಜರಿ ಬ್ಯಾಟಿಂಗ್

ಭಾರತಕ್ಕೆ ಮಣಿದ ಇಂಗ್ಲೆಂಡ್

ದುಬೈ: ಇಶಾನ್ ಕಿಶನ್ (ಔಟಾಗದೆ, ನಿವೃತ್ತಿ 70, 46ಎ, 7 ಬೌಂಡರಿ, 3 ಸಿಕ್ಸರ್) ಹಾಗೂ ಕನ್ನಡಿಗ ಕೆ.ಎಲ್. ರಾಹುಲ್ (51, 24ಎ, 6 ಬೌಂ, 3 ಸಿ.) ಅವರ ಭರ್ಜರಿ ಬ್ಯಾಟಿಂಗ್ ನೆರವಿನಿಂದ ಭಾರತ ತಂಡವು ಇಂಗ್ಲೆಂಡ್ ಎದುರು ಗೆದ್ದಿತು.

ಸೋಮವಾರ ನಡೆದ ಟ್ವೆಂಟಿ–20 ವಿಶ್ವಕಪ್ ಟೂರ್ನಿಯ ಅಭ್ಯಾಸ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಬಳಗ ಏಳು ವಿಕೆಟ್‌ಗಳಿಂದ ಜಯ ಸಾಧಿಸಿತು.

ಇಂಗ್ಲೆಂಡ್ ನೀಡಿದ 189 ರನ್‌ಗಳ ಗುರಿಯನ್ನು ಒಂದು ಓವರ್ ಬಾಕಿ ಇರುವಂತೆಯೇ ಮೂರು ವಿಕೆಟ್ ಕಳೆದುಕೊಂಡು ತಲುಪಿತು. ರಾಹುಲ್ ಹಾಗೂ ಇಶಾನ್ ಮೊದಲ ವಿಕೆಟ್ ಜೊತೆಯಾಟದಲ್ಲಿ 82 ರನ್ ಸೇರಿಸಿ ಭದ್ರಬುನಾದಿ ಹಾಕಿ ಕೊಟ್ಟರು.

ವಿರಾಟ್ ಕೊಹ್ಲಿ (11) ಹಾಗೂ ಸೂರ್ಯಕುಮಾರ್ ಯಾದವ್ (8) ವೈಫಲ್ಯ ಅನುಭವಿಸಿದರೂ ರಿಷಭ್ ಪಂತ್ ಹಾಗೂ ಹಾರ್ದಿಕ್ ಪಾಂಡ್ಯ ತಂಡವನ್ನು ಗೆಲುವಿನ ದಡ ಸೇರಿಸಿದರು.

ಮಿಂಚಿದ ಬೆಸ್ಟೊ, ಮೋಯಿನ್: ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಜಾನಿ ಬೆಸ್ಟೊ ಮತ್ತು ಮೋಯಿನ್ ಅಲಿ ಭಾರತದ ಬೌಲಿಂಗ್ ಪಡೆಯ ಯೋಜನೆಯನ್ನು ತಲೆಕೆಳಗಾಗಿ ಸಿದರು.

ಇಂಗ್ಲೆಂಡ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 188 ರನ್ ಗಳಿಸಲು ಜಾನಿ (49; 36ಎ) ಮತ್ತು ಮೋಯಿನ್ (ಔಟಾಗದೆ 43) ಅವರ ಬ್ಯಾಟಿಂಗ್ ಕಾರಣವಾಯಿತು.

ಭಾರತದ ಬೌಲರ್‌ಗಳು ಆರಂಭದಲ್ಲಿ ಉತ್ತಮವಾಗಿ ಆಡಿದರು. ಮೊಹಮ್ಮದ್ ಶಮಿ (40ಕ್ಕೆ3) ಆರಂಭದಲ್ಲಿಯೇ ಪೆಟ್ಟುಕೊಟ್ಟರು. ಅದರಿಂದಗಿ 10 ಓವರ್‌ಗಳಾಗುಷ್ಟರಲ್ಲಿ ಇಂಗ್ಲೆಂಡ್ 77 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿತು. ಈ ಸಂದರ್ಭದಲ್ಲಿ ಜೊತೆಗೂಡಿದ ಜಾನಿ ಬೆಸ್ಟೊ ಮತ್ತು ಲಿಯಾಮ್ ಲಿವಿಂಗ್‌ಸ್ಟೋನ್ (30; 20ಎ) ಅಬ್ಬರಿಸಿದರು. ಇಬ್ಬರೂ ಬೌಲರ್‌ಗಳಿಗೆ ಸವಾಲೆಸೆದರು. ಇದರಿಂದಾಗಿ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 52 ರನ್‌ಗಳು ಸೇರಿದವು. ಅದಕ್ಕಾಗಿ ಇಬ್ಬರೂ ಆಡಿದ್ದು 25 ಎಸೆತ ಮಾತ್ರ.

15ನೇ ಓವರ್‌ನಲ್ಲಿ ಲಿವಿಂಗ್‌ಸ್ಟೋನ್ ವಿಕೆಟ್ ಗಳಿಸಿದ ಶಮಿ ಜೊತೆಯಾಟವನ್ನು ಮುರಿದರು. ಆದರೆ ಭಾರತ ತಂಡದ ಸಂಭ್ರಮ ಹೆಚ್ಚು ಹೊತ್ತು ಇರಲು ಮೋಯಿನ್ ಅಲಿ ಬಿಡಲಿಲ್ಲ. ಐಪಿಎಲ್‌ನಲ್ಲಿ ಮಿಂಚಿ ಬಂದಿರುವ ಅಲಿ, 215ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಸೂರೆ ಮಾಡಿದರು. ಎರಡು ಸಿಕ್ಸರ್ ಮತ್ತು ನಾಲ್ಕು ಬೌಂಡರಿಗಳನ್ನು ಸಿಡಿಸಿ ತಂಡದ ಮೊತ್ತ ಹೆಚ್ಚುವಂತೆ ನೋಡಿಕೊಂಡರು. ಐದನೇ ವಿಕೆಟ್ ಜೊತೆಯಾಟದಲ್ಲಿ ಬೆಸ್ಟೊ ಮತ್ತು ಅಲಿ 34 ರನ್‌ಗಳನ್ನು ಸೇರಿಸಿದರು.

ಆದರೆ 19ನೇ ಓವರ್‌ನಲ್ಲಿ ಬೆಸ್ಟೊ ಔಟಾದರು. ಆದರೆ, ಕೊನೆಯ ಓವರ್‌ನಲ್ಲಿ ಎರಡು ಸಿಕ್ಸರ್ ಮತ್ತು ಒಂದು ಬೌಂಡರಿ ಗಳಿಸಿದ ಅಲಿ ಅಜೇಯರಾಗುಳಿದರು. ಭಾರತ ತಂಡದ ಆರಂಭಿಕ ಬ್ಯಾಟ್ಸ್‌ಮನ್ ರೋಹಿತ್ ಶರ್ಮಾಗೆ ವಿಶ್ರಾಂತಿ ನೀಡಿ, ಕೆ.ಎಲ್. ರಾಹುಲ್ ಮತ್ತು ಇಶಾನ್ ಕಿಶನ್ ಅವರನ್ನು ಕಣಕ್ಕಿಳಿಸಲಾಯಿತು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 188 (ಜಾನಿ ಬೆಸ್ಟೊ 49, ಲಿಯಾಮ್ ಲಿವಿಂಗ್‌ಸ್ಟೋನ್ 30, ಮೋಯಿನ್ ಅಲಿ ಔಟಾಗದೆ 43, ಜೇಸನ್ ರಾಯ್ 17, ಜೋಸ್ ಬಟ್ಲರ್ 18, ಡೇವಿಡ್ ಮಲಾನ್ 18, ಮೊಹಮ್ಮದ್ ಶಮಿ 40ಕ್ಕೆ3, ರಾಹುಲ್ ಚಾಹರ್ 43ಕ್ಕೆ1, ಜಸ್‌ಪ್ರೀತ್ ಬೂಮ್ರಾ 26ಕ್ಕೆ1). **ಭಾರತ:** 19 ಓವರ್‌ಗಳಲ್ಲಿ 3 ವಿಕೆಟ್‌ಗೆ 192 (ಕೆ.ಎಲ್.ರಾಹುಲ್ 51, ಇಶಾನ್ ಕಿಶನ್ 70 (ನಿವೃತ್ತಿ), ವಿರಾಟ್ ಕೊಹ್ಲಿ 11, ರಿಷಭ್ ಪಂತ್ ಔಟಾಗದೆ 29, ಹಾರ್ದಿಕ್ ಪಾಂಡ್ಯ ಔಟಾಗದೆ 16; ಡೇವಿಡ್ ವಿಲ್ಲಿ 16ಕ್ಕೆ 1; ಮಾರ್ಕ್ ವುಡ್ 22ಕ್ಕೆ 1, ಲಿಯಾಮ್ ಲಿವಿಂಗ್‌ಸ್ಟೋನ್ 10ಕ್ಕೆ1), **ಫಲಿತಾಂಶ:** ಭಾರತ ತಂಡಕ್ಕೆ ಏಳು ವಿಕೆಟ್‌ಗಳ ಜಯ.


ಇಶಾನ್ ಕಿಶನ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ


ಕೆ.ಎಲ್.ರಾಹುಲ್ ಸಂಭ್ರಮ–ಪಿಟಿಐ ಚಿತ್ರ

ಬಾಂಗ್ಲಾಗೆ ಜಯ ಅನಿವಾರ್ಯ

ಅಲ್ ಅಮೆರತ್, ಒಮನ್: ಮೊದಲ ಪಂದ್ಯದಲ್ಲೇ ಸೋಲಿನ ಆಘಾತ ಕಂಡಿರುವ ಬಾಂಗ್ಲಾದೇಶ ತಂಡ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಗುಂಪು ಹಂತದ ನಿರ್ಣಾಯಕ ಪಂದ್ಯದಲ್ಲಿ ಮಂಗಳವಾರ ಒಮನ್ ವಿರುದ್ಧ ಸೆಣಸಲಿದೆ.

ಸ್ಕಾಟ್ಲೆಂಡ್ ವಿರುದ್ಧ ಭಾನುವಾರ ನಡೆದ ಪಂದ್ಯದಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ ಬಾಂಗ್ಲಾದೇಶ ಆರು ರನ್‌ಗಳಿಂದ ಸೋತಿತ್ತು. ಒಮನ್ ಮೊದಲ ಪಂದ್ಯದಲ್ಲಿ 10 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿ ಭರವಸೆಯಲ್ಲಿದೆ. ಸೂಪರ್ 12 ಹಂತದ ಕನಸು ಜೀವಂತವಾಗಿ ಉಳಿಯಬೇಕಾದರೆ ಬಾಂಗ್ಲಾದೇಶಕ್ಕೆ ಮಂಗಳವಾರ ಜಯ ಅನಿವಾರ್ಯವಾಗಿದೆ.

ಆರಂಭ: ರಾತ್ರಿ 7.30 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಿಎನ್‌ಜಿ–ಸ್ಕಾಟ್ಲೆಂಡ್ ಮುಖಾಮುಖಿ

ಅಲ್ ಅಮೆರತ್ (ಪಿಟಿಐ): ಮೊದಲ ಪಂದ್ಯದಲ್ಲಿ ಜಯ ಗಳಿಸಿರುವ ಸ್ಕಾಟ್ಲೆಂಡ್ ಮತ್ತು ಒಮನ್‌ಗೆ ಮಣಿದಿರುವ ಪಪುವ ನ್ಯೂಗಿನಿ ತಂಡಗಳು ಮಂಗ ಳವಾರ ಮುಖಾಮುಖಿಯಾಗಲಿವೆ.

ಗೆದ್ದರೆ ಸ್ಕಾಟ್ಲೆಂಡ್ ತಂಡದ ಸೂಪರ್ 12 ಹಂತದ ಹಾದಿ ಸುಗಮ ಆಗಲಿದೆ. ಸತತ ಸೋಲು ಕಂಡಿರುವ ಪಪುವ ನ್ಯೂಗಿನಿ ಜಯದ ನಿರೀಕ್ಷೆಯಲ್ಲಿದೆ.

ಪಂದ್ಯ ಆರಂಭ: 3.30


ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಐರ್ಲೆಂಡ್‌ಗೆ ಭರ್ಜರಿ ಗೆಲುವು

ಅಬುಧಾಬಿ (ಎಎಫ್‌ಪಿ): ಹ್ಯಾಟ್ರಿಕ್ ಸೇರಿದಂತೆ ನಾಲ್ಕು ವಿಕೆಟ್ ಗಳಿಸಿದ ವೇಗಿ ಕರ್ಟಿಸ್ ಕ್ಯಾಂಫರ್ ಅವರ ಅಮೋಘ ಬೌಲಿಂಗ್ ಮತ್ತು ಪಾಲ್ ಸ್ಟರ್ಲಿಂಗ್–ಗರೆತ್ ಡೆಲಾನಿ ಜೋಡಿಯ ಉತ್ತಮ ಬ್ಯಾಟಿಂಗ್ ನೆರವಿನಿಂದ ಐರ್ಲೆಂಡ್ ತಂಡ ಟಿ20 ವಿಶ್ವಕಪ್ ಟೂರ್ನಿಯ ಗುಂಪು ಹಂತದ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಐರ್ಲೆಂಡ್ ಏಳು ವಿಕೆಟ್‌ಗಳಿಂದ ನೆದರ್ಲೆಂಡ್ಸ್ ವಿರುದ್ಧ ಜಯ ಗಳಿಸಿತು. ಕ್ಯಾಂಫರ್ 24ಕ್ಕೆ4 ವಿಕೆಟ್ ಗಳಿಸಿದರೆ ಪಾಲ್ ಸ್ಟರ್ಲಿಂಗ್ ಅಜೇಯ 30 ರನ್ (39ಎಸೆತ; 1ಬೌಂಡರಿ, 1 ಸಿಕ್ಸರ್) ಮತ್ತು ಗರೆತ್ ಡೆಲಾನಿ 29 ಎಸೆತಗಳಲ್ಲಿ 44 ರನ್ (5 ಬೌಂ, 2 ಸಿ) ಸಿಡಿಸಿದರು.

‘ಎ’ ಗುಂಪಿನ ಪಂದ್ಯದಲ್ಲಿ ಟಾಸ್ ಗೆದ್ದ ನೆದರ್ಲೆಂಡ್ಸ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಒಂದು ರನ್ ಗಳಿಸುವಷ್ಟರಲ್ಲಿ ತಂಡ ಮೊದಲ ವಿಕೆಟ್ ಕಳೆದುಕೊಂಡಿತ್ತು. ಬೆನ್ ಕೂಪರ್ ಮತ್ತು ಬಾಸ್ ಟಿ ಲೀಡ್ ಕೂಡ ಬೇಗ ಮರಳಿದರು. ಆದರೆ ಆರಂಭಿಕ ಬ್ಯಾಟರ್ ಮ್ಯಾಕ್ಸ್ ಒಡೌಡ್ (51; 47 ಎ, 7 ಬೌಂ) ಮೋಹಕ ಆಟದ ಮೂಲಕ ತಂಡಕ್ಕೆ ಆಸರೆಯಾದರು.


ಕರ್ಟಿಸ್ ಕ್ಯಾಂಫರ್ –ಎಎಫ್‌ಪಿ ಚಿತ್ರ

ಕರ್ಟಿಸ್ ಕ್ಯಾಂಫರ್ ಸತತ ನಾಲ್ಕು ವಿಕೆಟ್ ಉರುಳಿಸಿದ ನಂತರ ನೆದರ್ಲೆಂಡ್ಸ್ ಇನಿಂಗ್ಸ್ ಮತ್ತೆ ಕುಸಿತ ಕಂಡಿತು. ಪೀಟರ್ ಸೀಲರ್ ಮಾತ್ರ ಸ್ವಲ್ಪ ಪ್ರತಿರೋಧ ಒಡ್ಡಿದರು. ಹೀಗಾಗಿ ತಂಡ 20 ಓವರ್‌ಗಳಲ್ಲಿ 106 ರನ್ ಗಳಿಸಿತು. ಇನಿಂಗ್ಸ್‌ನ ಕೊನೆಯ ಎಸೆತದಲ್ಲಿ ಬ್ರೆಂಡನ್ ಗ್ಲೋವರ್ ಔಟಾದರು.

ಗುರಿ ಬೆನ್ನತ್ತಿದ ಐರ್ಲೆಂಡ್ ಆರಂಭದಲ್ಲಿ ಎರಡು ವಿಕೆಟ್‌ಗಳನ್ನು ಕಳೆದುಕೊಂಡಿತು. ಆದರೆ ಸ್ಟರ್ಲಿಂಗ್ ಮತ್ತು ಡೆಲಾನಿ ಮೂರನೇ ವಿಕೆಟ್‌ಗೆ 59 ರನ್ ಸೇರಿಸಿ ಆಸರೆಯಾದರು. 15.1 ಓವರ್‌ಗಳಲ್ಲಿ ಮೂರು ವಿಕೆಟ್ ಕಳೆದುಕೊಂಡು 107 ರನ್ ಗಳಿಸಿದ ಐರ್ಲೆಂಡ್ ಜಯದ ನಗೆ ಸೂಸಿತು.

ಕ್ಯಾಂಫರ್ ಮೂರನೇ ಬೌಲರ್: ಕ್ಯಾಂಫರ್, ಟಿ20 ಕ್ರಿಕೆಟ್‌ನಲ್ಲಿ ಸತತ ನಾಲ್ಕು ವಿಕೆಟ್ ಗಳಿಸಿದ ಮೂರನೇ ಬೌಲರ್ ಎನಿಸಿಕೊಂಡರು. ಅಫ್ಗಾನಿಸ್ತಾನದ ರಶೀದ್ ಖಾನ್ ಮತ್ತು ಶ್ರೀಲಂಕಾದ ಲಸಿತ್ ಮಾಲಿಂಗ 2019ರಲ್ಲಿ ಈ ಸಾಧನೆ ಮಾಡಿದ್ದಾರೆ. ಟಿ20 ವಿಶ್ವಕಪ್‌ನಲ್ಲಿ ಹ್ಯಾಟ್ರಿಕ್ ವಿಕೆಟ್ ಸಾಧನೆ ಮಾಡಿದ ಎರಡನೇ ಬೌಲರ್ ಆಗಿದ್ದಾರೆ ಅವರು. 2007ರಲ್ಲಿ ಬಾಂಗ್ಲಾದೇಶ ವಿರುದ್ಧದ ಪಂದ್ಯದಲ್ಲಿ ಆಸ್ಟ್ರೇಲಿಯಾದ ಬ್ರೆಟ್ ಲೀ ಹ್ಯಾಟ್ರಿಕ್ ವಿಕೆಟ್ ಗಳಿಸಿದ್ದರು.

ಸಂಕ್ಷಿಪ್ತ ಸ್ಕೋರು: ನೆದರ್ಲೆಂಡ್ಸ್: 20 ಓವರ್‌ಗಳಲ್ಲಿ 106 (ಮ್ಯಾಕ್ಸ್ ಒಡೌಡ್ 51, ಪೀಟರ್ ಸೀಲಾರ್ 21; ಜೋಶ್ ಲಿಟಲ್ 14ಕ್ಕೆ1, ಮಾರ್ಕ್ ಅಡೇರ್ 9ಕ್ಕೆ3, ಕರ್ಟಿಸ್ ಕ್ಯಾಂಫರ್ 26ಕ್ಕೆ4); **ಐರ್ಲೆಂಡ್:** 15.1 ಓವರ್‌ಗಳಲ್ಲಿ 3ಕ್ಕೆ 107 (ಪಾಲ್ ಸ್ಟರ್ಲಿಂಗ್ ಔಟಾಗದೆ 30, ಗರೆತ್ ಡೆಲಾನಿ 44; ಫ್ರೆಡ್ ಕ್ಲಾಸೆನ್ 18ಕ್ಕೆ1, ಬ್ರೆಂಡನ್ ಗ್ಲೋವರ್ 21ಕ್ಕೆ1, ಪೀಟರ್ ಸೀಲಾರ್ 14ಕ್ಕೆ1). ಫಲಿತಾಂಶ: ಐರ್ಲೆಂಡ್‌ಗೆ 7 ವಿಕೆಟ್‌ಗಳ ಜಯ.

‘ತೀಕ್ಷ್ಣ’ ದಾಳಿ: ಶ್ರೀಲಂಕಾ ಜಯಭೇರಿ


ಅಬುಧಾಬಿ: ಶ್ರೀಲಂಕಾದ ಮಹೀಶ್ ತೀಕ್ಷಣ ದಾಳಿಗೆ ತತ್ತರಿಸಿದ ನಮೀಬಿಯಾ ತಂಡ ‘ಎ’ ಗುಂಪಿನ ಪಂದ್ಯದಲ್ಲಿ ಏಳು ವಿಕೆಟ್‌ಗಳ ಅಂತರದಿಂದ ಸೋತಿತು.

ಶೇಕ್ ಜಯೇದ್ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ನಡೆದ ಹಣಾಹಣಿಯಲ್ಲಿ ನಮೀಬಿಯಾ 19.3 ಓವರ್‌ಗಳಲ್ಲಿ 96ಕ್ಕೆ ಆಲೌಟಾಯಿತು.


ಗುರಿ ಬೆನ್ನತ್ತಿದ ಲಂಕಾ 13.3 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 100 ರನ್ ಗಳಿಸಿತು,

ತೀಕ್ಷಣ 25 ರನ್ ನೀಡಿ ಪ್ರಮುಖ ಮೂರು ವಿಕೆಟ್ ಕಬಳಿಸಿದರು. ಶ್ರೀಲಂಕಾ ಬ್ಯಾಟಿಂಗ್‌ನಲ್ಲಿ ಭಾನುಕಾ ರಾಜಪಕ್ಷೆ (ಔಟಾಗದೆ 42) ಹಾಗೂ ಆವಿಷ್ಕಾ ಫರ್ನಾಂಡೊ (ಔಟಾಗದೆ 30) ಮಿಂಚಿದರು.

ಸಂಕ್ಷಿಪ್ತ ಸ್ಕೋರು: ನಮೀಬಿಯಾ: 19.3 ಓವರ್‌ಗಳಲ್ಲಿ 96 (ಕ್ರೇಗ್ ವಿಲಿಯಮ್ಸ್ 29, ಗೆರಾರ್ಡ್ ಎರಾಸ್ಮಸ್ 20; ಚಮಿಕ ಕರುಣರತ್ನೆ 17ಕ್ಕೆ1, ದುಸ್ಮಂತ ಚಮೀರ 19ಕ್ಕೆ1, ಮಹೀಶ್ ತೀಕ್ಷಣ 25ಕ್ಕೆ3, ಲಾಹಿರು ಕುಮಾರ 9ಕ್ಕೆ2, ವಾಣಿಂದು ಹಸರಂಗ 24ಕ್ಕೆ2). ಶ್ರೀಲಂಕಾ: 13,3 ಓವರ್‌ಗಳಲ್ಲಿ 3 ವಿಕೆಟ್‌ಗೆ 100 (ಭನುಕಾ ರಾಜಪಕ್ಷ ಔಟಾಗದೆ 42, ಆವಿಷ್ಕಾ ಫರ್ನಾಂಡೊ ಔಟಾಗದೆ 30; ರುಬೆನ್ ಟ್ರಂಪಲ್‌ಮನ್ 27ಕ್ಕೆ 1, ಬರ್ನಾರ್ಡ್ ಸ್ಕಾಲ್ಟ್ಜ್ 16ಕ್ಕೆ 1). ಫಲಿತಾಂಶ: ಶ್ರೀಲಂಕಾ ತಂಡಕ್ಕೆ ಏಳು ವಿಕೆಟ್‌ಗಳ ಜಯ


ಮಹೀಶ್ ತೀಕ್ಷಣ –ಎಎಫ್‌ಪಿ ಚಿತ್ರ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,339
ಇಂದಿನ ಅಂತ್ಯ	18,477
▲	138
ದಿನದ ಗರಿಷ್ಠ	18543

ವಿನಿಮಯ ದರ

$ ಡಾಲರ್	75.35
£ ಪೌಂಡ್	103.48
€ ಯುರೊ	87.28
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹445
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹450

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1430 (1440)
ಸೋಯಾ (ರಿಫೈನ್ಡ್)	₹1305 (1290)
ಸೂರ್ಯಕಾಂತಿ (ರಿಫೈನ್ಡ್)	₹1350(1350)
ಪಾಮೋಲಿನ್	₹1200 (1200)

ಸ್ಟಾಕ್ ಸ್ಪ್ಲಿಟ್ ಎಂದರೇನು?

ಷೇರು ಮಾತು

ಶರತ್ ಎಂ.ಎಸ್.



ಷೇರುಪೇಟೆಯಲ್ಲಿ ಒಳ್ಳೆಯ ಕಂಪನಿಯ ಷೇರು ಖರೀದಿಸಬೇಕು ಎಂದುಕೊಂಡಿರುತ್ತೀರಿ. ಆದರೆ ಆ ಕಂಪನಿಯ ಷೇರಿನ ಪ್ರಸ್ತುತ ಮಾರುಕಟ್ಟೆ ಬೆಲೆ ₹ 5 ಸಾವಿರ! ನಿಮ್ಮ ಬಳಿ ₹ 3 ಸಾವಿರ ಮಾತ್ರ ಇದೆ. ಇಂತಹ ಪರಿಸ್ಥಿತಿಯಲ್ಲಿ ‘ಅಯ್ಯೋ, ಆ ಷೇರು ನಮ್ಮ ಕೈಗೆಟುಕುವುದಿಲ್ಲ’ ಎಂದು ಸುಮ್ಮನಾಗುತ್ತೀರಿ. ಈ ರೀತಿಯ ಸಂದರ್ಭಗಳನ್ನು ನಿವಾರಿಸಲು ಕಂಪನಿಗಳು ಷೇರುಪೇಟೆಯಲ್ಲಿ ಸ್ಟಾಕ್ ಸ್ಪ್ಲಿಟ್ (ಮುಖಬೆಲೆ ಸೀಳಿಕೆ) ವಿಧಾನ ಬಳಸುತ್ತವೆ.

ಏನಿದು ಸ್ಟಾಕ್ ಸ್ಪ್ಲಿಟ್?: ಷೇರುಪೇಟೆಗೆ ಸೇರ್ಪಡೆಯಾದ ಪ್ರತಿ ಕಂಪನಿಯೂ ತನ್ನ ಹೂಡಿಕೆದಾರರಿಗೆ ಷೇರುಗಳನ್ನು ವಿತರಿಸುತ್ತದೆ. ಹೀಗೆ ಕೊಡುವ ಪ್ರತಿ ಷೇರಿಗೂ ಒಂದು ಮುಖ ಬೆಲೆ (face value) ಇರುತ್ತದೆ. ಮುಖ ಬೆಲೆಯನ್ನು ಸರಳವಾಗಿ ಷೇರಿನ ಮೂಲ ಬೆಲೆ ಎನ್ನಬಹುದು. ಪ್ರತಿ ಕಂಪನಿಯ ಷೇರಿನ ಮೂಲ ಬೆಲೆಯೂ ಒಂದೊಂದು ರೀತಿಯಲ್ಲಿರಬಹುದು. ಒಂದು ಕಂಪನಿಯ ಷೇರಿನ ಮುಖ ಬೆಲೆ ₹ 5 ಇದ್ದರೆ ಮತ್ತೊಂದರದ್ದು ₹ 10 ಇರಬಹುದು.

ಷೇರಿನ ಮುಖ ಬೆಲೆ ವಿಭಜಿಸುವ ಪ್ರಕ್ರಿಯೆಗೆ ಸ್ಟಾಕ್ ಸ್ಪ್ಲಿಟ್ ಎನ್ನುತ್ತಾರೆ, ಉದಾಹರಣೆಗೆ ಇತ್ತೀಚೆಗೆ ಇಂಡಿಯನ್ ರೈಲ್ವೆ ಕೇಟರಿಂಗ್ ಆ್ಯಂಡ್ ಟೂರಿಸಂ ಕಾರ್ಪೊರೇಷನ್ (ಐಆರ್‌ಸಿಟಿಸಿ) ಷೇರಿನ ಮುಖ ಬೆಲೆ ಸೀಳಿಕೆಯ ಘೋಷಣೆ ಮಾಡಿದೆ. ಸದ್ಯ ಹೂಡಿಕೆದಾರ ಹೊಂದಿರುವ ₹ 10 ಮುಖಬೆಲೆಯ ಒಂದು ಷೇರಿಗೆ ಪ್ರತಿಯಾಗಿ ₹ 2 ಮುಖಬೆಲೆಯ ಐದು ಷೇರುಗಳು ಸಿಗಲಿವೆ. ಅಂದರೆ ಹತ್ತು ಐಆರ್‌ಸಿಟಿಸಿ ಷೇರುಗಳನ್ನು ಹೊಂದಿರುವವರಿಗೆ ಐವತ್ತು ಐಆರ್‌ಸಿಟಿಸಿ ಷೇರುಗಳು ಲಭಿಸಲಿವೆ. ಅಕ್ಟೋಬರ್ 29ರ ಒಳಗಾಗಿ (ರೆಕಾರ್ಡ್ ಡೇಟ್) ಐಆರ್‌ಸಿಟಿಸಿ ಷೇರುಗಳನ್ನು ಹೊಂದಿದವರಿಗೆ ಸ್ಟಾಕ್ ಸ್ಪ್ಲಿಟ್‌ನ ಲಾಭ ಸಿಗಲಿದೆ.

ಸ್ಟಾಕ್ ಸ್ಪ್ಲಿಟ್ ಮಾಡುವುದೇಕೆ?: ಕಂಪನಿಯೊಂದರ ಷೇರಿನ ಬೆಲೆ ಹೆಚ್ಚಾದಾಗ ಸಾಮಾನ್ಯ ಹೂಡಿಕೆದಾರರು ಆ ಷೇರನ್ನು ಹೆಚ್ಚು ಬೆಲೆಗೆ ಕೊಳ್ಳುವ ಮನಸ್ಸು ಮಾಡುವುದಿಲ್ಲ. ಈ ಅಂಶ ಆಧರಿಸಿ ಷೇರಿನ ಮುಖಬೆಲೆ ತಗ್ಗಿಸಲು ಅವಕಾಶ ಮಾಡಿಕೊಡಲಾಗಿದೆ. ಸ್ಟಾಕ್ ಸ್ಪ್ಲಿಟ್ ಮಾಡಿದಾಗ ಷೇರಿನ ಮುಖ ಬೆಲೆ ಇಳಿಕೆಯಾಗಿ ಷೇರುಗಳ ಸಂಖ್ಯೆ ಹೆಚ್ಚುತ್ತದೆ. ಐಆರ್‌ಸಿಟಿಸಿ ಷೇರನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ, ಸದ್ಯ ಒಂದು ಷೇರಿನ ಮುಖಬೆಲೆ ₹ 10. ಸ್ಟಾಕ್ ಸ್ಪ್ಲಿಟ್ ಆದ ಮೇಲೆ ಪ್ರತಿ ಷೇರಿನ ಮುಖಬೆಲೆ ₹ 2ಕ್ಕೆ ಇಳಿಕೆಯಾಗಿ, ಒಂದು ಷೇರು ಹೊಂದಿದ್ದವರಿಗೆ ಐದು ಷೇರುಗಳು ಸಿಗಲಿವೆ.

ಸ್ಟಾಕ್ ಸ್ಪ್ಲಿಟ್ ಆದಾಗ ಕಂಪನಿಯ ಮಾರುಕಟ್ಟೆ ಮೌಲ್ಯದಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ಷೇರು ಮಾರುಕಟ್ಟೆಯಲ್ಲಿ ಲಭ್ಯವಿರುವ ಷೇರುಗಳ ಸಂಖ್ಯೆ ಮಾತ್ರ ಹೆಚ್ಚಾಗಲಿದೆ. ಸ್ಟಾಕ್ ಸ್ಪ್ಲಿಟ್ ಆದಾಗ, ಅದಾಗಲೇ ಷೇರು ಹೊಂದಿದ್ದವರಿಗೆ ಯಾವುದೇ ಖರ್ಚಿಲ್ಲದೆ ಹೆಚ್ಚುವರಿ ಷೇರುಗಳು ಸಿಗುತ್ತವೆ. ಹೊಸದಾಗಿ ಒಳ್ಳೆಯ ಕಂಪನಿಯ ಷೇರು ಖರೀದಿಸಬೇಕು ಎನ್ನುವವರಿಗೆ ಕಡಿಮೆ ಬೆಲೆಗೆ ಷೇರುಗಳು ಲಭಿಸುತ್ತವೆ.

ಷೇರಿನ ಮುಖಬೆಲೆ ಸೀಳಿಕೆಯಿಂದ ಮಾರುಕಟ್ಟೆಯಲ್ಲಿ ಲಭ್ಯವಿರುವ ಷೇರುಗಳ ಸಂಖ್ಯೆ ಹೆಚ್ಚಾಗಿ ವಹಿವಾಟಿಗೆ ವೇಗ ದೊರಕುತ್ತದೆ. ಗಮನಿಸಿ, ಮುಖಬೆಲೆ ಸೀಳಿಕೆಯು ಬೆಲೆ ಹೆಚ್ಚಳವಾಗಿರುವ ಷೇರುಗಳಲ್ಲಿ ಮಾತ್ರವಲ್ಲದೆ, ಪೆನ್ನಿ ಸ್ಟಾಕ್‌ಗಳಲ್ಲೂ ನಡೆಯುತ್ತದೆ. ಹಾಗಾಗಿ ಉತ್ತಮ ಕಂಪನಿಗಳನ್ನು ಮಾತ್ರ ಮುಖಬೆಲೆ ಸೀಳಿಕೆ ಸಂದರ್ಭದಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

ಸೆಮಿಕಂಡಕ್ಟರ್ ಉದ್ಯಮಕ್ಕೆ ಅಗತ್ಯ ನೀತಿ: ರಾಜೀವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಲೆಕ್ಟ್ರಾನಿಕ್ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತವನ್ನು ನಾಯಕನ ಸ್ಥಾನಕ್ಕೆ ಕೊಂಡೊಯ್ಯುವ ಮಹತ್ವಾಕಾಂಕ್ಷೆಯನ್ನು ಕೇಂದ್ರ ಸರ್ಕಾರ ಹೊಂದಿದೆ. ಸೆಮಿಕಂಡಕ್ಟರ್ ತಯಾರಿಕಾ ಕಂಪನಿಗಳಿಗೆ ಹಾಗೂ ನವೋದ್ಯಮಗಳಿಗೆ ಅಗತ್ಯವಿರುವ ನೀತಿಗಳನ್ನು ರೂಪಿಸಲಾಗುತ್ತದೆ’ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರು ಉದ್ಯಮಿಗಳಿಗೆ ಭರವಸೆ ನೀಡಿದರು.

ಇಲ್ಲಿನ ಸಿ–ಡಾಕ್ ಕಚೇರಿಯಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಹಾಗೂ ನವೋದ್ಯಮಗಳ ಪ್ರತಿನಿಧಿಗಳ ಜೊತೆ ಸೋಮವಾರ ಸಂವಾದ ನಡೆಸಿದ ಸಚಿವರು, ನೀತಿಯಲ್ಲಿ ಯಾವ ಅಂಶಗಳನ್ನು ಅಳವಡಿಸಿಕೊಳ್ಳಬಹುದು ಎಂಬ ಬಗ್ಗೆ ಸಲಹೆ ನೀಡುವಂತೆ ಕೋರಿದರು.


ರಾಜೀವ್ ಚಂದ್ರಶೇಖರ್

ಸಿ–ಡಾಕ್ ಕೇಂದ್ರವು ಇಂಟರ್ನೆಟ್ ಆಫ್ ಥಿಂಗ್ಸ್ ಅಭಿವೃದ್ಧಿಗಾಗಿ ಸಿದ್ಧಪಡಿಸಿರುವ ಇಂಡಸ್ ಕಿಟ್‌ಗೆ ಚಾಲನೆ ನೀಡಿದರು. ಡ್ರೋನ್ ಸೇರಿದಂತೆ ಹಲವು ಸಾಧನಗಳಲ್ಲಿ ಈ ಕಿಟ್ ಬಳಕೆ ಮಾಡಬಹುದು ಎಂದು ಪ್ರಕಟಣೆ ಹೇಳಿದೆ.

ಇಂಟೆಲ್ ಕಂಪನಿಯ ಉಪಾಧ್ಯಕ್ಷ ಶ್ರೀನಿವಾಸಲಿಂಗಂ, ಎನ್‌ಎಕ್ಸ್‌ಪಿ ಸೆಮಿಕಂಡಕ್ಟರ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಸಂಜಯ್ ಗುಪ್ತ ಸೇರಿದಂತೆ ಉದ್ಯಮದ ಹಲವು ಪ್ರತಿನಿಧಿಗಳು ಸಂವಾದದಲ್ಲಿ ಪಾಲ್ಗೊಂಡಿದ್ದರು.

‘ಪಂಚ್’ ಆರಂಭಿಕ ಬೆಲೆ ₹ 5.49 ಲಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಮೋಟರ್ಸ್ ಕಂಪನಿಯು ತನ್ನ ಮೊದಲ ಸಬ್–ಕಾಂಪ್ಯಾಕ್ಟ್ ಎಸ್‌ಯುವಿ ‘ಪಂಚ್’ ಬಿಡುಗಡೆ ಮಾಡಿದ್ದು, ಇದರ ಎಕ್ಸ್ ಷೋರೂಂ ಬೆಲೆ ₹ 5.49 ಲಕ್ಷದಿಂದ ಆರಂಭ ಆಗುತ್ತದೆ.

ಆಲ್ಫಾ (ಅಜೈಲ್ ಲೈಟ್ ಫ್ಲೆಕ್ಸಿಬಲ್ ಅಡ್ವಾನ್ಸ್ಡ್) ಆರ್ಕಿಟೆಕ್ಚರ್ ಅಡಿ ಸಿದ್ಧಪಡಿಸಿರುವ, ಕಂಪನಿಯ ಮೊದಲ ಸಬ್ ಕಾಂಪ್ಯಾಕ್ಟ್ ಎಸ್‌ಯುವಿ ಇದು. ಈ ಎಸ್‌ಯುವಿ 1.2 ಲೀಟರ್ ಪೆಟ್ರೋಲ್ ಎಂಜಿನ್‌ನಲ್ಲಿ ಮ್ಯಾನುಯಲ್ ಮತ್ತು ಆಟೊಮ್ಯಾಟಿಕ್ ಟ್ರಾನ್ಸ್‌ಮಿಷನ್ ಆಯ್ಕೆಗಳಲ್ಲಿ ಲಭ್ಯವಿದೆ. ಪ್ರತಿ ಲೀಟರಿಗೆ ಮ್ಯಾನುಯಲ್ ಆಯ್ಕೆಯು 18.97 ಕಿಲೋ ಮೀಟರ್ ಮತ್ತು ಎಎಂಟಿ ಆವೃತ್ತಿಯು 18.82 ಕಿಲೋ ಮೀಟರ್ ಇಂಧನ ಕ್ಷಮತೆಯನ್ನು ಹೊಂದಿದೆ ಎಂದು ಕಂಪನಿಯು ತಿಳಿಸಿದೆ.

ಎಸ್‌ಯುವಿ ಗುಣಗಳನ್ನು ಹೊಂದಿರುವ, ಗಾತ್ರದಲ್ಲಿ ಸಣ್ಣದಾಗಿರುವ ವಾಹನ ಗ್ರಾಹಕರ ಬೇಡಿಕೆಯನ್ನು ಈಡೇರಿಸಲು ‘ಪಂಚ್’ ಮೂಲಕ ಸಂಪೂರ್ಣವಾಗಿ ಹೊಸ ವಿಭಾಗವನ್ನು ಸೃಷ್ಟಿಸಲಾಗಿದೆ ಎಂದು ಕಂಪನಿಯ ಪ್ರಯಾಣಿಕ ವಾಹನ ವಿಭಾಗದ ಮುಖ್ಯಸ್ಥ ಶೈಲೇಶ್ ಚಂದ್ರ ತಿಳಿಸಿದರು.

ಕೇಂದ್ರೋದ್ಯಮಗಳ ಷೇರು ವಿಕ್ರಯಕ್ಕೆ ವಿಶೇಷ ವಾಹಕ?

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ತನ್ನ ಅಧೀನದಲ್ಲಿ ಇರುವ ಕೆಲವು ಕಂಪನಿಗಳ ಷೇರು ಮಾರಾಟಕ್ಕೆ ನೆರವಾಗಲು ವಿಶೇಷ ವಾಹಕವೊಂದನ್ನು (ಎಸ್‌ಪಿವಿ) ರಚಿಸಲು ಸಂಪುಟದ ಅನುಮೋದನೆಯನ್ನು ಈ ವಾರದಲ್ಲಿ ಕೋರುವ ನಿರೀಕ್ಷೆ ಇದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಷೇರು ಮಾರಾಟದ ಮೂಲಕ ₹ 1.75 ಲಕ್ಷ ಕೋಟಿ ವರಮಾನ ಸಂಗ್ರಹಿಸುವ ಗುರಿಯನ್ನು ಕೇಂದ್ರವು ಹೊಂದಿದೆ.

ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್, ಶಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ, ಐಡಿಬಿಐ ಬ್ಯಾಂಕ್, ಬಿಇಎಂಎಲ್, ಪವನ್ ಹಂಸ, ನೀಲಾಚಲ ಇಸ್ಪಾಟ್ ನಿಗಮ ಕಂಪನಿಗಳಲ್ಲಿನ ಷೇರುಪಾಲನ್ನು ಮಾರಾಟ ಮಾಡುವ ಉದ್ದೇಶವನ್ನು ಕೇಂದ್ರವು ಹೊಂದಿದೆ. ಅಲ್ಲದೆ,

ಮುಖ್ಯಾಂಶಗಳು

- ಪ್ರಸಕ್ತ ಹಣಕಾಸು ವರ್ಷದಲ್ಲಿ ₹ 1.75 ಲಕ್ಷ ಕೋಟಿ ಸಂಗ್ರಹ ನಿರೀಕ್ಷೆ
- ಬಿಪಿಸಿಎಲ್ ಖಾಸಗೀಕರಣದ ಸಿದ್ಧತೆ

ಭಾರತೀಯ ಜೀವ ವಿಮಾ ನಿಗಮದ ಒಂದಿಷ್ಟು ಷೇರುಗಳನ್ನು ಐಪಿಒ ಮೂಲಕ ಮಾರಾಟ ಮಾಡುವ ಗುರಿಯನ್ನು ಕೂಡ ಕೇಂದ್ರ ಹೊಂದಿದೆ.

ಬಿಪಿಸಿಎಲ್‌ನಲ್ಲಿ ಇರುವ ತನ್ನ ಅಷ್ಟೂ ಷೇರುಗಳನ್ನು ಕೇಂದ್ರವು ಮಾರಾಟ ಮಾಡಲಿದೆ. ಸೆಂಟ್ರಲ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನಲ್ಲಿನ ಬಂಡವಾಳ ಹಿಂತೆಗೆತಕ್ಕೆ ಕೇಂದ್ರವು ಹಣಕಾಸಿನ ಬಿಡ್ ಸ್ವೀಕರಿಸಿದೆ. ಈ ಕುರಿತು ತೀರ್ಮಾನ ಬಾಕಿ ಇದೆ. ಏರ್ ಇಂಡಿಯಾ ಕಂಪನಿಯನ್ನು ಟಾಟಾ ಸನ್ಸ್‌ಗೆ ಮಾರಾಟ ಮಾಡಿದ ನಂತರದಲ್ಲಿ, ಷೇರು ವಿಕ್ರಯಕ್ಕೆ ಗುರುತಿಸಲಾಗಿರುವ ಸರ್ಕಾರಿ ಸ್ವಾಮ್ಯದ ಕಂಪನಿಗಳ ಷೇರು ಮೌಲ್ಯ ಏರಿಕೆ ಆಗಿದೆ.

ಸರ್ಕಾರಿ ಉದ್ದಿಮೆಗಳ ಇಲಾಖೆಯು, ಷೇರು ಮಾರಾಟಕ್ಕೆ ಗುರುತಿಸಲಾಗಿರುವ ಕಂಪನಿಗಳ ಆಸ್ತಿಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡು ಅವುಗಳನ್ನು ನಗದೀಕರಿಸಿಕೊಳ್ಳಲು ವಿಶೇಷ ವಾಹಕ ರಚಿಸುವ ಕೆಲಸದಲ್ಲಿ ತೊಡಗಿದೆ.

‘ಈ ಎಸ್‌ಪಿವಿ ಹಲವು ವರ್ಷಗಳವರೆಗೆ ಇರಲಿದೆ. ಹೆಚ್ಚುವರಿ ಜಮೀನು ಹಾಗೂ ಪ್ರಮುಖವಲ್ಲದ ಆಸ್ತಿಗಳ ನಗದೀಕರಣದಲ್ಲಿ ಇದು ಪರಿಣತಿ ಸಾಧಿಸಲಿದೆ. ಕಂಪನಿಯು ಶೀಘ್ರದಲ್ಲೇ ಶುರುವಾಗುವ ನಿರೀಕ್ಷೆ ಇದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸಂಪುಟದ ಅನುಮೋದನೆ ದೊರೆತ ನಂತರ, ಸರ್ಕಾರಿ ಉದ್ದಿಮೆಗಳ ಇಲಾಖೆಯು ಆಸ್ತಿ ನಗದೀಕರಣದ ಜವಾಬ್ದಾರಿ ವಹಿಸಿಕೊಳ್ಳಲಿದೆ.

ಹಬ್ಬದ ಋತುವಿನಲ್ಲಿ ಮಾರುಕಟ್ಟೆ ಅಭಿಯಾನಕ್ಕೆ ₹ 100 ಕೋಟಿ: ಪೇಟಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಜಿಟಲ್ ಪಾವತಿ ಸೇವೆಗಳನ್ನು ನೀಡುವ ಪೇಟಿಎಂ, ಹಬ್ಬದ ಋತುವಿನಲ್ಲಿ ಮಾರುಕಟ್ಟೆ ಪ್ರಚಾರ ಚಟುವಟಿಕೆಗಳಿಗಾಗಿ ₹ 100 ಕೋಟಿ ಮೊತ್ತವನ್ನು ಮೀಸಲಿರಿಸಿದೆ.

ದೇಶದಲ್ಲಿ ಡಿಜಿಟಲ್ ಪಾವತಿಯನ್ನು ಉತ್ತೇಜಿಸುವ ಉದ್ದೇಶದಿಂದ ಈ ಪ್ರಚಾರ ಕಾರ್ಯಕ್ರಮಗಳು ನಡೆಯಲಿದ್ದು, ಹಣ ವರ್ಗಾವಣೆ, ಪೇಟಿಎಂ ವಾಲೆಟ್ ಮತ್ತು ಪೇಟಿಎಂ ಪೋಸ್ಟ್ ಪೇಯ್ಡ್ ಸೌಲಭ್ಯಗಳ ಕುರಿತು ಅರಿವು ಮೂಡಿಸಲಿದೆ ಎಂದು ಕಂಪನಿ ಹೇಳಿದೆ.

ಅಕ್ಟೋಬರ್ 14ರಿಂದ ನವೆಂಬರ್ 14ರವರೆಗೆ ಪೇಟಿಎಂ ಕ್ಯಾಷ್‌ಬ್ಯಾಕ್ ಧಮಾಕಾ ಎಂಬ ಕ್ಯಾಷ್‌ಬ್ಯಾಕ್ ಹಬ್ಬವನ್ನು ಕಂಪನಿ ಘೋಷಿಸಿದ್ದು, ಆ್ಯಪ್ ಮೂಲಕ ಮಾಡುವ ಹಣ ವರ್ಗಾವಣೆ, ಆನ್‌ಲೈನ್, ಆಫ್‌ಲೈನ್ ಪಾವತಿಗಳು ಅಥವಾ ರೀಚಾರ್ಜ್‌ಗಳಿಗೆ ಕ್ಯಾಶ್‌ಬ್ಯಾಕ್ ಗೆಲ್ಲಬಹುದಾಗಿದೆ.

ಅ. 14ರಿಂದ ನ. 14ರವರೆಗೆ ಪ್ರತಿದಿನ 10 ಅದೃಷ್ಟಶಾಲಿ ಬಳಕೆದಾರರು ತಲಾ ₹ 1 ಲಕ್ಷದವರೆಗೆ ಕ್ಯಾಶ್‌ಬ್ಯಾಕ್ ಗೆಲ್ಲಬಹುದು. ನವೆಂಬರ್ 1ರಿಂದ 3ರ ನಡುವೆ ಬಳಕೆದಾರರು ಪ್ರತಿದಿನ ₹ 10 ಲಕ್ಷದವರೆಗೆ ಗೆಲ್ಲಬಹುದು. ಜೊತೆಗೆ ಐಫೋನ್ 13, ಟಿ20 ವಿಶ್ವಕಪ್‌ಗೆ ಟಿಕೆಟ್, ಹಲವು ಜನಪ್ರಿಯ ಬ್ರ್ಯಾಂಡ್‌ಗಳ ಶಾಪಿಂಗ್ ವೋಚರ್‌ಗಳನ್ನು ಗೆಲ್ಲುವ ಅವಕಾಶ ಪಡೆಯಲಿದ್ದಾರೆ.

‘ಹೆಚ್ಚು ಹೆಚ್ಚು ಬಳಕೆದಾರರನ್ನು ಡಿಜಿಟಲ್ ಪಾವತಿಗಳ ಮೂಲಕ ಸಬಲಗೊಳಿಸುವುದು ನಮ್ಮ ಗುರಿ’ ಎಂದು ಪೇಟಿಎಮ್ ವಕ್ತಾರರೊಬ್ಬರು ಹೇಳಿದರು.

ಷೇರುಪೇಟೆಯಲ್ಲಿ ದಾಖಲೆ ವಹಿವಾಟು

ಮುಂಬೈ (ಪಿಟಿಐ): ದೇಶದ ಷೇರು ಪೇಟೆಗಳು ಸತತ ಏಳನೇ ದಿನವೂ ಸಕಾರಾತ್ಮಕವಾಗಿ ವಹಿವಾಟು ಅಂತ್ಯಗೊಳಿಸಿದ್ದು, ಸೋಮವಾರದ ವಹಿವಾಟಿನಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡವು.

ಐ.ಟಿ., ಬ್ಯಾಂಕ್ ಮತ್ತು ಲೋಹ ವಲಯದ ಷೇರುಗಳು ಉತ್ತಮ ಖರೀದಿ ವಹಿವಾಟಿಗೆ ಒಳಗಾದವು. ಆದರೆ, ಔಷಧ ಮತ್ತು ವಾಹನ ವಲಯದ ಷೇರುಗಳು ಲಾಭ ಗಳಿಕೆಯ ಒತ್ತಡಕ್ಕೆ ಒಳಗಾಗಿದ್ದರಿಂದ ಸೂಚ್ಯಂಕಗಳ ಓಟ ತುಸು ತಗ್ಗಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ (ಸೆನ್ಸೆಕ್ಸ್) 459 ಅಂಶಗಳ ಜಿಗಿತ ಕಂಡು 61,765 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ದಿನದ ವಹಿವಾಟಿನ ಒಂದು ಹಂತದಲ್ಲಿ 61,963 ಅಂಶಗಳ ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 138 ಅಂಶ ಹೆಚ್ಚಾಗಿ ಗರಿಷ್ಠ ಮಟ್ಟವಾದ 18,477 ಅಂಶಗಳಿಗೆ ಏರಿಕೆ ಆಯಿತು. ಮಧ್ಯಂತರ ವಹಿವಾಟಿನಲ್ಲಿ 18,543 ಅಂಶಗಳ ದಾಖಲೆ ಮಟ್ಟ ತಲುಪಿತ್ತು.

ದಿನದ ವಹಿವಾಟಿನಲ್ಲಿ ಇನ್ಫೊಸಿಸ್ ಷೇರು ಮೌಲ್ಯ ಶೇಕಡ 4.47ರಷ್ಟು ಗರಿಷ್ಠ ಏರಿಕೆ ಕಂಡಿತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾತೈಲ ದರವು ಶೇ 0.82ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 85.56 ಡಾಲರ್‌ಗಳಿಗೆ ತಲುಪಿದೆ.

ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 9 ಪೈಸೆ ಇಳಿಕೆ ಆಗಿ ಒಂದು ಡಾಲರ್‌ಗೆ ₹ 75.35ರಂತೆ ವಿನಿಮಯಗೊಂಡಿತು.

ಮುಂಬೈ ಧಾರಣೆ

ಶೇಂಗಾ

18-10-2021

ಜಾವಾ 70/80(ಹೊಸ)	10400-10450
ಜಾವಾ 80/90(ಹೊಸ)	10100-10150
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1440 (1450)
ಒಂದು ವಾರದ ಡೆಲಿವರಿ	1435 (1445)
ಸೋಯಾ ಕಚ್ಚಾ	1247 (1230)
ಪಾಮ್ ವಾರದ ಡೆಲಿವರಿ	1198 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1265 (1260)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ

47,250 (47,300)

ಬೆಳ್ಳಿ ಕೆ.ಜಿ 63,050 (63,200)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	415
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-50000
ಕುಮಟ	
ಚಿಪ್ಪು	34009-39689
ಕೋಕ	17899-31699
ಫ್ಯಾಕ್ಟರಿ	12170-20699
ಹೊಸಚಾಲಿ	43109-46099
ಪುತ್ತೂರು	
ಹೊಸತು	35500-50000
ಸಿದ್ದಾಪುರ	
ಬಿಳಿಗೋಟು	30888-40699
ಚಾಲಿ	42808-46599
ಕೋಕ	23099-35109
ಕೆಂಪುಗೋಟು	26099-33109
ರಾಶಿ	43809-46109
ತಟ್ಟಿಬೆಟ್ಟೆ	36699-42809
ಶಿರಸಿ	
ಬೆಟ್ಟೆ	35109-44021
ಬಿಳಿಗೋಟು	15299-42299
ಚಾಲಿ	35009-47099
ರಾಶಿ	40999-47399
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	47399-48909
ಗೊರಬಲು	17169-36099
ರಾಶಿ	42119-46032
ಸರಕು	48609-75896
ರಾಶಿ	44099-45209
ಸಾಗರ	
ಬಿಳಿಗೋಟು	21119-38599
ಚಾಲಿ	40899-45333
ಕೋಕ	30499-35199
ಕೆಂಪುಗೋಟು	25619-35299
ರಾಶಿ	38870-46570
ಸಿಪ್ಪೆಗೋಟು	11219-23603
ರಾಮನಗರ ರೇಷ್ಮೆ	
ಮಿಶ್ರತಳಿ	291-513
ದ್ವಿತಳಿ	307-545

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13400	13000	13600	203.40 ಸೆಂಟ್ಸ್
ಎಸಿ	6325	5000	5550	
ಆರ್‌ಪಿ	6000	6000	6300	ಲಂಡನ್
ಆರ್‌ಸಿ	3510	3450	3665	2110 ಡಾಲರ್ಸ್

ಡೆನ್ಮಾರ್ಕ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ: ಚಿರಾಗ್–ಸಾತ್ವಿಕ್ ಮೇಲೆ ನಿರೀಕ್ಷೆ

ವಿರಾಮದ ನಂತರ ಸಿಂಧು ಕಣಕ್ಕೆ

ಒಡೆನ್ಸ್ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಎರಡು ಪದಕದ ಸಾಧನೆ ಮಾಡಿರುವ ಹಾಲಿ ವಿಶ್ವ ಚಾಂಪಿಯನ್ ಪಿ.ವಿ.ಸಿಂಧು ಅವರು ವಿರಾಮದ ನಂತರ ಕಣಕ್ಕೆ ಇಳಿಯಲು ಸಜ್ಜಾಗಿದ್ದಾರೆ. ಮಂಗಳವಾರ ಆರಂಭವಾಗಲಿರುವ ಡೆನ್ಮಾರ್ಕ್ ಓಪನ್ ವಿಶ್ವ ಬ್ಯಾಡ್ಮಿಂಟನ್ ಟೂರ್‌ನಲ್ಲಿ ಅವರು ಸೆಣಸಲಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ನಂತರ ಸಿಂಧು ವಿರಾಮ ಬಯಸಿದ್ದರು. ಸತತ ಪಂದ್ಯಗಳಿಂದಾಗಿ ಬಸವಳಿದಿದ್ದ ಕಾರಣ ವಿಶ್ರಾಂತಿ ಪಡೆದಿದ್ದರು. ಕೋವಿಡ್‌ನಿಂದಾಗಿ ಸ್ಥಗಿತಗೊಂಡಿದ್ದ ಬಿಡಬ್ಲ್ಯುಎಫ್ ವಿಶ್ವ ಟೂರ್ ಡೆನ್ಮಾರ್ಕ್ ಓಪನ್ ಮೂಲಕ ಪುನರಾರಂಭಗೊಳ್ಳುತ್ತಿದ್ದು ಸಿಂಧು ಗೆಲುವಿನ ಓಟದ ಆರಂಭಿಸುವ ನಿರೀಕ್ಷೆಯಲ್ಲಿದ್ದಾರೆ.

ಗಾಯದ ಸಮಸ್ಯೆಯಿಂದ ಚೇತರಿಸಿಕೊಂಡಿರುವ ಸೈನಾ ನೆಹ್ವಾಲ್ ಆಡುತ್ತಿರುವುದರಿಂದ ಸ್ಪರ್ಧಾ ಕಣ ರಂಗೇರಿದೆ. ಊಬರ್ ಕಪ್ ಫೈನಲ್ಸ್‌ನಲ್ಲಿ ನೋವಿನಿಂದ ಬಳಲಿದ ಸೈನಾ ಮೊದಲ ಪಂದ್ಯದ ಅರ್ಧದಲ್ಲೇ ವಾಪಸಾಗಿದ್ದರು.


ಪಿ.ವಿ.ಸಿಂಧು

ನಾಲ್ಕನೇ ಶ್ರೇಯಾಂಕ ಸಿಂಧು ಮೊದಲ ಪಂದ್ಯದಲ್ಲಿ ಟರ್ಕಿಯ ನೆಸ್ಲಿಹನ್ ಯಿಗಿತ್ ವಿರುದ್ಧ ಸೆಣಸಲಿದ್ದು ಸೈನಾಗೆ ಜಪಾನ್‌ನ ಅಯಾ ಒಹೊರಿ ಮೊದಲ ಎದುರಾಳಿ. ಮೊದಲ ಪಂದ್ಯದಲ್ಲಿ ಗೆದ್ದರೆ ನಂತರ ಸಿಂಧು ನಂತರ ಥಾಯ್ಲೆಂಡ್‌ನ ಬುಸನನ್ ಒಂಗ್‌ಬಂಗ್ರುಂಫನ್ ಅವರನ್ನು ಎದುರಿಸುವರು.

ಚಿರಾಗ್-ಸಾತ್ವಿಕ್ ಮೇಲೆ ಕಣ್ಣು: ಡಬಲ್ಸ್‌ನಲ್ಲಿ ಎಲ್ಲರ ಕಣ್ಣು ಭಾರತದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮೇಲೆ ಬಿದ್ದಿದೆ. ಏಳನೇ ಶ್ರೇಯಾಂಕದ ಭಾರತದ ಜೋಡಿ ಇಂಗ್ಲೆಂಡ್‌ನ ಕಲುಂ ಹೆಮಿಂಗ್ ಮತ್ತು ಸ್ಟೀವನ್ ಸ್ಟಾಲ್‌ವುಡ್ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ. ಚಿರಾಗ್ ಮತ್ತು ಸಾತ್ವಿಕ್ ಈಚೆಗೆ ಉತ್ತಮ ಲಯದಲ್ಲಿರುವುದರಿಂದ ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರರು ಎನಿಸಿಕೊಂಡಿದ್ದಾರೆ. ಭಾನುವಾರ ಮುಕ್ತಾಯಗೊಂಡ ಡಚ್ ಓಪನ್‌ನಲ್ಲಿ ಮಿಂಚಿರುವ ಯುವ ಆಟಗಾರ ಲಕ್ಷ್ಯ ಸೇನ್ ಮೊದಲ ಪಂದ್ಯದಲ್ಲಿ ಭಾರತದವರೇ ಆದ ಸೌರಭ್ ವರ್ಮಾ ಎದುರು ಸೆಣಸುವರು. ಅರ್ಹತಾ ಸುತ್ತಿನ ಏಕೈಕ ಪಂದ್ಯ ಸೋತ ಕಾರಣ ಲಕ್ಷ್ಯ ಸೇನ್ ಅವರಿಗೆ ಸುದಿರ್‌ಮನ್ ಕಪ್ ಮತ್ತು ಥಾಮಸ್ ಕಪ್‌ನಲ್ಲಿ ಆಡಲು ಸಾಧ್ಯವಾಗಲಿಲ್ಲ. ಮೊದಲ ಸುತ್ತಿನಲ್ಲಿ ಕಿದಂಬಿ ಶ್ರೀಕಾಂತ್ ಮತ್ತು ಬಿ.ಸಾಯಿ ಪ್ರಣೀತ್ ಕೂಡ ಮುಖಾಮುಖಿಯಾಗಲಿದ್ದಾರೆ.

ಸಮೀರ್ ವರ್ಮಾ, ಎಚ್. ಪ್ರಣಯ್, ಪರುಪಳ್ಳಿ ಕಶ್ಯಪ್, ಎಂ.ಆರ್. ಅರ್ಜುನ್, ಧ್ರುವ ಕಪಿಲ, ಮನು ಅತ್ರಿ, ಸುಮಿತ್ ರೆಡ್ಡಿ, ಎನ್.ಸಿಕ್ಕಿ ರೆಡ್ಡಿ, ಅಶ್ವಿನಿ ಪೊನ್ನಪ್ಪ, ಮೇಘನಾ ಜಕ್ಕಂಪುಡಿ, ರಾಮ್ ಪೂರ್ವಿಶಾ ಮುಂತಾದವರು ಕಣದಲ್ಲಿರುವ ಭಾರತದ ಇತರರು.

ಡಚ್ ಓಪನ್: ಲಕ್ಷ್ಯ ಸೇನ್ ರನ್ನರ್ ಅಪ್

ಅಲ್ಮೆರ್, ನೆದರ್ಲೆಂಡ್ಸ್ (ಪಿಟಿಐ): ಹಾಲಿ ಚಾಂಪಿಯನ್, ಭಾರತದ ಲಕ್ಷ್ಯ ಸೇನ್ ಅವರು ಡಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ರನ್ನರ್ ಅಪ್ ಆಗಿದ್ದಾರೆ.

ಭಾನುವಾರ ನಡೆದ ಪುರುಷರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಅವರು 12-21, 16-21ರಿಂದ ಸಿಂಗಪುರದ ಲೋಹ್ ಕೀನ್ ಯೆವ್ ಎದುರು ಮಣಿದರು. ಕೇವಲ 36 ನಿಮಿಷಗಳಲ್ಲಿ ಈ ಪಂದ್ಯ ಮುಗಿಯಿತು.


20 ವರ್ಷದ ಲಕ್ಷ್ಯ, 2019ರ ಆವೃತ್ತಿಯಲ್ಲಿ ಚಾಂಪಿಯನ್ ಆಗಿದ್ದರು. 2020ರ ಟೂರ್ನಿಯನ್ನು ಕೋವಿಡ್ ಕಾರಣ ರದ್ದು ಮಾಡಲಾಗಿತ್ತು.

ಬಂದುಲ ವರ್ಣಪುರ ನಿಧನ

ಕೊಲಂಬೊ (ಎಎಫ್‌ಪಿ): ಶ್ರೀಲಂಕಾ ಟೆಸ್ಟ್ ಕ್ರಿಕೆಟ್ ತಂಡದ ಮೊದಲ ನಾಯಕ ಬಂದುಲಾ ವರ್ಣಪುರ (68) ಹೃದಯಾಘಾತದಿಂದ ಸೋಮವಾರ ನಿಧನರಾದರು.

ಇಂಗ್ಲೆಂಡ್ ವಿರುದ್ಧ 1982ರಲ್ಲಿ ನಡೆದಿದ್ದ ಮೊದಲ ಟೆಸ್ಟ್ ಪಂದ್ಯದಲ್ಲಿ ತಂಡವನ್ನು ಅವರು ಮುನ್ನಡೆಸಿದ್ದರು. ಅವರು ಆ ಪಂದ್ಯದಲ್ಲಿ 38 ರನ್ ಗಳಿಸಿದ್ದರು.

ಸ್ಥಳೀಯ ಆಟಗಾರರ ತಂಡವೊಂದನ್ನು ದಕ್ಷಿಣ ಆಫ್ರಿಕಕ್ಕೆ ಕರೆದುಕೊಂಡು ಹೋದ ಕಾರಣ ಅವರ ಮೇಲೆ 25 ವರ್ಷಗಳ ನಿಷೇಧ ಶಿಕ್ಷೆ ಹೇರಲಾಗಿತ್ತು. ಹೀಗಾಗಿ ಅವರ ವೃತ್ತಿ ಜೀವನ ಕೇವಲ ನಾಲ್ಕು ಟೆಸ್ಟ್‌ಗಳಿಗೆ ಸೀಮಿತವಾಯಿತು. 1990ರಲ್ಲಿ ನಿಷೇಧವನ್ನು ರದ್ದು ಮಾಡಿ ಕೋಚಿಂಗ್‌ನಲ್ಲಿ ತೊಡಗಿಸಿಕೊಳ್ಳಲು ಅವರಿಗೆ ಅನುಮತಿ ನೀಡಲಾಗಿತ್ತು.


ಬಂದುಲಾ – ಎಎಫ್‌ಪಿ ಚಿತ್ರ

1500ಕ್ಕೂ ಅಧಿಕ ಈಜುಪಟುಗಳು ಭಾಗಿ; ಬೆಂಗಳೂರಿನ ಮೂರು ಕಡೆ ಸ್ಪರ್ಧೆ

ಇಂದಿನಿಂದ ಈಜು ಚಾಂಪಿಯನ್‌ಷಿಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ರಿಧಿಮಾ ವೀರೇಂದ್ರ ಕುಮಾರ್, ನೀನಾ ವೆಂಕಟೇಶ್, ಸಾನ್ವಿ ರಾವ್ ಶೋನ್ ಗಂಗೂಲಿ, ವಿದಿತ್ ಎಸ್. ಶಂಕರ್ ಸೇರಿದಂತೆ ಪ್ರಮುಖರು ಈಜುಕೊಳದಲ್ಲಿ ಪದಕಗಳ ಹೊಳಪು ಮೂಡಿಸಲು ಸಜ್ಜಾಗಿದ್ದಾರೆ. ರಾಷ್ಟ್ರೀಯ ಸಬ್‌ಜೂನಿಯರ್, ಜೂನಿಯರ್ ಈಜು ಚಾಂಪಿಯನ್‌ಷಿಪ್‌ಗಳು ಮಂಗಳವಾರ ಇಲ್ಲಿ ಆರಂಭವಾಗಲಿವೆ.

ಈ ಕುರಿತು ಬಸವನಗುಡಿ ಈಜು ಕೇಂದ್ರದಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಭಾರತ ಈಜು ಫೆಡರೇಷನ್‌ನ (ಎಸ್‌ಎಫ್‌ಐ) ಪದಾಧಿಕಾರಿಗಳು ಈ ವಿಷಯ ತಿಳಿಸಿದರು.

ಐದು ದಿನಗಳ ಕಾಲ ನಡೆಯುವ ಈ ಚಾಂಪಿಯನ್‌ಷಿಪ್‌ಗಳಿಗೆ ನವೀಕೃತ ಬಸವನಗುಡಿ ಈಜು ಕೇಂದ್ರ (ಈಜು), ಕೆನ್ಸಿಂಗ್ಟನ್ ಈಜು ಕೊಳ, ಹಲಸೂರು (ಡೈವಿಂಗ್) ಮತ್ತು ನೆಟ್ಟಕಲ್ಲಪ್ಪ ಈಜು ಕೇಂದ್ರ (ವಾಟರ್‌ಪೋಲೊ) ಆತಿಥ್ಯ ವಹಿಸಲಿವೆ. ಜನವರಿಯಲ್ಲಿ ದಕ್ಷಿಣ ಆಫ್ರಿಕಾ ರಾಷ್ಟ್ರೀಯ ಈಜು ತಂಡದೊಂದಿಗೆ ತರಬೇತಿಗೆ 10 ಮಂದಿಯನ್ನು ಆಯ್ಕೆ ಮಾಡಲೂ ಈ ಚಾಂಪಿಯನ್‌ಷಿಪ್‌ಗಳನ್ನು ಟ್ರಯಲ್ಸ್ ಆಗಿ ನಡೆಸಲಾಗುತ್ತಿದೆ.

ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಒಟ್ಟು 1500ಕ್ಕೂ ಹೆಚ್ಚು ಈಜು ಪಟುಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಇದೇ 26ರಿಂದ ರಾಷ್ಟ್ರೀಯ ಸೀನಿಯರ್ ಚಾಂಪಿಯನ್‌ಷಿಪ್ ಕೂಡ ನಡೆಯಲಿದೆ.

ಸೀನಿಯರ್ ವಿಭಾಗದಲ್ಲಿ ಎರಡು ಬಾರಿಯ ಒಲಿಂಪಿಯನ್ ಕೇರಳದ ಸಾಜನ್ ಪ್ರಕಾಶ್, ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಕರ್ನಾಟಕದ ಶ್ರೀಹರಿ ನಟರಾಜ್ ಮಧ್ಯೆ ಪೈಪೋಟಿ ನಡೆಯುವ ನಿರೀಕ್ಷೆಯಿದೆ. ಮಹಿಳಾ ವಿಭಾಗದಲ್ಲಿ ಗುಜರಾತ್‌ನ ಮಾನಾ ಪಟೇಲ್ (ಟೋಕಿಯೊ ಕೂಟಕ್ಕೆ ಅರ್ಹತೆ ಗಳಿಸಿದ್ದರು) ಕೂಡ ಸಾಮರ್ಥ್ಯ ತೋರಲು ಸಜ್ಜಾಗಿದ್ದಾರೆ.

‘ಕೋವಿಡ್‌ನಿಂದಾಗಿ ಸ್ಥಗಿತಗೊಂಡಿದ್ದ ಈಜು ಚಟುವಟಿಕೆಗಳು ಪುನರಾರಂಭಗೊಂಡಿದ್ದು, ರಾಷ್ಟ್ರೀಯ ಚಾಂಪಿಯನ್‌ಷಿಪ್ ನಡೆಯುತ್ತಿರುವುದು ಸಂತಸದ ಸಂಗತಿ. ಈ ಚಾಂಪಿಯನ್‌ಷಿಪ್‌ಗೆ ವೇಳಾಪಟ್ಟಿ ಪ್ರಕಟಿಸುವ ಮೊದಲು ಎಲ್ಲಾ ರಾಜ್ಯಗಳಲ್ಲಿ ಸ್ಪರ್ಧಾತ್ಮಕ ಈಜಿಗೆ ಅವಕಾಶ ಮಾಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕಿತ್ತು. ಎಲ್ಲ ರಾಜ್ಯ ಸಂಸ್ಥೆಗಳ ಒಮ್ಮತದ ಮೇರೆಗೆ ಪ್ರತಿಷ್ಠಿತ ಚಾಂಪಿಯನ್‌ಷಿಪ್ ಆಯೋಜಿಸಿದ್ದೇವೆ‘ ಎಂದು ಎಸ್‌ಎಫ್‌ಐ ಪ್ರಧಾನ ಕಾರ್ಯದರ್ಶಿ ಮೋನಲ್ ಚೋಕ್ಸಿ ಹೇಳಿದರು.

ಕರ್ನಾಟಕ ಈಜು ಸಂಸ್ಥೆಯ (ಕೆಎಸ್‌ಎ) ಅಧ್ಯಕ್ಷ ಗೋಪಾಲ್ ಬಿ. ಹೊಸೂರು ಮಾತನಾಡಿ ‘ಕೋವಿಡ್‌ನಿಂದಾಗಿ ಸುಮಾರು ಎರಡು ವರ್ಷಗಳಿಂದ ಸ್ಪರ್ಧಾತ್ಮಕ ಈಜು ಕೂಟಗಳು ಸ್ಥಗಿತಗೊಂಡಿದ್ದವು. ರಾಷ್ಟ್ರೀಯ ಚಾಂಪಿಯನ್‌ಷಿಪ್ ಆಯೋಜನೆಗೆ ಎಸ್‌ಎಫ್‌ಐ ಸಂಪರ್ಕಿಸಿದಾಗ ನಮ್ಮ ಆಸಕ್ತಿಯನ್ನು ತಿಳಿಸಿದೆವು. ಕೋವಿಡ್ ಮಾರ್ಗಸೂಚಿಗಳನ್ನು ಅನುಸರಿಸುವುದರೊಂದಿಗೆ ಚಾಂಪಿಯನ್‌ಷಿಪ್‌ಅನ್ನು ಸುರಕ್ಷಿತವಾಗಿ ಆಯೋಜಿಸಲಾಗುವುದು‘ ಎಂದರು.

ಎಸ್‌ಎಫ್‌ಐ ಕಾರ್ಯಕಾರಿ ನಿರ್ದೇಶಕ ವೀರೇಂದ್ ನಾನಾವತಿ, ಕೆಎಸ್‌ಎ ಪ್ರಧಾನ ಕಾರ್ಯದರ್ಶಿ ಸತೀಶ್ ಕುಮಾರ್ ಪತ್ರಿಕಾಗೋಷ್ಠಿಯಲ್ಲಿದ್ದರು.

ಆರ್‌ಟಿ–ಪಿಸಿಆರ್ ವರದಿ ಅಗತ್ಯ

ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ಭಾಗವಹಿಸುವ ಈಜುಪಟುಗಳು, ಕೋಚ್‌ಗಳು ಹಾಗೂ ತಾಂತ್ರಿಕ ಅಧಿಕಾರಿಗಳು ಕೋವಿಡ್‌ಗೆ ಸಂಬಂಧಿಸಿದ ಆರ್‌ಟಿ–ಪಿಸಿಆರ್ ಪರೀಕ್ಷಾ ‘ನೆಗೆಟಿವ್’ ವರದಿ ಸಲ್ಲಿಸಬೇಕಾಗುತ್ತದೆ. ಅಲ್ಲದೆ ಕೇಂದ್ರ ಗೃಹ ಸಚಿವಾಲಯ, ರಾಜ್ಯ ಸರ್ಕಾರಗಳು ಹಾಗೂ ಎಸ್‌ಎಫ್‌ಐ ರೂಪಿಸಿರುವ ಎಲ್ಲ ಮಾರ್ಗಸೂಚಿಗಳನ್ನು ಪಾಲಿಸಬೇಕಾಗುತ್ತದೆ. ನಿಯಮಗಳ ಅನುಷ್ಠಾನಕ್ಕಾಗಿ ಆಯೋಜನಾ ಸಮಿತಿಯು ಕಾರ್ಯಪಡೆಯನ್ನೂ ರಚಿಸಿದೆ.


ರಿಧಿಮಾ ವೀರೇಂದ್ರ ಕುಮಾರ್– ಪ್ರಜಾವಾಣಿ ಸಂಗ್ರಹ ಚಿತ್ರ


ಪ್ರಶಸ್ತಿಯೊಂದಿಗೆ ಭವಾನಿ ದೇವಿ– ಟ್ವಿಟರ್ ಚಿತ್ರ

ಫೆನ್ಸಿಂಗ್ ಟೂರ್ನಿ: ಭವಾನಿಗೆ ಪ್ರಶಸ್ತಿ

ನವದೆಹಲಿ (ಪಿಟಿಐ): ಭಾರತದ ಫೆನ್ಸಿಂಗ್ ಪಟು ಭವಾನಿ ದೇವಿ ಅವರು ಫ್ರಾನ್ಸ್‌ನಲ್ಲಿ ನಡೆದ ಚಾರ್ಲ್‌ವಿಲ್ಲೆ ರಾಷ್ಟ್ರೀಯ ಸ್ಪರ್ಧೆಯ ಸೇಬರ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

ಈ ಕುರಿತು 28 ವರ್ಷದ ಭವಾನಿ ಅವರು ಟ್ವೀಟ್ ಮಾಡಿ ವಿಷಯ ತಿಳಿಸಿದ್ದಾರೆ.

‘ಚಾರ್ಲ್‌ವಿಲ್ಲೆ ಸ್ಪರ್ಧೆಯ ಮಹಿಳೆಯರ ವೈಯಕ್ತಿಕ ಸೇಬರ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದೇನೆ. ಕೋಚ್ ಕ್ರಿಸ್ಟಿಯನ್ ಬಾವುರ್, ಅರ್ನಾಡ್ ಶೀಡರ್ ಮತ್ತು ತಂಡದ ಎಲ್ಲರಿಗೂ ಅಭಿನಂದನೆಗಳು‘ ಎಂದು ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವ ಮೂಲಕ ಈ ಕ್ರೀಡೆಯಲ್ಲಿ ಅರ್ಹತೆ ಗಳಿಸಿದ ಭಾರತದ ಮೊದಲ ಮಹಿಳೆ ಎನಿಸಿಕೊಂಡಿದ್ದರು ಭವಾನಿ. ಒಲಿಂಪಿಕ್ಸ್‌ನ ಮೊದಲ ಸುತ್ತಿನಲ್ಲಿ ಜಯಿಸಿದ್ದ ಅವರು ಎರಡನೇ ಸುತ್ತಿನಲ್ಲಿ ನಿರಾಸೆ ಅನುಭವಿಸಿದ್ದರು.

ಸದ್ಯ ಅವರು ವಿಶ್ವ ರ್‍ಯಾಂಕಿಂಗ್‌ನಲ್ಲಿ 50ನೇ ಸ್ಥಾನದಲ್ಲಿದ್ದಾರೆ. 2022ರ ಏಷ್ಯನ್ ಗೇಮ್ಸ್‌ನಲ್ಲಿ ಉತ್ತಮ ಸಾಮರ್ಥ್ಯ ತೋರಲು ಸಜ್ಜಾಗುತ್ತಿದ್ದಾರೆ.